"ದುಡಿಯುವ ಮಹಿಳೆ"

(ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ನಿಬಂಧ)

<u>ಸಂಶೋಧಕ</u>

ಪಿ. ರಾಧಾಮಣಿ

ಕನ್ನಡ ಎಂ.ಫಿಲ್. ವಿದ್ಯಾರ್ಥಿ

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ). ಮಂಡ್ಯ.

<u>ಮಾರ್ಗದರ್ಶಕರು</u>

ಡಾ. ಹಾ. ತಿ. ಕೃಷ್ಣೇಗೌಡ

ಕಾರ್ಯನಿರ್ವಾಹಕ ಸಂಪಾದಕ ಮಂಡಳಿ

ಕನ್ನಡ ವಿಶ್ವಕೋಶ ವಿಭಾಗ,

ಮಾನಸಗಂಗೋತ್ರಿ, ಮೈಸೂರು.

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ). ಮಂಡ್ಯ.

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-08

514

"ದುಡಿಯುವ ಮಹಿಳೆ"

(ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ನಿಬಂಧ)

<u>ಸಂಶೋಧಕ</u>

ಪಿ. ರಾಧಾಮಣಿ

ಕನ್ನಡ ಎಂ.ಫಿಲ್. ವಿದ್ಯಾರ್ಥಿ

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

<u>ಮಾರ್ಗದರ್ಶಕರು</u>

ಡಾ. ಹಾ. ತಿ. ಕೃಷ್ಣೇಗೌಡ

ಕಾರ್ಯನಿರ್ವಾಹಕ ಸಂಪಾದಕ ಮಂಡಳಿ

ಕನ್ನಡ ವಿಶ್ವಕೋಶ ವಿಭಾಗ,

ಮಾನಸಗಂಗೋತ್ರಿ, ಮೈಸೂರು.

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-08

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಎಂ.ಫಿಲ್.ಪದವಿಯ ವಿದ್ಯಾರ್ಥಿಯಾದ **ಪಿ.ರಾಧಾಮಣಿ** ಅವರು ನನ್ನ ಮಾರ್ಗದರ್ಶನದಲ್ಲಿ **"ದುಡಿಯುವ ಮಹಿಳೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ, ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇವೆ.

ದಿನಾಂಕ: 13. ೦೯. ೨೦೦೮
ಸ್ಥಳ : ಮೈಸೂರು

ಮಾರ್ಗದರ್ಶಕರು
ಡಾ||ಹಾ.ತಿ.ಕೃಷ್ಣೇಗೌಡ
ಕಾರ್ಯನಿರ್ವಾಹಕ ಸಂಪಾದಕ ಮಂಡಳಿ
ಕನ್ನಡ ವಿಶ್ವಕೋಶ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು.

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007-08 ನೇ ಸಾಲಿಗೆ **ಕನ್ನಡ ಎಂ.ಫಿಲ್.** ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ದುಡಿಯುವ ಮಹಿಳೆ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು **ಡಾ.ಹಾ.ತಿ.ಕೃಷ್ಣೇಗೌಡ**, ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲೀ ನಿಬಂಧದ ಅಧ್ಯಾಯಗಳನ್ನಾಗಲೀ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯವು ನೀಡುವ ಕನ್ನಡ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ರಾಧಾಮಣಿ. ಪಿ.

(ಪಿ. ರಾಧಾಮಣಿ)
ನಿಬಂಧಕಾರರು
ಕರ್ನಾಟಕ ಸಂಘ (ರಿ), ಮಂಡ್ಯ.
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿ. ವಿ. ಮಾನ್ಯತೆ ಪಡೆದಿದೆ.)
2007-08.

ದಿನಾಂಕ : 10-09-2008
ಸ್ಥಳ : ಮಂಡ್ಯ.

"ದುಡಿಯುವ ಮಹಿಳೆ"

ಪರಿವಿಡಿ

ಪೀಠಿಕೆ	-		೧-೭
ಅಧ್ಯಾಯ-೧	-	ದುಡಿಯುವ ಮಹಿಳೆ ಅರ್ಥ, ವ್ಯಾಪ್ತಿ	೮-೨೨
ಅಧ್ಯಾಯ-೨	-	ಸಂಘಟಿತ ವಲಯ ಮತ್ತು ಅಸಂಘಟಿತ ವಲಯದಲ್ಲಿ ಮಹಿಳೆಯ ಪಾತ್ರ.	೨೩-೩೨
ಅಧ್ಯಾಯ-೩	-	ಮಹಿಳೆಯರು ದುಡಿಯುವ ಸ್ಥಳಗಳು	೩೩-೪೧
ಅಧ್ಯಾಯ-೪	-	ದುಡಿಯುವ ಮಹಿಳೆಯ ಸಮಸ್ಯೆಗಳು	೪೨-೫೦
ಅಧ್ಯಾಯ-೫	-	ದುಡಿಯುವ ಮಹಿಳೆಯ ಸಮಸ್ಯೆಗಳಿಗೆ ಪರಿಹಾರಗಳು.	೫೧-೭೧
ಉಪಸಂಹಾರ	-		೭೨-೭೯
ಅನುಬಂಧ	-		೮೦
ಗ್ರಂಥಋಣ	-		೮೧

ಪೀಠಿಕೆ

ಮಹಿಳಾ ಅಧ್ಯಯನ:

ಮಹಿಳಾ ಅಧ್ಯಯನವು ಒಂದು ಅಂತರ್ ಶಿಸ್ತೀಯ ವಿಷಯವಾಗಿದೆ. ೬೦ ರ ದಶಕದಲ್ಲಿ ಅಮೇರಿಕಾದಲ್ಲಿ ಇದು ಹೆಚ್ಚು ಪ್ರಚಲಿತವಾಯ್ತು. ಇಂದು ಮಹಿಳಾ ಅಧ್ಯಯನವು ಕ್ಷೇತ್ರ ವಿಪುಲವಾಗಿ ಬೆಳೆಯುತ್ತಿದೆ. ಮಹಿಳಾ ಅಧ್ಯಯನದ ಹಿಂದಿರುವ ಚಾಲಕಶಕ್ತಿ ಸ್ತ್ರೀವಾದ ಮಹಿಳೆಯರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವರ ಬೇಡಿಕೆ ಆಸಕ್ತಿಗಳನ್ನು ವ್ಯಕ್ತಿ ಎತ್ತಿ ಸ್ವಾತಂತ್ರ್ಯವನ್ನು ಹಿಡಿಯುವ ಮಹಿಳಾಪರ ಹೋರಾಟವೇ ಸ್ತ್ರೀವಾದ.

ಮಹಿಳಾ ಅಧ್ಯಯನ ಎಂದರೆ ಪುರುಷ ನಿರಾಕರಣೆ, ಪುರುಷ ದ್ವೇಷವಲ್ಲ. ಅದು ಪುರುಷನ ಅಧಿಕಾರಕ್ಕೆ ಪ್ರತಿಯಾಗಿ ಹೆಣ್ಣಿನ ಅಧಿಕಾರವನ್ನು ಪರ್ಯಾಯವಾಗಿ ರೂಪಿಸುವತ್ತ ಮಾತ್ರ ಆಸಕ್ತಿ ಹೊಂದಿಲ್ಲ. ಅದಕ್ಕೆ ಬದಲಾಗಿ ಹೆಣ್ಣಿನಲ್ಲೂ ಇರುವ 'ಅಧಿಕಾರ' ಕಲ್ಪನೆಯನ್ನು ಹೊರಗೆಡಹುವುದು, ಅಂತಹ ಒಂದು ಹೊಸ ಸ್ಥಿತಿಯನ್ನು ಸಮಾಜದಲ್ಲಿ ನಿರ್ಮಾಣ ಮಾಡುವ ಆಸಕ್ತಿಯನ್ನು ತೋರುತ್ತದೆ. ಸ್ತ್ರೀವಾದಿ ತಾತ್ವಕತೆಯನ್ನು ಇದರ ಬೆಂಬಲಕ್ಕಿಟ್ಟುಕೊಂಡು ಹೆಣ್ಣು ಹೆಣ್ಣಾಗಿರುವ ಕಾರಣದಿಂದಲೇ ಅವಳು ಅನುಭವಿಸಬಹುದಾದ ವಿಶಿಷ್ಟ ಅನುಭವಗಳು, ಅವಳು ಎದುರಿಸುತ್ತಿರುವ ಸಮಸ್ಯೆಗಳು, ಸಂದರ್ಭಗಳನ್ನು ಕುರಿತಂತೆ ಚಿಂತಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಹಿಳೆಯರ ಪರವಾಗಿ ತೀರ್ಮಾನಗಳು, ಪರಿಹಾರಗಳನ್ನು ಕೈಗೊಂಡು ಅವಳು ಅಬಲೆಯಲ್ಲ, ಸಬಲೆ ಎಂದು ಸಾಬೀತು ಮಾಡುವ ನೈತಿಕ ಬೆಂಬಲ ನೀಡುತ್ತದೆ. ಕೌಟುಂಬಿಕ ನೆಲೆಯಲ್ಲೇ ಆಗಲಿ, ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲಿಯೇ ಆಗಲಿ, ಮಹಿಳೆಯ ದುಡಿಮೆ ದಾಖಲಾಗದೇ ಹೋಗುವ ಸತ್ಯವನ್ನು ಕಟುವಾಗಿ ಟೀಕಿಸುತ್ತದೆ. ಬಿಡುವಿಲ್ಲದೆ ಒಂದಲ್ಲ ಒಂದು ರೀತಿಯಲ್ಲಿ ದೈಹಿಕವಾಗಿ, ಮಾನಸಿಕವಾಗಿ ಕುಟುಂಬ ಹಾಗೂ ಸಮಾಜಕ್ಕೆ ಅವಿರತವಾಗಿ ದುಡಿಯುವ ಮಹಿಳೆಯ ದುಡಿಮೆ ನಿರ್ಲಕ್ಷ್ಯಕೊಳಗಾಗಿದೆ. ಇದರ ಗಂಭೀರ ವಿಚಾರ ಮಹಿಳೆಯರ ದುಡಿಮೆಯ ಸಮಸ್ಯೆ ಮತ್ತು ಪರಿಹಾರಗಳ ಬಗ್ಗೆ ಈ ಮುಂದೆ ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ.

ಮಹಿಳಾ ಅಧ್ಯಯನವು ಒಂದು ಪ್ರತ್ಯೇಕ ಜ್ಞಾನ ಶಿಸ್ತುವಿನ ರೂಪ ತಳೆದು ಬೆಳೆಯುತ್ತಿದ್ದರೂ ಅದು ಮೂಲಭೂತವಾಗಿ ಬಹುಶಿಸ್ತೀಯ ಜ್ಞಾನಕೋಶ ಎಂಬುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ವಾಸ್ತವವಾಗಿ ಮಹಿಳಾ ಅಧ್ಯಯನವು ಒಂದು ಜ್ಞಾನ ಶಿಸ್ತು ಹೌದು ಮತ್ತು ಹೋರಾಟದ ಪ್ರಣಾಳಿಕೆಯು ಹೌದು. ಏಕೆಂದರೆ ಮಹಿಳೆಯರ ಸ್ಥಿತಿಗತಿಗಳು, ಅವರ ಸ್ಥಾನಮಾನಗಳು, ಹಿತಾಸಕ್ತಿಗಳು, ಅವರ ಪಾತ್ರ,

ಅವರ ಹಕ್ಕುಗಳು ಮುಂತಾದ ಸಂಗತಿಗಳ ಬಗ್ಗೆ ಸಮಾಜವು ತಳೆದಿರುವ ತಾರತಮ್ಯವಾದೀ ಧೋರಣೆಯನ್ನು ಬದಲಾಯಿಸುವ ಉದ್ದೇಶವನ್ನು ಮಹಿಳಾ ಅಧ್ಯಯನವು ಹೊಂದಿದೆ. ಮಹಿಳೆಯರ ಸ್ಥಿತಿಗತಿಗಳು ಮತ್ತು ಸ್ಥಾನಮಾನಗಳು ಪುರುಷರಿಗಿಂತ ಕೀಳಾಗಿವೆ- ಕೆಳಮಟ್ಟದಲ್ಲಿವೆ. ಗಂಡನ ಹಿತಾಸಕ್ತಿ, ಮಕ್ಕಳ ಹಿತಾಸಕ್ತಿಗಳು ಎಂಬುದಕ್ಕೆ ಪ್ರತ್ಯೇಕ ನೆಲೆಯೆ ಇಲ್ಲದಂತಾಗಿದೆ. ಮಹಿಳಾ ಹಿತಾಸಕ್ತಿಗಳಿಗೆ ಯಾವಾಗಲೂ ಆನುಷಂಗಿಕವಾದ ಸ್ಥಾನಮಾನ ನೀಡಲಾಗಿದೆ. ಇದು ಯಾಕೆ ಹೀಗೆ?- ಎಂದು ಮಹಿಳಾ ಅಧ್ಯಯನ ಪ್ರಶ್ನೆ ಕೇಳುತ್ತದೆ. ಮಹಿಳೆಯ ಅಧೀನ ಸ್ಥಿತಿಗತಿ ಮತ್ತು ಸ್ಥಾನಮಾನಗಳಿಗೆ ಕಾರಣವಾದ ಸಂಗತಿಗಳನ್ನು ಗುರುತಿಸುವ ವಿಶ್ಲೇಷಿಸುವ ಜವಾಬ್ದಾರಿ ಮಹಿಳಾ ಅಧ್ಯಯನದ ಮೇಲಿದೆ.

ಮಹಿಳಾ ಅಧ್ಯಯನವು ಜ್ಞಾನಶಿಸ್ತು ಹೌದು ಮತ್ತು ಅದು ಒಂದು ಅಧ್ಯಯನದ ವಿಧಾನವೂ ಹೌದು, ದಮನಕ್ಕೆ, ತುಳಿತಕ್ಕೆ, ತಾರತಮ್ಯಕ್ಕೆ ಒಳಗಾಗಿರುವ ಅನೇಕ ಸಾಮಾಜಿಕ ಗುಂಪುಗಳಿವೆ. ಈ ಸಾಮಾಜಿಕ ಗುಂಪುಗಳಲ್ಲಿ ಮಹಿಳೆಯರದ್ದು ಮುಖ್ಯ ಘಟಕವಾಗಿದೆ. ಆದರೆ ಸಮಾಜ ವಿಜ್ಞಾನಗಳೂ ಅವುಗಳಲ್ಲಿ ಮುಖ್ಯವಾಗಿ ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಅಧ್ಯಯನಗಳೂ ಮಹಿಳೆಯರನ್ನು ಒಂದು ಸಾಮಾಜಿಕ ಗುಂಪು ಎಂದು ಪರಿಗಣಿಸುವುದಿಲ್ಲ. ಆದರೆ ಎಲ್ಲರಿಗೂ ತಿಳಿದಿರುವಂತೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಂಚಿತವಾದ ಒಂದು ಮುಖ್ಯ ಗುಂಪೆಂದರೆ ಮಹಿಳೆಯರು. ಇದಕ್ಕೆ ಕೆಲವು ಸರಳ ಸಂಗತಿಗಳನ್ನು ಪರಿಗಣಿಸಬಹುದು. ಕರ್ನಾಟಕದಲ್ಲಿ ಒಟ್ಟು ಅಕ್ಷರಸ್ಥರ ಸಂಖ್ಯೆ ೨೧೦.೧೩ ಲಕ್ಷ. ಇದರಲ್ಲಿ ಮಹಿಳೆಯರ ಸಂಖ್ಯೆ ಕೇವಲ ೮೧.೪೧ ಲಕ್ಷ. ಜನಸಂಖ್ಯೆಯಲ್ಲಿ ಸರಿಸುಮಾರು ಅರ್ಧದಷ್ಟಿರುವ ಮಹಿಳೆಯರು ಅಕ್ಷರಸ್ಥರಲ್ಲಿ ಮಾತ್ರ ಕೇವಲ ಶೇ ೩೮.೭೪ ರಷ್ಟು ಪಾಲು ಪಡೆದಿದ್ದಾರೆ. ಒಟ್ಟು ದುಡಿಮೆಗಾರ ವರ್ಗದಲ್ಲಿ ಮಹಿಳೆಯರ ಪ್ರಮಾಣ ಕೇವಲ ಶೇ ೨೮.೯೫ ರಷ್ಟಿದೆ. ಆದರೆ ಭೂರಹಿತ ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಪಾಲು ಶೇ.49.75 ರಷ್ಟಿದೆ. (ಕರ್ನಾಟಕದ ಅಭಿವೃದ್ಧಿ ಮಾಹಿತಿ ಕೋಶ ೧೯೯೯:೩೨-೩೩ ಮತ್ತು ೫೭) ಇಂತಹ ವಂಚನೆಯ, ನಿರ್ಲಕ್ಷ್ಯದ ಸಂಗತಿಗಳ ಅನೇಕ ನಿದರ್ಶನಗಳನ್ನು ನೀಡಬಹುದು. ಅದು ಮುಖ್ಯವಲ್ಲ, ಮಹಿಳಾ ಅಧ್ಯಯನವು ಅಭಿವೃದ್ಧಿಯಲ್ಲಿ ಮಹಿಳೆಯರು ಏಕೆ ವಂಚಿತ ವರ್ಗವಾಗಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೋಧಿಸುತ್ತದೆ. ಈ ದೃಷ್ಟಿಯಿಂದ ಮಹಿಳಾ ಅಧ್ಯಯನವೆನ್ನುವುದು ಒಂದು ಅಧ್ಯಯನ ವಿಧಾನ ಎಂದು ಹೇಳಬಹುದು.

ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರು -ಪುರುಷರು ಇವುಗಳನ್ನು ಸೆಕ್ಸ್‌ಗೆ ಸಂವಾದಿಯಾಗಿ ಮತ್ತು ಲಿಂಗಸಂಬಂಧಗಳು ಎನ್ನುವುದನ್ನು ಜೆಂಡರ್‌ಗೆ ಸಂವಾದಿಯಾಗಿ ಬಳಸಲಾಗಿದೆ. ಲಿಂಗಸಂಬಂಧಗಳನ್ನು ಲಿಂಗಸಂಬಂಧಗಳನ್ನು ಕುರಿತ ಅನುಸಂಧಾನವೇ ಮಹಿಳಾ ಅಧ್ಯಯನದ ವಿಷಯವಸ್ತು.

ಲಿಂಗಸಂಬಂಧಗಳು ಸಾಮಾಜಿಕ ನೆಲೆಗಳನ್ನು ಹೊಂದಿವೆ. ಈ ಸಂಬಂಧಗಳು ಜೈವಿಕ ನಿಯತಿಯಲ್ಲ ಎಂಬುದು ಮಹಿಳಾ ಅಧ್ಯಯನದ ಇನ್ನೊಂದು ನಂಬಿಕೆಯಾಗಿದೆ. ಸಂತಾನೋತ್ಪತ್ತಿ ದುಡಿಮೆಯು ಮಹಿಳೆಯರಿಗೆ ಮೀಸಲು ಮತ್ತು ಆರ್ಥಿಕೋತ್ಪಾದನೆ ಜವಾಬ್ದಾರಿ ಪುರುಷರಿಗೆ ಮೀಸಲು ಎಂಬ ಸರಳ ಮಂಡೂಕವಾದಿ ವರ್ಗೀಕರಣವನ್ನು ಮಹಿಳಾ ಅಧ್ಯಯನವು ಪ್ರಶ್ನಿಸುತ್ತದೆ. ಮಹಿಳೆಯರ ಹೀನ-ದೀನಸ್ಥಿತಿಗತಿಗಳಿಗೆ ಸ್ಥಾನ-ಮಾನಗಳಿಗೆ ಲಿಂಗಸಂಬಂಧಿ ಶ್ರಮ ವಿಭಜನೆಯು ಕಾರಣವಾಗಿದೆ ಎಂಬುದನ್ನು ಮಹಿಳಾ ಅಧ್ಯಯನವು ಪ್ರತಿಪಾದಿಸುತ್ತದೆ.

ಲಿಂಗ ಸಮಾನತೆ ಮತ್ತು ಅಭಿವೃದ್ಧಿಯಲ್ಲಿ ಸಹಭಾಗಿತ್ವಗಳಲ್ಲಿ ನಂಬಿಕೆಯರುವವರೆಲ್ಲರು ಮಹಿಳಾ ಅಧ್ಯಯನದಲ್ಲಿ ತೊಡಗಬಹುದು. ವ್ಯಾಪಕವಾಗಿ ನೆಲೆಗೊಂಡಿರುವ ಲಿಂಗ ಸಂಬಂಧಿ ಅಸಮಾನತೆಗಳು, ಮಹಿಳೆಯರ ಬಗೆಗಿನ ತಾರತಮ್ಯ, ಹೆಣ್ಣು ಮಕ್ಕಳ ಬಗೆಗಿನ ಔದಾಸೀನ್ಯ, ತಿರಸ್ಕಾರ ಮನೋಭಾವ ಮುಂತಾದ ಅನಿಷ್ಟಗಳನ್ನು ತೊಡೆದು ಹಾಕುವ ಸಂಕಲ್ಪ ತೊಟ್ಟವರೆಲ್ಲರು ತಮ್ಮನ್ನು ತಾವು ಮಹಿಳಾ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬಹುದು. ಲಿಂಗ ಸಮಾನತೆಯನ್ನು ಒಪ್ಪಿಕೊಳ್ಳದೆ ಮಹಿಳಾವಾದಿಗಳಾಗುವುದು ಅಸಾಧ್ಯ. ಲಿಂಗ ಸಂಬಂಧಗಳು ಜೈವಿಕ ನಿಯತಿ ಸೂತ್ರಗಳಿಂದ ನಿರ್ಧರಿತವಾಗುತ್ತವೆ ಎಂಬ ನಂಬಿಕೆಯಿಂದ ಮಹಿಳಾ ಅಧ್ಯಯನ ಕೈಗೊಳ್ಳುವುದು ಸಾಧ್ಯವಿಲ್ಲ.

ಮಹಿಳಾ ಅಧ್ಯಯನದ ಪ್ರಯೋಜನಗಳು:

1. ಮಹಿಳೆಯ ಬದುಕನ್ನು ಮತ್ತು ಅವಳ ಸಮಸ್ಯೆಗಳನ್ನು ಗತದಿಂದ ಹಿಡಿದು ಭವಿಷ್ಯತ್ತಿನ ಎಲ್ಲ ಮಜಲುಗಳಲ್ಲೂ ಅರ್ಥಮಾಡಿಕೊಳ್ಳುವುದು.
2. ಅವಳಿಗಾದ ಅನ್ಯಾಯಗಳನ್ನು ಖಂಡಿಸುತ್ತಾ, ಅವಳಿಗೆ ಸಿಗಬೇಕಾದ ಸ್ಥಾನ-ಮಾನಗಳನ್ನು ಒತ್ತಾಯಿಸುವುದು. ಒಟ್ಟು ಅವಳ ಬದುಕಿಗೆ ಸಂಬಂಧಪಟ್ಟ ಎಲ್ಲಾ ಕ್ಷೇತ್ರಗಳಲ್ಲೂ ಅವಳ ಸ್ಥಾನದ ಬದಲಾವಣೆಗೆ ಒತ್ತಾಯಿಸುವುದು.
3. ಮಹಿಳೆಗಾದ ಅನ್ಯಾಯಗಳನ್ನು ದಾಖಲಿಸುವುದು, ಅದನ್ನು ವಿರೋಧಿಸುವುದು, ಮಹಿಳೆಯರ ಸಂಘಟನೆಯ ಕಡೆಗೆ ಗಮನಹರಿಸುತ್ತಾ ಅವಳ ಸಂವಿಧಾನದತ್ತ ಹಕ್ಕುಗಳ ಬಗೆಗೆ ಒತ್ತಾಯ ಮಾಡುವುದು.
4. ಮಹಿಳೆಯರ ಪಾತ್ರ ಬದಲಾವಣೆಗೆ ಒತ್ತಾಯಿಸುತ್ತದೆ, ಸಿದ್ಧಲೈಂಗಿಕ ಮಾದರಿಗಳ ಪರಿಧಿಯಿಂದ ವಿಮೋಚನೆ ಪಡೆಯುವುದು, ಸ್ವಾತಂತ್ರ್ಯವನ್ನು ಅನುಭವಿಸುವುದು.
5. ಹೆಣ್ಣಿನ ದುಡಿಮೆ ದಾಖಲಾಗಬೇಕು, ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಸಮಾನತೆ ಇರಬೇಕು. ಲೈಂಗಿಕ ತಾರತಮ್ಯವಿರದ ಅವಳ ವ್ಯಕ್ತಿತ್ವ ವಿಕಸನಕ್ಕೆ ಸಂಪೂರ್ಣಾವಕಾಶವಿರಬೇಕು ಎಂದು ಒತ್ತಾಯಿಸುವುದು.

6. ಮಹಿಳೆಯರ ಪ್ರತಿಭೆ, ಸಾಮರ್ಥ್ಯಗಳನ್ನು ಗುರುತಿಸಬೇಕು. ಅವಳಿಗೆ ಬದುಕಿನಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಅವಕಾಶವಿರಬೇಕು. ದುಡಿಮೆಯ ನಡುವೆ ಬಿಡುವನ್ನು ಪಡೆಯುವ ಅವಕಾಶವಿರಬೇಕು ಎಂದು ಪ್ರತಿಪಾದಿಸುವುದು.
7. ರಾಷ್ಟ್ರದ ಅಭಿವೃದ್ಧಿಗೆ, ಮಹಿಳಾ ಅಭಿವೃದ್ಧಿ ಬಹಳ ದೊಡ್ಡ ಶಕ್ತಿ ಎಂಬ ತಿಳುವಳಿಕೆ ಮೂಡಿಸುವುದು, ಪ್ರಚಾರ ಕಾರ್ಯಕ್ರಮಗಳು ತಿಳುವಳಿಕೆಗಳನ್ನು ಹಮ್ಮಿಕೊಳ್ಳುವುದು.
8. ಶೈಕ್ಷಣಿಕ ಕ್ಷೇತ್ರದ ಅನೇಕ ಅನ್ಯಶಿಸ್ತೀಯ ಅಧ್ಯಯನಗಳ ಮೂಲಕ ಮಹಿಳಾ ಸಮಸ್ಯೆಗಳಿಗೆ ಬೇರೆ ಬೇರೆ ಮೂಲಗಳಿಂದ ಉತ್ತರವನ್ನು ಕಂಡುಕೊಳ್ಳುವುದು.
9. ಮಹಿಳಾ ಅಧ್ಯಯನ ಏಕಮುಖೀ ಚರ್ಚೆಯಲ್ಲ, ಬದಲಾಗಿ ಇದು ಬಹುಮುಖೀ ಅಧ್ಯಯನಕ್ಕೆ ಸಂಬಂಧ ಪಟ್ಟಿದ್ದು, ಎಂಬ ತಿಳುವಳಿಕೆಯನ್ನು ಮೂಡಿಸುವುದು. 'ಮಹಿಳಾ ಅಧ್ಯಯನ' ಹೆಣ್ಣಿನ ಆರೋಗ್ಯ, ಶಿಕ್ಷಣ, ರಾಜಕೀಯ, ಆರ್ಥಿಕ ವಲಯಗಳಲ್ಲಿ ಅವಳಿಗಾಗಿರುವ ಅನ್ಯಾಯ, ಅಸಮಾನತೆಯನ್ನು, ಕೊರತೆಯನ್ನು, ತುಂಬಿಕೊಡುತ್ತ ಅವಳ ಸಬಲೀಕರಣಕ್ಕೆ ಕಾರಣವಾಗುತ್ತದೆ. 'ಮಹಿಳಾ ಅಧ್ಯಯನ' ಮಹಿಳೆಯ ಸ್ಥಿತಿ-ಗತಿಗಳ ಜಾಗೃತಿ, ಪುರುಷನೊಂದಿಗಿನ ಮಹಿಳೆಯ ಸಂಬಂಧ, ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯ, ಶೋಷಣೆಗಳ ಸ್ವರೂಪವನ್ನು ಕುರಿತಂತೆ ಪರಾಮರ್ಶಿಸುವುದು. ಅದಕ್ಕೆ ಸೂಕ್ತ ಪರಿಹಾರೋಪಾಯಗಳನ್ನು ಕುರಿತು ಚಿಂತಿಸುವುದು ತನ್ನ ಮುಖ್ಯ ಗುರಿಯಾಗಿಸಿಕೊಂಡಿದೆ.

ಇದು ಮಹಿಳೆಯರ ಸ್ಥಾನ-ಮಾನಗಳು, ಸ್ಥಿತಿಗತಿಗಳಲ್ಲಿನ ಧನಾತ್ಮಕವಾದ ಬದಲಾವಣೆ ಒಂದು ಶಕ್ತಿಯುತ ಪ್ರತಿನಿಧಿಯಾಗಿ ಕೆಲಸಮಾಡುತ್ತದೆ. 'ಮಹಿಳಾ ಅಧ್ಯಯನ' ಎಂದೆಂದಿಗೂ ತಾಟಸ್ಥ್ಯ ನೀತಿಯನ್ನು ಪುರಸ್ಕರಿಸುವುದಿಲ್ಲ. ಹೀಗಾಗಿಯೇ ಸಮಾಜದಲ್ಲಿಯ ಮಹಿಳಾ ಅಭಿವೃದ್ಧಿ ತಟಸ್ಥತೆಯ ವಿರೋಧ, ಅವಳ ಮೇಲಾಗುವ ಆಕ್ರಮಣ, ಬಲತ್ಕಾರ, ದೌರ್ಜನ್ಯ, ಹಿಂಸೆ ಇವುಗಳಿಗೆ ತೀವ್ರ ವಿರೋಧ ಸೂಚಿಸುತ್ತದೆ. ಇವೆಲ್ಲವುದರ ಬಗೆಗೆ ಸಮಾಜದ ನೆಲೆಯಲ್ಲಿರುವ ಅವಜ್ಞತೆಯನ್ನು ಖಂಡಿಸುತ್ತ ಜಾಗೃತಿಯನ್ನುಂಟು ಮಾಡುವ ಉದ್ದೇಶ ಹೊಂದಿದೆ. ಸ್ತ್ರೀವಾದ ಇದರ ಹಿನ್ನೆಲೆಗೆ ಬೆನ್ನೆಲುಬಾಗಿ ಕೆಲಸ ಮಾಡುತ್ತದೆ.

ಮಹಿಳಾ ಅಧ್ಯಯನದ ಗುರಿ :

'ಮಹಿಳಾ ಅಧ್ಯಯನ' ಮಹಿಳೆಯ ಆರೋಗ್ಯವನ್ನು ಕಾಪಾಡಿ, ಅವಳನ್ನು ಹೆಚ್ಚು ಆರೋಗ್ಯವಂತಳನ್ನಾಗಿ ಮಾಡುವುದು. ಅಪೌಷ್ಠಿಕ ಆಹಾರ, ಬಿಡುವಿಲ್ಲದ ದುಡಿತ, ಅತಿ ಹೆಚ್ಚಿನ ಜವಾಬ್ದಾರಿಗಳು, ಲೈಂಗಿಕ ಶೋಷಣೆಗಳು, ಪದೇ ಪದೇ ಅನುಭವಿಸುತ್ತಿರುವ ಬಸಿರು-ಬಾಣಂತನಗಳು, ಮಗುವಿನ ಲಾಲನೆ-ಪಾಲನೆಗಳು, ಮಾನಸಿಕ ಒತ್ತಡಗಳು ದೈಹಿಕ ದುರ್ಬಲತೆ, ಮುಟ್ಟಿಗೆ ಸಂಬಂಧಿಸಿದ

ಸಮಸ್ಯೆಗಳು ಇತ್ಯಾದಿಗಳನ್ನು ಗಂಭೀರವಾಗಿ ಪರಿಗಣಿಸಿ ಹೆಣ್ಣಿನ ದೈಹಿಕ-ಮಾನಸಿಕ ಆರೋಗ್ಯಗಳನ್ನು ಕಾಪಾಡಿದಾಗಲೇ ಸಶಕ್ತ ಮಹಿಳೆ ಕಾಣಿಸಿಕೊಳ್ಳಲು ಸಾಧ್ಯ, ಎಂದು 'ಮಹಿಳಾ ಅಧ್ಯಯನ' ನಂಬುತ್ತದೆ. ಮಹಿಳೆಯರಿಗೆ ಕಾನೂನಿನ ಅಡಿಯಲ್ಲಿ, ಸಂವಿಧಾನದಲ್ಲಿ ನೀಡಲ್ಪಟ್ಟಿರುವ ಹಕ್ಕುಗಳು, ಸವಲತ್ತುಗಳನ್ನು ಸಮರ್ಪಕವಾದ ರೀತಿಯಲ್ಲಿ ಬಳಸಿಕೊಳ್ಳುವಂತಹ ತಿಳುವಳಿಕೆ ನೀಡುವುದು, ತನಗಾದ ಅನ್ಯಾಯಗಳನ್ನು ದಾಖಲಿಸುವ, ವಿರೋಧಿಸುವ ಪ್ರಜ್ಞೆಯನ್ನು ಬೆಳೆಸುವುದು.

ಮುಖ್ಯವಾಗಿ ಅವಳ 'ದೇಹ' ದ ಬಗೆಗೆ ಸ್ವಾಭಿಮಾನ, 'ತನ್ನ ದೇಹ ತನ್ನ ಆಸ್ತಿ' ತನ್ನ ಒಪ್ಪಿಗೆ ಇಲ್ಲದೇ ಅದರ ಅಪಬಳಕೆಯಾಗಂದತೆ ಕಾಪಾಡಿಕೊಳ್ಳುವುದು, ಸ್ವಯಂ ರಕ್ಷಣೆ ಹಾಗೂ ತಿಳುವಳಿಕೆಯನ್ನು ಮೂಡಿಸುವುದು. ಕೌಟುಂಬಿಕ ಪರಿಧಿಯೊಳಗಿನ ದೈಹಿಕ, ಮಾನಸಿಕ ಹಿಂಸೆಗಳಿಗೆ ಪ್ರತಿಕ್ರಿಯಿಸಬೇಕಾದ ರೀತಿ ಮತ್ತು ಅವಶ್ಯಕತೆಗಳು- ಇದಕ್ಕೆ ಮಹಿಳೆಗಿರುವ ವಿಶೇಷ ಕಾನೂನುಗಳ ಸೌಲಭ್ಯ ಹಾಗೂ ತಿಳುವಳಿಕೆ ನೀಡುವುದು. ವರದಕ್ಷಿಣೆ, ವಿವಾಹ, ಸೂಳೆಗಾರಿಕೆಗಳಲ್ಲಿ ಹೆಣ್ಣಿನ ಹಿಂಸೆ, ಅಪಬಳಕೆಗಳನ್ನು ವಿರೋಧಿಸುತ್ತದೆ.

ಹೆಣ್ಣನ್ನು ಕೇವಲ ದೇಹ ಸಂಬಂಧಿ ನೆಲೆಯಿಂದ ನೋಡುವ ಪಾರಂಪರಿಕ ದೃಷ್ಟಿಕೋನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ. ಹೆಣ್ಣಿನ ಅಶ್ಲೀಲ ಚಿತ್ರ ಪ್ರದರ್ಶನ, ಜಾಹಿರಾತುಗಳಲ್ಲಿ ಹೆಣ್ಣನ್ನು ತಮಗೆ ಬೇಕಾದ ಹಾಗೆ ಚಿತ್ರಿಸಿಕೊಳ್ಳುವ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಯ ಧೋರಣೆಗಳನ್ನು ಖಂಡಿಸುತ್ತದೆ. ಅವಳ ಅಂಗಾಂಗ ಪ್ರದರ್ಶನ, ಸೌಂದರ್ಯ ಸ್ಪರ್ಧೆಯ ನೆಪದಲ್ಲಿ ಕೇವಲ ದೇಹ, ಅಂಗಾಂಗಳೇ ಸೌಂದರ್ಯ ಎಂದು ವ್ಯಾಖ್ಯಾನಿಸುವ ಕ್ರಮಗಳನ್ನು ಮಹಿಳಾಪರ ಚಳುವಳಿಕಾರರು, ಸ್ತ್ರೀವಾದಿಗಳು ವಿರೋಧಿಸುತ್ತಲೇ ಬಂದಿದ್ದಾರೆ.

ಲೈಂಗಿಕ ವಿಚಾರದಲ್ಲಿ ಗಂಡು-ಹೆಣ್ಣಿಗಿರುವ ವಿಭಿನ್ನ ನೀತಿಗಳನ್ನು ಮಹಿಳಾಪರ ಸಂಘಟನೆಗಳು ವಿರೋಧಿಸುತ್ತಲೇ ಬಂದಿವೆ. ಬ್ರಿಟನ್ನಿನ ವಿಮಾನ ನಿಲ್ದಾಣದಲ್ಲಿ ಭಾರತೀಯ ಮಹಿಳೆಯನ್ನು 'ಕನ್ಯತ್ವ' ಪರೀಕ್ಷೆಗೊಳಪಡಿಸುತ್ತಿದ್ದ ಪರಂಪರೆಯನ್ನು ಮಹಿಳಾ ಸಂಘಟನೆಗಳು ವಿರೋಧಿಸಿವೆ. ಅವಳ ಲಿಂಗ ಶುದ್ಧಿಯ ನೆಲೆಯಿಂದಲೇ ಸ್ಥಾನ-ಮಾನಗಳನ್ನು ನಿರ್ಧರಿಸುವ ಈ ಅಮಾನವೀಯ ಕೃತ್ಯಗಳಿಗೆ ಮಹಿಳೆಯರ ವಿರೋಧವಿದೆ. ಪುರುಷರಿಗಿಲ್ಲದ ಕೇವಲ ಮಹಿಳೆಯರಿಗೆ ಮೀಸಲಾದ ಇಂತಹ ವಿಶಿಷ್ಟ ಪರೀಕ್ಷೆಗಳು 'ಪಾತಿವ್ರತ್ಯ', 'ಶೀಲ'ದ ಪರಿಕಲ್ಪನೆಗಳನ್ನು 'ಮಹಿಳಾ ಅಧ್ಯಯನ' ಪ್ರಶ್ನಿಸುತ್ತದೆ.

'ಮಹಿಳಾ ಅಧ್ಯಯನ' ಸಂಸ್ಥೆಗಳ ಮುಖ್ಯ ಕಾರ್ಯಚಟುವಟಿಕೆಗಳು :

'ಮಹಿಳಾ ಅಧ್ಯಯನ' ಸಂಸ್ಥೆಗಳು ಸಾಮಾನ್ಯವಾಗಿ ಮಹಿಳೆಗೆ ಸಂಬಂಧಿಸಿದ ಒಂದು ಸಮಸ್ಯೆಯನ್ನು ಕುರಿತಂತೆ ಅಧ್ಯಯನ ಮಾಡುತ್ತದೆ. ಅದಕ್ಕೆ ಸಂಬಂಧಿಸಿದ ಪೂರಕ ಮಾಹಿತಿ, ವಿಚಾರಗಳನ್ನು ಒದಗಿಸುವುದು ಕೂಡಾ 'ಮಹಿಳಾ ಅಧ್ಯಯನ' ಸಂಸ್ಥೆಗಳ ಮುಖ್ಯ ಕೆಲಸವೆ. ಅದರ ಮುಖ್ಯ ಕಾರ್ಯಚಟುವಟಿಕೆಗಳೆಂದರೆ,

೧. ಮುಖ್ಯವಾಗಿ ಸಂಶೋಧನಾ ಯೋಜನೆಗಳನ್ನು ಸಿದ್ಧಪಡಿಸುವುದು.

೨. ಮಾಹಿತಿ ಸಂಗ್ರಹಣೆ ಮಾಡುವುದು ಹಾಗೂ ಅದನ್ನು ದಾಖಲಿಸುವುದು.

೩. ತರಬೇತಿ ನೀಡುವುದು.

೪. ಪ್ರಕಟಣೆಗಳನ್ನು ಹೊರತರುವುದು.

೫. ಮುಖ್ಯ ಮಹಿಳಾ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ಏರ್ಪಡಿಸುವುದು.

೬. ನಿಯಾಮಾವಳಿಗಳ ರಚನೆ ಮಾಡುವುದು.

೭. ಧನ ಸಹಾಯವನ್ನೊದಗಿಸುವುದು.

೮. ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು.

೯. ಸರ್ಕಾರದ ಜೊತೆಗೆ ಸೌಹಾರ್ದತೆಯನ್ನು ಕಾಪಾಡಿಕೊಳ್ಳುವುದು.

೧೦. ವಿವಿಧ ವಿಭಾಗಗಳೊಡನೆ ಸಂಪರ್ಕ ಸ್ಥಾಪಿಸಿಕೊಳ್ಳುವುದು.

೧೧. ಆಪ್ತ ಸಮಾಲೋಚನೆಯನ್ನು ನಡೆಸುವುದು.

೧೨. ಸೂಕ್ತ ಸಲಹೆ, ಮಾರ್ಗದರ್ಶನಗಳನ್ನು ನೀಡುವುದು.

೧೩. ಧರ್ಮಕಾರ್ಯಗಳು, ಸಮಾಜಸೇವೆಗಳಲ್ಲಿ ಆಸಕ್ತಿ ತೋರುವುದು.

೧೪. ಸಾಕ್ಷರತೆಯ ಪ್ರಚಾರ ಮಾಡುವುದು, ಅರ್ಧಕ್ಕೆ ವಿದ್ಯಾಭ್ಯಾಸ ನಿಲ್ಲಿಸಿದ ಹೆಣ್ಣು ಮಕ್ಕಳ ಓದನ್ನು ಪ್ರೋತ್ಸಾಹಿಸುವುದು.

೧೫.. ಹೆಣ್ಣು ಮಕ್ಕಳ ಆರ್ಥಿಕ ಸ್ವಾತಂತ್ರ್ಯದ ನಿಟ್ಟಿನಲ್ಲಿ ಆದಾಯ ಉತ್ಪತ್ತಿ ಕಾರ್ಯಕ್ರಮಗಳನ್ನು ರೂಪಿಸುವುದು.

೧೬. ಪ್ರಚಾರ ಹಾಗೂ ಕ್ರಿಯಾ ಚಟುವಟಿಕೆಗಳು.

೧೭. ಶಿಕ್ಷಣದ ವಿವಿಧ ಹಂತಗಳಲ್ಲಿ ಪಠ್ಯಕ್ರಮದೊಳಗೆ ಮಹಿಳಾ ಅಧ್ಯಯನದ ಸೇರ್ಪಡೆ.

೧೮. 'ಮಹಿಳಾ ಅಧ್ಯಯನ'ದ ಅಭಿವೃದ್ಧಿ.

೧೯. 'ಮಹಿಳಾ ಅಧ್ಯಯನ'ದ ಬೋಧನೆ.

ಪ್ರಸ್ತುತ ಅಧ್ಯಯನವು ದುಡಿಯುವ ಮಹಿಳೆಯರ ಸ್ಥಿತಿ-ಗತಿಗಳು ಹಾಗೂ ಆರ್ಥಿಕ ಸಿದ್ಧಾಂತಗಳು ಮಹಿಳೆಯರನ್ನು ಹೇಗೆ ಪರಿಭಾವಿಸಿಕೊಂಡಿವೆ? ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರ ಸ್ಥಿತಿ-ಗತಿಗಳನ್ನು ಮಾತ್ರ ಉತ್ತಮಪಡಿಸುವ ದಿಶೆಯಲ್ಲಿ ಕ್ರಿಯಾಶೀಲವಾಗಿವೆಯೇ? ಅಥವಾ ಅವಳ ಸ್ಥಾನ-ಮಾನವನ್ನು ಉತ್ತಮಪಡಿಸುವ ಕೆಲಸವನ್ನು ಮಾಡುತ್ತಿವೆಯೇ? ಸಂತಾನೋತ್ಪತ್ತಿ ಹಾಗೂ ಆರ್ಥಿಕೋತ್ಪಾದನೆಗಳಿಗೆ ಸಂಬಂಧಿಸಿದ ದುಡಿಮೆಗಳೆರಡನ್ನು ಮಹಿಳೆ ಹೇಗೆ ನಿಭಾಯಿಸುತ್ತಿದ್ದಾಳೆ ಇವೇ ಮುಂತಾದ ಪ್ರಶ್ನೆಗಳನ್ನು ಚರ್ಚಿಸುವ ಮತ್ತು ಪರಿಹಾರಗಳನ್ನು ಹುಡುಕುವ ಉದ್ದೇಶ ಪ್ರಸ್ತುತ ಅಧ್ಯಯನಕ್ಕಿದೆ.

ಅಧ್ಯಾಯ-೧

ದುಡಿಯುವ ಮಹಿಳೆ

ಅರ್ಥ, ವ್ಯಾಪ್ತಿ:

ಭಾರತದಲ್ಲಿ ಮಹಿಳೆ ದುಡಿಯುವ ರಂಗವನ್ನು ಹೇಗೆ ಮತ್ತು ಎಂದು ಪ್ರವೇಶಿಸಿದಳು ಎಂಬ ಪ್ರಶ್ನೆಗೆ ಸರಿಯಾದ ಉತ್ತರವಿಲ್ಲ. ಬೀಜ ಬಿತ್ತುವುದು, ಕಳೆ ಕೀಳುವುದು, ನೀರು ಹಾಕುವುದು, ಕೊಯ್ಲು, ಪಶುಸಂಗೋಪನೆ, ಕೋಳಿ ಸಾಕಾಣಿಕೆಗಳಲ್ಲಿ ತನ್ನ ಮನೆಯ ಪುರುಷರ ಜೊತೆ ದುಡಿಯಲಾರಂಭಿಸಿದ್ದೇ ಅಲ್ಲದೆ, ಗುಡಿ ಕೈಗಾರಿಕೆಗಳಾದ ಬೀಡಿ ಕಟ್ಟುವುದು, ಹಗ್ಗ ಹೊಸೆಯುವುದು, ಮಡಕೆ ಮಾಡುವುದು ಮುಂತಾದ ಕೆಲಸಗಳನ್ನು ಮಾಡಲು ಪ್ರಾರಂಭಿಸಿದಳು. ಅದರಲ್ಲೂ ಕೆಳವರ್ಗದ ಮಹಿಳೆಯರಿಗೆ ಉದ್ಯೋಗ ಬದುಕಿನ ಅನಿವಾರ್ಯ. ಹಳ್ಳಿಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಂದ ಹಿಡಿದು ಪಟ್ಟಣಗಳಲ್ಲಿ ಮನೆಗೆಲಸದ ದುಡಿಮೆ ಜೊತೆಗೆ ಚಿಕ್ಕಪುಟ್ಟ ಕಾರ್ಖಾನೆಗಳಲ್ಲಿ ದುಡಿಯುವುದು, ಕಟ್ಟಡ ನಿರ್ಮಾಣದ ಕೆಲಸ ಇತ್ಯಾದಿ ಕಡಿಮೆ ವರಮಾನ ಬರುವ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರಿಗೆ ಉದ್ಯೋಗ ಅತ್ಯಗತ್ಯ. ಈ ವರ್ಗದ ಮಹಿಳೆಯರು ಮನೆಯ ಒಳಗೂ ಹಾಗೂ ಹೊರಗೂ ದುಡಿಯ ಬೇಕಾಗಿರುವುದರಿಂದ ಒಂದು ರೀತಿಯ ಚಲನಶೀಲತೆಯನ್ನು ಹೊಂದಿರುತ್ತಾರೆ.

ಭಾರತದಂತಹ ಸಾಂಪ್ರದಾಯಿಕ ಸಮಾಜದಲ್ಲಿ ದುಡಿಯುವ ಮಹಿಳೆಯರು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವುದನ್ನು ಕಾಣಬಹುದು. ಯಾವುದೇ ಸಮಾಜದಲ್ಲಿಯೂ ಪ್ರಾರಂಭದಿಂದಲೂ ಪುರುಷರ ಮತ್ತು ಮಹಿಳೆಯರ ನಡುವೆ ಮೂಲಭೂತವಾಗಿ ಅಸಮಾನ ಶ್ರಮವಿಭಜನೆ ಏರ್ಪಟ್ಟಿದೆ. ಮಹಿಳೆಯು ದುಡಿಮೆಯ ಕ್ಷೇತ್ರದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ೨೧ನೆಯ ಶತಮಾನದ ಅದ್ಭುತವೇನಲ್ಲ. ಸಮಾಜ ಜೀವನದ ಆರಂಭದಿಂದಲೂ ಪುರುಷನೊಂದಿಗೆ ಅವಳು ಸರಿಸಮಾನವಾಗಿ ದುಡಿಯುತ್ತಾ ಬಂದಿದ್ದಾಳೆ. ಆದರೆ ಇಂದು ಅವಳನ್ನು ವಿವಿಧ ಶ್ರಮ ವರ್ಗಗಳಲ್ಲಿ ವಿವಿಧ ಸ್ತರಗಳಲ್ಲಿ ಗುರುತಿಸಲಾಗುತ್ತಿದೆ. ಮಹಿಳೆ ಹುಟ್ಟಿನಿಂದ ಸಾವಿನವರೆಗೆ ಮಾನವ ಸಮಾಜದಲ್ಲಿ ಬದುಕ ಬೇಕಾಗಿರುವುದರಿಂದ ಅವಳು ದುಡಿಯುವ ರಂಗದಲ್ಲಿ ಪ್ರವೇಶ ಪಡೆಯಬೇಕಾಗಿದೆ ಹಾಗೂ ಪಡೆಯುತ್ತಿದ್ದಾಳೆ 'ಯತ್ರ ನಾರ್ಯಸ್ತುಪೂಜ್ಯಂತೆ ರಮಂತೇ ತತ್ರ ದೇವತಾಃ' ಎಂಬ ಮಾತುಗಳ ದ್ವಂದ್ವ ನೀತಿಯಿಂದ ಮಹಿಳೆಯರ ಸ್ಥಾನವನ್ನು ನಿರೂಪಿಸಲಾಗಿದೆ.

' ಕೆಳವರ್ಗದ ಕುಟುಂಬಗಳಲ್ಲಿ ಇಡೀ ಮನೆಯ ಜವಾಬ್ದಾರಿಯು ದುಡಿಯುವ ಮಹಿಳೆಯ ಹೆಗಲ ಮೇಲೆ ಬಿದ್ದಿರುತ್ತದೆ. ಕೆಳವರ್ಗದ ಮಹಿಳೆಯರು ಅಥವಾ ಕಾರ್ಮಿಕ ಮಹಿಳೆಯರು ದುಡಿಯುವ ಕ್ಷೇತ್ರದಲ್ಲಿನ ಅನ್ಯಾಯವನ್ನು ಮತ್ತು ಮನೆಯಲ್ಲಿ ಗಂಡನಿಂದ ನಡೆಯುವ ದೌರ್ಜನ್ಯವನ್ನು ಅನುಭವಿಸಿದರೂ ತಮ್ಮ ಸಂಸಾರದ ಆಗು-ಹೋಗುಗಳನ್ನು ತಾವೇ ಸ್ವತಂತ್ರವಾಗಿ ನಿರ್ವಹಿಸುತ್ತಿರುತ್ತಾರೆ. ಹಿಂದೆ ಮನೆಯಲ್ಲಿ ಒಬ್ಬರು ದುಡಿದರೂ ಸಾಕಿತ್ತು. ಮಹಿಳೆ ಹೊರಗೆ ದುಡಿಯುವ ಅವಶ್ಯಕತೆ ಹೆಚ್ಚಾಗಿರಲಿಲ್ಲ. ಆದರೆ, ಕಾಲ ಸರಿದಂತೆ ದಿನನಿತ್ಯದ ಅಗತ್ಯಗಳು ಹೆಚ್ಚಾದಂತೆಲ್ಲ ಒಬ್ಬ ವ್ಯಕ್ತಿ ದುಡಿದು ತಂದ ಹಣದಿಂದ ಸಂಸಾರ ಪೂರೈಸುವುದು ಕಷ್ಟವಾಗ ತೊಡಗಿತು. ಇಂತಹ ಪರಿಸ್ಥಿತಿಯ ಒತ್ತಡದಿಂದ ಇಷ್ಟವಿರಲಿ, ಇಲ್ಲದಿರಲಿ, ಅನಿವಾರ್ಯವಾಗಿ ಮಹಿಳೆ ದುಡಿಯುವ ಪರಿಸ್ಥಿತಿ ಉಂಟಾಗಿದೆ. ಜೊತೆಗೆ ಮಹಿಳೆ ಒಂಟಿಯಾಗಿ ಬದುಕನ್ನು ನಿಭಾಯಿಸಬೇಕಾದಾಗ ದುಡಿಮೆ ಅನಿವಾರ್ಯವಾಯಿತು. ಪುರುಷ ಆರ್ಥಿಕವಾಗಿ ಸಂಪೂರ್ಣವಾದ ಬಲ ನೀಡಲು ಸಾಧ್ಯವಿಲ್ಲದಾಗ ಸಂಸಾರ ತೂಗಿಸಲು ಮಹಿಳೆಗೆ ದುಡಿಮೆ ಅನಿವಾರ್ಯವಾಯಿತು. ಉದಾಹರಣೆಗೆ ಕುಡುಕ ಗಂಡನನ್ನು ಮದುವೆಯಾದಾಗ ಅಥವಾ ಇನ್ನಿತರ ಕೆಟ್ಟ ಹವ್ಯಾಸಗಳಿಗೆ, ದುಶ್ಚಟಗಳಿಗೆ ಒಳಗಾದಾಗ ದುಡಿಮೆಯನ್ನು ಮಹಿಳೆ ಒಪ್ಪಿಕೊಳ್ಳಬೇಕಾಗುತ್ತದೆ.'

ಹೆಣ್ಣಿನ ದುಡಿಮೆ ಅನಿವಾರ್ಯವೇ ಎಂಬ ಪ್ರಶ್ನೆಯನ್ನು ನಾವು ಹಾಕಿಕೊಂಡರೆ "ನೀನು ಮನೇನಲ್ಲಿದ್ರೇನೇ ಹೆಚ್ಚು ದುಡ್ಡು ಉಳಿಸ್ಬಹುದು, ಯಾಕೆ ಕೆಲ್ಸಕ್ಕೆ ಹೋಗ್ತಿಯಾ? ಮನೇಲೇ ಇರು" ಅನ್ನುವಂತಹ ಮಾತುಗಳನ್ನು ನಮ್ಮ ಸಮಾಜದಲ್ಲಿ ಕೇಳುತ್ತೇವೆ. ಆದರೂ ಕೂಡ ಈ ಹೊತ್ತು ಮಧ್ಯಮವರ್ಗದ, ಕೆಳವರ್ಗದ ಮಹಿಳೆಯರಿಗೆ, ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ದುಡಿಮೆ ಅನಿವಾರ್ಯ ಅನ್ನುವಂತಹ ಒಂದು ಸ್ಥಿತಿ ನಿರ್ಮಾಣವಾಗಿದೆ. ಮಹಿಳೆ ಹೊರಗೆ ಹೋಗಿ ದುಡಿಯುವುದು ಇತ್ತೀಚಿನ ಬದಲಾದ ಪರಿಸರದಲ್ಲಿ ಕಾಣಿಸಿಕೊಂಡಿದ್ದು ಎಂದು ಅನೇಕರು ಹೇಳಬಹುದು. ಆದರೆ, ಮಹಿಳೆ ದುಡಿಯುವ ವಿಚಾರವೇನು ಹೊಸದಲ್ಲ. ಆಫೀಸು, ಕಛೇರಿಗಳಲ್ಲಿ ಕಾಗದ ಪತ್ರಗಳ ಮಧ್ಯೆ ಕುಳಿತು ಹೊರಗೆ ದುಡಿಯುವುದು ಹೊಸದಿರಬಹುದು. ಆದರೆ, ಪ್ರಾಚೀನದಿಂದಲೂ ದೈಹಿಕ ಹಾಗೂ ಮಾನಸಿಕ ಶ್ರಮದಿಂದ ಗೃಹಿಣಿಯಾಗಿ ಅಭಿವೃದ್ಧಿಗೆ ನೆರವಾಗುತ್ತಿದ್ದುದನ್ನು ನೋಡಬಹುದು. ಹಿಂದೆ ಮಹಿಳೆಯ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಕಠಿಣ, ಅದು ಗಂಡಸರಿಗಷ್ಟೇ ಸಾಧ್ಯ ಎಂಬ ಭಾವನೆ ಇತ್ತು. ಇಂದು ನಿರುದ್ಯೋಗ ಸಮಸ್ಯೆಯ ದೃಷ್ಟಿಯಿಂದ ವಿದ್ಯಾವಂತ ಮಹಿಳೆಯರು ಕೆಲಸಕ್ಕಾಗಿ ಅಲೆಯುತ್ತಾರೆ. ಅವಕಾಶ ಸಿಕ್ಕಾಗ ಅಭ್ಯಂತರವಿಲ್ಲದೆ ಯಾವ

ಕೆಲಸವಾದರೂ ಸರಿಯೆಂದು ಒಪ್ಪಿಕೊಳ್ಳುವ ಮಹಿಳೆಯರೂ ಇದ್ದಾರೆ. ಮಹಿಳೆ ಎಂದೊಡನೆ ಕೋಮಲತೆ, ಮೃದುಸ್ವಭಾವ, ಮನಸ್ಸಿಗೆ ಬರುವುದರೊಡನೆ ಕಸೂತಿ, ಹೆಣಿಗೆ, ರಂಗೋಲಿ ಹಾಕುವ ಕೈಗಳು ನೆನಪಿಗೆ ಬರುತ್ತವೆ. ಅಂತಹ ಕೈಗಳು ಈಗ ಯಂತ್ರಗಳನ್ನು ನಡೆಸಬಲ್ಲವು. ರಿಪೇರಿ ಮಾಡಬಲ್ಲವು, ಭಾರತ್ ಎಲೆಕ್ಟ್ರಾನಿಕ್ಸ್‌ನಂತಹ ಕಾರ್ಖಾನೆಯಲ್ಲಿ ಹೆಣ್ಣು ಮಕ್ಕಳು ಕೆಲಸಮಾಡಬಲ್ಲರು, ವಿಮಾನ, ಟೆಲಿಫೋನ್, ಕಾಗದ, ಬಟ್ಟೆ ಕಾರ್ಖಾನೆಯಲ್ಲಿ, ಯಂತ್ರೋಪಕರಣಗಳ ಕಾರ್ಖಾನೆಗಳಲ್ಲಿ ಸಾವಿರಾರು ಮಹಿಳೆಯರು ದುಡಿಯುತ್ತಿದ್ದಾರೆ. ಅಂದರೆ ಮಹಿಳೆಯು ಬಹುತೇಕ ರಂಗಗಳಲ್ಲೂ ಪುರುಷರಂತೆಯೇ ಶಕ್ತಳಾಗಿ, ಸಮರ್ಥವಾಗಿ ಕಾರ್ಯನಿರ್ವಹಿಸುತ್ತಾಳೆ.

ದುಡಿಮೆ ಎಂದರೆ "ಆದಾಯಗಳಿಸುವ ಚಟುವಟಿಕೆ". ಯಾವ ಕೆಲಸವು ಕುಟುಂಬದ ಲಾಭಕ್ಕಾಗಿ, ಹಣಕ್ಕೋಸ್ಕರ ಮಾಡಲ್ಪಡುತ್ತದೆಯೋ ಮತ್ತು ಯಾವ ಚಟುವಟಿಕೆಯು ರಾಷ್ಟ್ರೀಯ ಉತ್ಪನ್ನಕ್ಕೆ ಕೊಡುಗೆಯನ್ನು ನೀಡುತ್ತದೆಯೋ ಅದನ್ನು ದುಡಿಮೆ ಎಂದು ಕರೆಯಲಾಗುತ್ತದೆ. ಹಣದ ವಿನಿಮಯಕ್ಕೆ ಒಳಪಡುವ ಕೆಲಸವನ್ನು ಆರ್ಥಿಕ ಚಟುವಟಿಕೆ ಎಂದು ಕರೆದರೂ ಕೃಷಿಕ್ಷೇತ್ರದಲ್ಲಿ ಮಾರುಕಟ್ಟೆಗೆ ಹೋಗದಂತಹ ಚಟುವಟಿಕೆಯನ್ನು 'ದುಡಿಮೆ' ಎಂದು ಪರಿಗಣಿಸುತ್ತದೆ. ಇದರಿಂದ 'ದುಡಿಮೆ' ಪರಿಕಲ್ಪನೆಯ ವ್ಯಾಪ್ತಿಯನ್ನು ವಿಸ್ತರಿಸಿ ಮಹಿಳೆಯರ ಕೆಲಸವು ಅದರಲ್ಲಿ ಸೇರುವಂತೆ ಮಾಡಿತು. ಆದರೆ ಸ್ತ್ರೀಯರು ಮನೆಯಲ್ಲೇ ಮಾಡುವ ಮನೆಗೆಲಸವನ್ನು 'ದುಡಿಮೆ'ಎಂದು ನಾವು ಪರಿಗಣಿಸುವುದಿಲ್ಲ. ಮನೆಗೆಲಸವೆಂದರೆ ಅಡುಗೆ ಮಾಡುವುದು, ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು, ಮಕ್ಕಳ ಪಾಲನೆ-ಪೋಷಣೆ ಇತ್ಯಾದಿ. ಮನೆಗೆ ಪೂರಕವಾದ ಕೆಲಸಗಳು- ಬೆರಣಿತಟ್ಟಿ ಮಾರುವುದು, ಸೌದೆ ಮಾರುವುದು, ತರಕಾರಿ ಬೆಳೆಯುವುದು, ಮಕ್ಕಳಿಗೆ ಮನೆ ಪಾಠ ಹೇಳುವುದು ಇತ್ಯಾದಿ ಈಗ ಇವೆಲ್ಲ ಆರ್ಥಿಕ ಚಟುವಟಿಕೆಗಳೆಂದು ಪರಿಗಣಿತವಾಗಿವೆ.

ಇಂದು ದುಡಿಯುವ ಮಹಿಳೆಯರು ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಶ್ರಮಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಮಹಿಳೆಯರ ದುಡಿಮೆ ಮೂಲಭೂತವಾದದ್ದು. ಆ ಮಹಿಳೆಯ ದುಡಿಮೆ ಜೀವದ ಉಳಿವಿಗಾಗಿ, ಬದುಕಿಗಾಗಿ ನಡೆಯುತ್ತಿರುತ್ತದೆ. ಅದಕ್ಕೆ "ಬಳಕೆಯ ಮೌಲ್ಯ" ವಿರುತ್ತದೆ. ಆಕೆಯ ದುಡಿಮೆಯನ್ನು ನೀರಿಗೆ ಹೋಲಿಸಬಹುದು. ನೀರು ಅತ್ಯಂತ ಜೀವನಾವಶ್ಯಕ ಮತ್ತು ಅದಿಲ್ಲದಿದ್ದರೆ ಬದುಕಲು ಸಾಧ್ಯವಿಲ್ಲ. ನೀರಿಗೆ ಬಳಕೆ ಮೌಲ್ಯವಿರುತ್ತದೆ ಆದರೆ ನಾವು ಚಿನ್ನಕ್ಕೆ ಕೊಡುವಷ್ಟು ಬೆಲೆಯನ್ನು ನೀರಿಗೆ ಕೊಡುವುದಿಲ್ಲ. ಆದ್ದರಿಂದ ಅದಕ್ಕೆ ವಿನಿಮಯ ಮೌಲ್ಯವಿಲ್ಲ. ಅದೇ ರೀತಿ ಚಿನಕ್ಕೆ

೧೪ ರಿಂದ ೧೬ ಗಂಟೆ ದುಡಿಯುವ ಮಹಿಳೆಯರು ತಮ್ಮನ್ನು ಉತ್ಪಾದಕರು, ದುಡಿಮೆಗಾರರು ಎಂದು ಗುರುತಿಸಿಕೊಳ್ಳುವುದೇ ಇಲ್ಲ. ಕೇವಲ ಐದಾರು ಗಂಟೆ ಹೊರಗೆ ದುಡಿದು ಬರುವ ಗಂಡಸರನ್ನು 'ದುಡಿಮೆಗಾರರು' , 'ಯಜಮಾನರು' ಎಂದು ನಮ್ಮ ಸಮಾಜ ಕರೆಯುತ್ತದೆ. ಹೀಗೆ ನಗರದ ಹಾಗೂ ಗ್ರಾಮೀಣ ಪ್ರದೇಶದ ದುಡಿಯುವ ಮಹಿಳೆಯರ ಪರಿಸ್ಥಿತಿಯನ್ನು ಕಾಣಬಹುದಾಗಿದೆ.

ಮಹಿಳೆಯರು ದುಡಿಮೆಯ ಕ್ಷೇತ್ರವನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಬಹುದು:

1) ವೇತನ ದುಡಿಮೆ ಮತ್ತು ವೇತನ ರಹಿತ ದುಡಿಮೆ
2) ಸ್ವ ಉದ್ಯೋಗ ಮತ್ತು ಕೂಲಿ-ಕಂಬಳ.
3) ಗೃಹ ಕೆಲಸ ಮತ್ತು ಗೃಹಕೆಲಸಕ್ಕೆ ಸಂಬಂಧಸಿಲ್ಲದ ದುಡಿಮೆ
4) ಉತ್ಪಾದಕ ದುಡಿಮೆ ಮತ್ತು ಅನುತ್ಪಾದಕ ದುಡಿಮೆ

ಮಹಿಳಾ ದುಡಿಮೆಯ ಸ್ವರೂಪ:

1) ಸ್ತ್ರೀ ದುಡಿಮೆ ಅಗೋಚರವಾಗಿರುತ್ತದೆ. ಸಂಭಾವನೆಯಿಲ್ಲದ, ವೇತನ ರಹಿತ ದುಡಿಮೆಯಾಗಿ ರುವುದರಿಂದ ಅಗೋಚರವಾಗಿದೆ.
2) ಗೃಹಕೃತ್ಯಗಳಿಗೆ ಸಂಬಂಧಿಸಿರುತ್ತದೆ. ಮನೆ ಒಳಗಿನ ಕೆಲಸಗಳು ಮೌಲ್ಯಮಾಪನಕ್ಕೆ ಒಳಪಡುವುದಿಲ್ಲ. ಅದು ಅವಳ ಕರ್ತವ್ಯಗಳೆಂದು ಪರಿಗಣಿಸಲ್ಪಡುತ್ತವೆ.
3) ಮಹಿಳೆಯ ದುಡಿಮೆಯು ಜೀವದ ಉಳಿವಿಗಾಗಿ, ಕುಟುಂಬದ ಉಳಿವಿಗಾಗಿ ಮಾಡುವ ಕೆಲಸವಾಗಿರುತ್ತದೆ. ಇಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಲಾಭಗಳಿಸುವ ಉದ್ದೇಶವಿರುವುದಿಲ್ಲ.
4) ಮಹಿಳೆಯರು ದೀರ್ಘವಾದ , ಕೊನೆಯಿಲ್ಲದ ದೈಹಿಕ ಶ್ರಮದ ಕೆಲಸಗಳನ್ನು ಮಾಡುತ್ತಾರೆ. ಕೆಲಸದಲ್ಲಿ ಕ್ರಿಯಾಕೌಶಲವಿದ್ದರೂ ಅದು ಪರಿಗಣಿತವಾಗುವುದಿಲ್ಲ. ಉದಾ: ಹೆಣಿಗೆ ಹಾಕುವುದು, ಮನೆಔಷಧಿ ತಯಾರಿಸುವುದು, ಬುಟ್ಟಿನೇಯುವುದು ಇತ್ಯಾದಿ.
5) ಮಹಿಳೆಯರು ಮನೆಯ ಹೊರಗೆ ದುಡಿಯಬೇಕೋ ಬೇಡವೋ ಎನ್ನುವುದು ಒಂದು ಕುಟುಂಬ ಸಮಾಜದಲ್ಲಿ ಹೊಂದಿರುವ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಮೇಲುವರ್ಗದ ಕುಟುಂಬಗಳಲ್ಲಿ ಶಿಕ್ಷಣ, ಪ್ರತಿಭೆ ಹಾಗೂ ಸಾಮರ್ಥ್ಯ ಬಳಕೆಯಾಗಲು ಅಥವಾ ಸಮಯ ಸಮಯ ಕಳೆಯಲು ಮಹಿಳೆಯರು ಹೊರಗೆ ದುಡಿಯುವುದು ಕಂಡುಬರುತ್ತದೆ. ಮಧ್ಯಮವರ್ಗದ ಕುಟುಂಬಗಳಲ್ಲಿ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು,

ಜೀವನಮಟ್ಟವನ್ನು ಉತ್ತಮಗೊಳಿಸಲು ಕೆಲವೊಮ್ಮೆ ಸಂಕಷ್ಟಗಳ ಪರಿಸ್ಥಿತಿ ಬಂದಾಗ ಮಹಿಳೆಯರು ಕೆಲಸ ಮಾಡುವರು. ಕೆಳವರ್ಗದ ಬಡ ಕುಟುಂಬದ ಮಹಿಳೆಯರು ದುಡಿಯುವುದು ತಮ್ಮ ಹಾಗೂ ಕುಟುಂಬದ ಉಳಿವಿಗಾಗಿ ದುಡಿಮೆ ಅವರಿಗೆ ಜೀವನಾಧಾರ.

6) ಬಡತನದ ರೇಖೆಯಲ್ಲಿ ಬರುವ ಬಡ ಮಹಿಳೆಯರು ಹೆಚ್ಚಾಗಿ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಾರೆ. ಶೇ. ೯೦ ರಷ್ಟು ಮಹಿಳೆಯರು ಇಲ್ಲಿ ಕೇಂದ್ರೀಕೃತಗೊಂಡಿದ್ದಾರೆ. ಮನೆಗೆಲಸ, ಕೂಲಿಕೆಲಸ, ಗೃಹಕೈಗಾರಿಕೆ, ಸರ್ಕಾರದ ನಿಯಂತ್ರಣಕ್ಕೆ ಒಳಪಡದ ಸಣ್ಣ ಕೈಗಾರಿಕೆಗಳಲ್ಲಿ ದುಡಿಯುವುದು, ಕೃಷಿ ಕೆಲಸ, ಮೀನುಗಾರಿಕೆ ಮುಂತಾದವು ಅಸಂಘಟಿತ ಕ್ಷೇತ್ರದಲ್ಲಿ ಬರುತ್ತವೆ.

7) ಮಹಿಳೆಯರು ಕಡಿಮೆ ಕೂಲಿಯ ಕೌಶಲ್ಯರಹಿತ ಹಾಗೂ ಬಡ್ತಿ ಪಡೆಯಲು ಅವಕಾಶವಿಲ್ಲದಂತಹ ಕೆಲಸಗಳಲ್ಲಿ ಹೆಚ್ಚಾಗಿ ತೊಡಗಿರುತ್ತಾರೆ.

ನಮ್ಮ ದೇಶದಲ್ಲಿ ಸಂಖ್ಯಾದೃಷ್ಟಿಯಿಂದ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ. “೨೦೦೧ ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ ೧೦೨,೭೦,೧೫,೨೪೭”[೧] ಇದರಲ್ಲಿ ಪುರುಷರು ೫೩,೧೨,೭೭,೦೭೮ ಹಾಗೂ ಮಹಿಳೆಯರು ೪೯,೫೭,೩೮,೧೬೯ ಇದ್ದಾರೆ. ಅಲ್ಲದೆ ಭಾರತದಲ್ಲಿ ಸಾಕ್ಷರತೆ ಪುರುಷರದು ಶೇಕಡ ೬೭.೨೦ ಹಾಗೂ ಮಹಿಳೆಯರದು ಶೇಕಡ ೪೪.೩೪ ರಷ್ಟಿದೆ. ಈ ಅಂಕಿ-ಅಂಶಗಳಲ್ಲಿ ರಾಜ್ಯವಾರುಗಳಲ್ಲಿ ವ್ಯತ್ಯಾಸವನ್ನು ಕಾಣಬಹುದು.

ದುಡಿಯುವ ಮಹಿಳೆಯರ ದುಡಿಮೆ ಕಳೆದ ಮೂರು ದಶಕಗಳಲ್ಲಿ ಸಹಭಾಗಿತ್ವದ ಪ್ರಮಾಣವು ಶೇಕಡ ೩೦ ರ ಅಕ್ಕ-ಪಕ್ಕದಲ್ಲಿ ಏರು-ಪೇರು ಆಗುತ್ತಾ ಬಂದಿದೆ. ಅಧಿಕೃತ ಲಭ್ಯ ಅಂಕಿ-ಅಂಶಗಳ ಸಂಖ್ಯೆ ತೋರಿಸುವಂತೆ ಭಾರತದಲ್ಲಿ ದುಡಿಮೆಯ ಸಹಭಾಗಿತ್ವ (ಶೇಕಡವಾರುಗಳಲ್ಲಿ)”[೨]

ವರ್ಷಗಳು	**ಮಹಿಳೆಯರು**	**ಪುರುಷರು**
೧೯೭೨-೭೩	೩೧.೮	೫೪.೫
೧೯೭೭-೭೮	೩೩.೧	೫೫.೨
೧೯೮೩	೩೩.೧	೫೫.೨
೧೯೮೭-೮೮	೩೨.೩	೫೩.೯
೧೯೮೯-೯೦	೩೧.೯	೫೪.೮
೧೯೯೦-೯೧	೨೯.೨	೫೫.೩
೧೯೯೨	೩೧.೩	೫೫.೬
೧೯೯೩-೯೪	೩೨.೮	೫೫.೩
೧೯೯೪-೯೫	೩೧.೭	೫೬.೦
೧೯೯೫-೯೬	೨೯.೫	೫೫.೧
೧೯೯೭	೨೯.೧	೫೫.೦
೧೯೯೮	೨೬.೩	೫೫.೦

ಭಾರತದ ಸಂವಿಧಾನವು ಸ್ತ್ರೀ-ಪುರುಷರಿಗೆ ಸಮಾನವಾದ ಹಕ್ಕುಗಳನ್ನು ನೀಡಿದೆ. ಸ್ತ್ರೀ ಎಂಬ ದೃಷ್ಟಿಯಿಂದ ಅವರ ಬಗೆಗೆ ತಾರತಮ್ಯ ಮಾಡುವಂತಿಲ್ಲ. ಕಾಯಿದೆಯು ಎಲ್ಲರಿಗೂ ಸಮಾನವಾಗಿ ಅನ್ವಯವಾಗುತ್ತದೆ. ಆದರೆ, ಮೇಲೆ ತಿಳಿಸಿದ ಅಂಕಿ-ಅಂಶಗಳಿಂದ ತಿಳಿದು ಬರುವುದೇನೆಂದರೆ, ಹೆಣ್ಣು ಹುಟ್ಟಿನಿಂದ ಸಾವಿನವರೆಗೆ ಅಷ್ಟೇ ಅಲ್ಲ ಭ್ರೂಣವಸ್ಥೆಯಿಂದಲೇ ಭೇದಭಾವಕ್ಕೆ, ತಾರತಮ್ಯಕ್ಕೆ, ಅನ್ಯಾಯಕ್ಕೆ ಬಲಿಯಾಗುತ್ತಿದ್ದಾಳೆ. ಜೀವನ ಚಕ್ರದಲ್ಲಿ ಜನನಕ್ಕಿಂತ ಮೊದಲೇ ಭ್ರೂಣಪರೀಕ್ಷೆಯ ಮುಖಾಂತರ ಪ್ರಾರಂಭವಾಗಿ ಮುಂದೆ ಶಿಶುಹತ್ಯೆ, ಬಾಲ್ಯವಿವಾಹ, ಹೆಣ್ಣು ಶಿಶುಗಳ ಮಾರಾಟ, ಲಿಂಗಭೇದ ಹೀಗೆ ನಾನಾ ರೀತಿಯ ಹಂತದಲ್ಲಿ ಮಹಿಳೆಯ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ.

ಕಳೆದ ೪-೫ ದಶಕಗಳಲ್ಲಿ ಮಹಿಳೆಯರ ಪ್ರಮಾಣ ಕಡಿಮೆಯಾಗುತ್ತಾ ನಡೆದಿದೆ. ಇದಕ್ಕೆ ಹಲವಾರು ಕಾರಣಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ತಂತ್ರಜ್ಞಾನ ಮುಂದುವರೆದಿರುವುದು, ವರದಕ್ಷಿಣೆ ಪದ್ಧತಿ, ಗರ್ಭಪಾತ, ಭ್ರೂಣಪರೀಕ್ಷೆ, ಹೆಣ್ಣು ಭ್ರೂಣಹತ್ಯೆಯ ಸಮಸ್ಯೆ ಮುಂತಾದವುಗಳು. ಹೇಳಬೇಕೆಂದರೆ ಮಹಿಳಾ ಶೋಷಣೆಯ ಬೀಜ ಕುಟುಂಬದ ಒಳಗೆ ಅಂತರ್ಗತವಾಗಿದೆ. ಬಾಲ್ಯದಲ್ಲಿಯೇ ಹೆಣ್ಣು ಜೋರಾಗಿ ಮಾತಾಡಬಾರದು, ಮನಬಿಚ್ಚಿ ನಗಬಾರದು, ತನಗಿಷ್ಟಬಂದಲ್ಲಿ ಓಡಾಡಬಾರದು, ನಾಳೆ ಗಂಡನ ಮನೆಗೆ ಹೋಗುವವಳು ಎನ್ನುತ್ತಾ ಅವಳ ವ್ಯಕ್ತಿತ್ವದ ವಿಕಾಸ ಹಾಗೂ ಮಾನಸಿಕ ವಿಕಾಸಕ್ಕೆ ಅವಕಾಶವೇ ಇಲ್ಲದಂತೆ ಮಾಡಿದೆ. ಹೀಗೆ ಮಹಿಳೆಯನ್ನು ಒಂದಲ್ಲ ಒಂದು ರೀತಿ ಸಾಮಾಜಿಕ ಸಂಕೋಲೆಯಲ್ಲಿ ಬಂಧಿಸುವ ಪ್ರಯತ್ನವನ್ನು ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಮಾಡಿಕೊಂಡು ಬರಲಾಗುತ್ತಿದೆ.

ಇಂದು ಮಹಿಳೆ ಹಲವಾರು ಸಮಸ್ಯೆಗಳ ಮಧ್ಯೆ ಹಲವಾರು ತಾರತಮ್ಯಗಳ ಮಧ್ಯೆ ಕುಟುಂಬದ ಚಾಲಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ. ಅಲ್ಲದೆ ಆರ್ಥಿಕ, ಸಾಮಾಜಿಕ ಕ್ಷೇತ್ರಗಳ ಸಹಭಾಗಿತ್ವದಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾಳೆ. ಸಮಾಜದ ಆರ್ಥಿಕ ರಂಗಗಳಲ್ಲಿ ಪಾಲ್ಗೊಳ್ಳುವುದರಿಂದ ಆರ್ಥಿಕತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾಳೆ. ಅದರಲ್ಲೂ ಔದ್ಯೋಗಿಕ ಕ್ಷೇತ್ರದಲ್ಲಿ ಹೆಚ್ಚು ಸಮಯ ತೊಡಗಿಸಿಕೊಂಡಿದ್ದಾಳೆ. ಇದರಿಂದ ಕೈಗಾರಿಕಾ ವಲಯವನ್ನು ಪ್ರಗತಿಯತ್ತ ಕೊಂಡೊಯ್ಯುವಲ್ಲಿ ಮಹಿಳೆ ದುಡಿಮೆಗಾರಳಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ. ಇಷ್ಟೆಲ್ಲ ಪ್ರಯತ್ನಗಳ ನಡುವೆಯೂ ಔದ್ಯೋಗಿಕ ಕ್ಷೇತ್ರದಲ್ಲಿ ಪುರುಷರಿಗೆ ಪ್ರಾಧ್ಯಾನ್ಯವಿರುವಂತೆ ಮಹಿಳೆಯರಿಗೆ ಪ್ರಾಧಾನ್ಯ ನೀಡಲಾಗಿಲ್ಲ. ಕಾರಣ ಇಷ್ಟೆ, ಮಹಿಳೆಯರಿಗೆ ಹೆಚ್ಚಿನ ಸೌಲಭ್ಯಗಳ್ನು ನೀಡಬಾರದೆನ್ನುವ ಬಂಡವಾಳಶಾಹಿಗಳ ಹುನ್ನಾರ, ಇದರ ಜೊತೆಗೆ ಮಹಿಳೆಯರನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳುವ ತಂತ್ರ ಎಂದು ಹೇಳಿದರೆ ತಪ್ಪಾಗಲಾರದು.

ದುಡಿಯುವ ಮಹಿಳೆಯ ಪಾತ್ರವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಒಂದು ಮುಖ್ಯ ಪ್ರಶ್ನೆ ಎದುರಾಗುತ್ತದೆ. ಅದೇನೆಂದರೆ ನಿಜವಾಗಿಯೂ ದುಡಿಯುವ ಮಹಿಳೆಯಾರು? ಎಂಬುದು ಈ ಪ್ರಶ್ನೆಗೆ ಉತ್ತರ ಬಹಳ ಅಗತ್ಯವಾದುದು. ಏಕೆಂದರೆ, ಪರಿಣಾಮಕಾರಿಯಾದ ದುಡಿಯುವ ಮಹಿಳೆಯರ ಗುಂಪಿನ ಬಗ್ಗೆ ತಿಳಿದುಕೊಳ್ಳುವುದು ಸೂಕ್ತವಾಗಿದ್ದು ಕೆಲವು ಸಾಮಾಜಿಕ ತಜ್ಞರು ಹಾಗೂ ಮಹಿಳಾ ಅಧ್ಯಯನಕಾರರು, ದುಡಿಯುವ ಮಹಿಳೆಯು ತನ್ನ ಸ್ವಸಾಮರ್ಥ್ಯದಿಂದ ಅಥವಾ ಸಮಾಜದ ಪ್ರಭಾವದಿಂದಲೂ ಅಥವಾ ದಿನನಿತ್ಯ ಕೂಲಿ ಆಧಾರದ ಮೇಲೆ ಕೆಲಸ ಮಾಡುವ ಮಹಿಳೆಯನ್ನು ದುಡಿಯುವ ಮಹಿಳೆ ಎಂದು ಗುರುತಿಸಲಾಗಿದೆ. ಇನ್ನೂ ಕೆಲವು ತಜ್ಞರು, ಮಹಿಳೆಯ ದುಡಿಮೆಗೆ ಸಂಬಂಧಪಟ್ಟಂತೆ ದುಡಿಯುವ ಮಹಿಳೆಯು ತನ್ನ ಮನೆಯಿಂದ ಹೊರಗಿನ ದುಡಿಮೆಯನ್ನು ಆಧರಿಸಿ ಅಥವಾ ತಾನು ಮಾಡಿದ ಸೇವೆಗೆ ಬೆಲೆ ಬಯಸಿ ದುಡಿಯುವವಳನ್ನು 'ದುಡಿಯುವ ಮಹಿಳೆ' ಎಂದು ಗುರುತಿಸುತ್ತಾರೆ.

ಒಟ್ಟಾರೆಯಾಗಿ ದುಡಿಮೆಯಿಂದಾಗ ಅದರಲ್ಲೂ ಮಹಿಳಾ ದುಡಿಮೆ ಎನ್ನುವಂಥ ಸಂದರ್ಭದಲ್ಲಿ ಇವತ್ತು ಬೆಲೆಯೇ ಇಲ್ಲದ ಮನೆಗೆಲಸದಲ್ಲಿ ತೊಡಗಿರುವಂತಹ ಮಹಿಳೆ, ಅವಳು ದುಡಿಮೆಗಾರಳಾಗಲಿ, ದುಡಿಮೆಗಾರಳಲ್ಲದೇ ಇರಲಿ ಹೆಣ್ಣು ಎಂದು ಕರೆಸಿಕೊಳ್ಳುವ ಎಲ್ಲರೂ ಕೂಡ ಈ ಎರಡೂ ರೀತಿಯ ದುಡಿಮೆಯಲ್ಲಿ ಪಾಲ್ಗೊಂಡವರೇ ಆಗಿರುತ್ತಾರೆ. ಹಾಗಾಗಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಹಲವಾರು ಕಾರಣಗಳಿಂದಾಗಿ ಏರುತ್ತಿದೆ.

ಅ) ಮಧ್ಯಮ ವರ್ಗದ ಕುಟುಂಬದ ಆರ್ಥಿಕ ಅಗತ್ಯಗಳಿಗಾಗಿ

ಆ) ತನ್ನ ವರಮಾನದಿಂದ ಕುಟುಂಬದಲ್ಲಿ ಒಂದು ಸ್ಥಾನ ಪಡೆಯಬಹುದೆಂಬ ಅಭಿಲಾಷೆಯಿಂದ.

ಇ) ಮದುವೆ ಮಾರುಕಟ್ಟೆಯಲ್ಲಿ ಹೆಚ್ಚಿನ ಮೌಲ್ಯಗಳಿಸಿಕೊಳ್ಳುವುದಕ್ಕಾಗಿ

ಈ) ತಮ್ಮದೇ ಅಭಿಲಾಷೆಗಳಿಗಾಗಿ ಹಾಗೂ ವ್ಯಕ್ತಿತ್ವದ ವಿಸ್ತರಣೆಗಾಗಿ.

ಈ ಎಲ್ಲಾ ಕಾರಣಗಳಿಗಾಗಿ ಭಾರತೀಯ ಮಹಿಳೆ ಉದ್ಯೋಗಸ್ಥಳಾದರೂ ಅವಳು ಕೆಲವೊಂದು ಅಡ್ಡಿ-ಆತಂಕಗಳನ್ನು ಎದುರಿಸಲೇಬೇಕಾಗಿದೆ. ಸಾಂಪ್ರದಾಯಿಕವಾದ ಮಗಳು, ಪತ್ನಿ, ತಾಯಿ ಪಾತ್ರಕ್ಕೆ ನಿಷ್ಠೆ ತೋರಿ, ಆರ್ಥಿಕ ಸ್ವಾತಂತ್ರ್ಯವನ್ನು ಉಳಿಸಿಕೊಂಡು ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳಲು ಆಕೆ ಹೆಣಗಬೇಕಾಗಿದೆ.

ಭಾರತೀಯ ಮಹಿಳೆಯ ಬದುಕಿನಲ್ಲಿ ದುಡಿಮೆಯು ಎರಡನೇ ಸ್ಥಾನವನ್ನು ಪಡೆದುಕೊಳ್ಳ ಬೇಕಾಗಿದೆ. ''ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರು ಪಾಲ್ಗೊಳ್ಳುವಂತೆ ಮಾಡಿದ್ದ ಸಮಾನತೆಯ ವಿಚಾರಗಳನ್ನು ಹೇಳಿದ ಮಹಾತ್ಮಗಾಂಧೀಜಿಯವರೂ''[೩] ಕೂಡ ಮಹಿಳಾ ಉದ್ಯೋಗದ ಬಗೆಗೆ ಹೆಚ್ಚು

ಸಾಂಪ್ರದಾಯಿಕ ಅಭಿಪ್ರಾಯಗಳನ್ನೇ ಇರಿಸಿಕೊಂಡಿದ್ದರು. ಮಹಿಳೆಯು ತನ್ನ ಮಗಳು-ಪತ್ನಿ-ತಾಯಿ ಪಾತ್ರಕ್ಕೆ ಧಕ್ಕೆಯಾಗದಂತೆ ಇರುವ ಉದ್ಯೋಗದಲ್ಲಿ ತೊಡಗಬೇಕೆಂದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಆದರೆ ಪರಂಪರಾಗತವಾದ ಮನೆ ನಿರ್ವಹಣೆಗೆ ತಕ್ಕುದಲ್ಲದ ಉದ್ಯೋಗವು ಸಂಘರ್ಷ ಉಂಟುಮಾಡುವಂತಹುದಾದರೆ ಮಹಿಳೆ ಅಂಥ ಕೆಲಸ ಬಿಡುವುದು ಒಳಿತು ಎನ್ನುವುದು ಗಾಂಧೀಜಿಯವರ ನಿಲುವು.

ಶ್ರಮಜೀವಿ ಮಹಿಳೆಯಾದರೂ ತನಗೆ ದುಡಿಮೆಯಿಂದ ದೊರೆತಿರುವ ಸ್ವಾತಂತ್ರ್ಯ ಮತ್ತು ಹಕ್ಕಿನಿಂದಾಗಿ ಸಾಮಾಜಿಕ ಅನ್ಯಾಯಗಳ ವಿರುದ್ಧ ವಿಶೇಷವಾಗಿ ಮಹಿಳೆಯರ ಸಮಸ್ಯೆಗಳ ವಿರುದ್ಧ ಹೋರಾಡಬಲ್ಲಳು. "ದುಡಿಮೆಯು ಹೆಣ್ಣಿನ ಮೂಲಭೂತ ಹಕ್ಕು" ಎಂಬುದನ್ನು ಒಪ್ಪಿಕೊಂಡಮಹಿಳೆಯರು ಈ ಮೂಲಭೂತ ಹಕ್ಕಿನ ಬಗ್ಗೆ ಉಳಿದ ಮಹಿಳೆಯರೂ ಪ್ರಜ್ಞಾವಂತರಾಗಿ ಎಚ್ಚರಗೊಳ್ಳುವಂತೆ ಮಾಡಬೇಕಾದ ಕೆಲಸವನ್ನು ಕೈಗೆತ್ತಿಗೊಳ್ಳಬೇಕಾಗಿದೆ.

ಒಟ್ಟಾರೆಯಾಗಿ ಅಂಕಿ-ಅಂಶಗಳ ಆಧಾರದ ಮೇಲೆ ಮಹಿಳಾ ಉದ್ಯೋಗಿಗಳ ಸಂಖ್ಯೆ ಇಳಿಮುಖವಾಗುತ್ತಿದ್ದರೂ ಅವರ ಗುಣಮಟ್ಟ ಗಮನಿಸಿದಾಗ ಮಹಿಳೆಯರ ದುಡಿಮೆಯ ಕ್ಷೇತ್ರ ವಿಸ್ತಾರಗೊಂಡಿದೆ. ಸಾಮಾಜಿಕ ಚಟುವಟಿಕೆಯ ಎಲ್ಲ ರಂಗಗಳಲ್ಲಿಯೂ ಅವಳು ಇಂದು ದುಡಿಯುತ್ತಿದ್ದಾಳೆ, ಕ್ರಿಯಾಶೀಲವಾಗಿದ್ದಾಳೆ. ಸಾಮಾನ್ಯವಾದ ವೈದ್ಯಕೀಯ, ನರ್ಸಿಂಗ್, ಶಿಕ್ಷಣ, ಆಡಳಿತದಂಥ ಕ್ಷೇತ್ರಗಳ ಜೊತೆಗೆ ಸಾಂಪ್ರದಾಯಿಕವಲ್ಲದ ಜಾಹಿರಾತು, ಸಾರ್ವಜನಿಕ ಸಂಪರ್ಕ, ಪತ್ರಿಕೋದ್ಯಮ, ನಾಗರೀಕ ವಿಮಾನಯಾನ, ಎಂಜಿನಿಯರಿಂಗ್, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಸಾಂಪ್ರದಾಯಿಕವಲ್ಲದ ಕ್ಷೇತ್ರವನ್ನು ಪ್ರವೇಶಿಸುವ ಮಹಿಳೆ ಅನೇಕ ಅಡ್ಡಿಗಳನ್ನು ದಾಟಬೇಕಾಗಿದೆ.

ಮಹಿಳೆಯರ ಜೀವನವನ್ನು ಐತಿಹಾಸಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದಾಗ ಕಳೆದುಹೋದ ಶತಮಾನಗಳಲ್ಲಿ ಮಹಿಳೆಯರ ಬದುಕಿನಲ್ಲಿ ಅನೇಕ ಬದಲಾವಣೆಗಳು ಆಗಿ ಹೋಗಿವೆ ಎನಿಸಿದರೂ, ಸಮಕಾಲೀನ ಸಮಾಜದ ವಾಸ್ತವಗಳ ಹಿನ್ನೆಲೆಯಲ್ಲಿ ಭಾರತದ ಮಹಿಳೆಯರ ಪರಿಸ್ಥಿತಿಯನ್ನು ಪರಿಶೀಲಿಸಿದಾಗ ಈ ಬದಲಾವಣೆಗಳು ಎಲ್ಲ ಮಹಿಳೆಯರಿಗೂ ಏಕ ರೀತಿಯಲ್ಲಿ ಅನ್ವಯಿಸುತ್ತಿಲ್ಲ ಎಂಬ ವಿಷಯ ಸ್ಪಷ್ಟವಾಗುತ್ತದೆ. ಮಹಿಳೆಯರ ಪರಿಸ್ಥಿತಿ ಬದಲಾಗುತ್ತಿದೆ ಎಂದು ಹೇಳುವುದು ಹೆಚ್ಚು ಸೂಕ್ತವೇ ಹೊರತು, ಎಲ್ಲವೂ ಬದಲಾಗಿದೆ ಎಂದು ಹೇಳುವುದು ಅತಿಶಯೋಕ್ತಿಯಾದೀತು. ಕಾನೂನು

ಬದಲಾಗಬಹುದು, ಸರ್ಕಾರಿ ನೀತಿಗಳು ಹಾಗೂ ಧೋರಣೆಗಳು ಬದಲಾಗಬಹುದು, ಆದರೆ ಸಾಂಸ್ಕೃತಿಕ ಮೌಲ್ಯಗಳು ಹಾಗೂ ನಂಬಿಕೆಗಳು ಬದಲಾಗುವುದು ಸುಲಭ ಸಾಧ್ಯವಲ್ಲ. ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಲಿಂಗ ಪೂರ್ವಗ್ರಹಗಳು ಮಹಿಳೆಯರ ಅಭಿವೃದ್ಧಿಯ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುತ್ತದೆ.

ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ದೊಡ್ಡದ್ದು. ಯಾವುದೇ ರಾಷ್ಟ್ರ ಮಹಿಳೆಯರ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳದೆ ಮುನ್ನಡೆಯಲಾರದು. ಆದ್ದರಿಂದ, ಮಹಿಳೆಯರ ಸಾಮರ್ಥ್ಯವನ್ನು ರಾಷ್ಟ್ರದ ಏಳಿಗೆಗೆ ಬಳಸಿಕೊಳ್ಳಲೇಬೇಕು. ಕೆಲಸವಿಲ್ಲದ ಮಹಿಳೆ ನಿರುಪಯುಕ್ತ ಜೀವನ ನಡೆಸಿ ದೇಶಕ್ಕೆ ಹೊರೆಯೆನಿಸುತ್ತಾಳೆ. ಮಹಿಳೆಯನ್ನು ಪುರುಷರೊಡನೆ ಎಲ್ಲಾ ವಿಧಗಳಲ್ಲಿಯೂ ಹೋಲಿಸುವುದು ಸರಿಯಲ್ಲ. ಪುರುಷರು ಮಾಡುವ ಕೆಲವು ಕೆಲಸಗಳನ್ನು ಅವಳು ಮಾಡಬೇಕೆಂಬುದರಲ್ಲಿ ಅರ್ಥವಿಲ್ಲ. ಮುಖ್ಯವಾಗಿ ಮಹಿಳೆ ಯಾವ ಕೆಲಸಗಳನ್ನು ಮಾಡಲು ಶಕ್ತಳೋ ಅಂತಹ ಕೆಲಸಗಳನ್ನು ಆಕೆ ನಿರ್ವಹಿಸುವುದು ಸೂಕ್ತ.

ಸಾರ್ವಜನಿಕ ಮತ್ತು ಸಾಮಾಜಿಕ ಸ್ಥಾನಮಾನ ಪಡೆದಿರುವ ಹಾಗೂ ಮನೆಯ ಹೊರಗಿನ ನೆಲೆಯನ್ನು ಹೊಂದಿರುವ ಪುರುಷರ ದುಡಿಮೆಯನ್ನು ಮಾತ್ರ ದುಡಿಮೆಯೆಂದು ಜ್ಞಾನ-ವಿಜ್ಞಾನಗಳು ನಿರ್ವಚಿಸಿಕೊಂಡಿವೆ. 'ದುಡಿಮೆಗಾರ' , 'ಬ್ರೆಡ್‌ವಿನ್ನರ್' ಎನ್ನುವ ನುಡಿಗಳು ಪುರುಷ ಸೂಚಿಗಳಾಗಿವೆ. ಮಹಿಳೆಯರ ದುಡಿಮೆ ಪ್ರಧಾನವಾಗಿ ವರಮಾನೇತರವೂ, ಕುಟುಂಬ ಸಂಬಂಧಿಯೂ ಆಗಿರುತ್ತದೆ. ಜ್ಞಾನ-ವಿಜ್ಞಾನಗಳು, ಸಮಾಜ ವಿಜ್ಞಾನಗಳು ದುಡಿಮೆಯನ್ನು ವರಮಾನಕ್ಕೆ ಸಂಬಂಧಿಸಿದಂತೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ನಿರ್ವಚಿಸಿಕೊಂಡಿರುವುದರಿಂದ ವರಮಾನೇತರ ದುಡಿಮೆ, ಕುಟುಂಬ ಸಂಬಂಧಿ ದುಡಿಮೆ, ಕುಟುಂಬೇತರ ದುಡಿಮೆಯು ಅಧ್ಯಯನ ಶಿಸ್ತುಗಳ ನೆಲೆಯಲ್ಲಿ ದುಡಿಮೆಯೆನಿಸಿಕೊಳ್ಳುವುದಿಲ್ಲ. ಸಂಪಾದನೆಯ ಗುಣವನ್ನು ಹೊಂದಿರುವ ಚಟುವಟಿಕೆಗಳು ಮಾತ್ರ ಇಲ್ಲಿ ದುಡಿಮೆ ಎನಿಸಿಕೊಳ್ಳುತ್ತವೆ.

ದುಡಿಮೆಯೆನಿಸಿಕೊಳ್ಳಲು ಈ ಕೆಳಕಂಡ ಗುಣಗಳಿರಬೇಕು.

1) ಸಂಪಾದನಾ ಚಟುವಟಿಕೆಗಳಾಗಿರಬೇಕು.
2) ಮಾರುಕಟ್ಟೆಯನ್ನು ಗುರಿಯನ್ನಾಗಿಟ್ಟುಕೊಂಡಿರಬೇಕು.
3) ವರಮಾನ ಸಂಬಂಧಿಯಾಗಿರಬೇಕು.
4) ವಿನಿಮಯ ಮಹತ್ವ ಪಡೆದಿರಬೇಕು.
5) ಮನೆಯ ಹೊರಗೆ ನೆಲೆಗೊಂಡಿರಬೇಕು.

6) ಸಾರ್ವಜನಿಕ ಗುಣ ಹೊಂದಿರಬೇಕು.

7) ಗಣನೆಗೆ, ಮಾಪನಕ್ಕೆ ಒಳಗೊಳ್ಳುವಂತಿರಬೇಕು.

ಮಹಿಳೆಯರು ಮಾಡುವ ಅನೇಕ ಕೆಲಸಗಳಿಗೆ ಮೇಲಿನ ಪಟ್ಟಿಯಲ್ಲಿರುವ ಗುಣಗಳಿರುವುದಿಲ್ಲ. ಮಹಿಳೆಯರ ಯಾವ ದುಡಿಮೆಗೆ ಮೇಲಿನ ಪಟ್ಟಿಯಲ್ಲಿರುವ ಗುಣಗಳಲ್ಲಿ ಕೆಲವಾದರೂ ಇರುತ್ತವೋ ಅವುಗಳನ್ನು ಅಧ್ಯಯನ ಶಿಸ್ತುಗಳು ದುಡಿಮೆಯೆಂದು ಪರಿಗಣಿಸುತ್ತವೆ. ಮಹಿಳೆಯರ ದುಡಿಮೆಯು ಅನೇಕ ಸಂದರ್ಭಗಳಲ್ಲಿ ಭಾವನಾತ್ಮಕವಾಗಿರುತ್ತದೆ. ಮಾನಸಿಕವಾಗಿರುತ್ತದೆ, ಸಂಗೋಪನಾವಾದಿ ಯಾಗಿರುತ್ತದೆ. ಮಹಿಳೆಯರ ದುಡಿಮೆಯು ಕುಟುಂಬದ ಹಿತಾಸಕ್ತಿಗಳನ್ನು ಪೂರೈಸುವಲ್ಲಿಗೆ ಸೀಮಿತಗೊಂಡಿರುತ್ತದೆ. ಈ ಬಗೆಯ ಮಹಿಳೆಯರ ದುಡಿಮೆಯು ಕುಟುಂಬದ ಸದಸ್ಯರ ಯೋಗಕ್ಷೇಮಕ್ಕೆ ಅತ್ಯಂತ ಅಗತ್ಯವಾಗಿರುತ್ತದೆ. ಆದರೆ ಈ ದುಡಿಮೆಗೆ ಸಾರ್ವಜನಿಕ ಮುದ್ರೆ ಇರುವುದಿಲ್ಲ. ಜೊತೆಗೆ ಅವು ಭೌತಿಕ ರೂಪದಲ್ಲಿರುವುದಿಲ್ಲ. ಅವು ಮಾರುಕಟ್ಟೆಯನ್ನು ಅಂತಿಮ ಗಮ್ಯಸ್ಥಾನವನ್ನಾಗಿ ಮಾಡಿಕೊಂಡಿರುವುದಿಲ್ಲ. ಈ ಕಾರಣದಿಂದ ಕೆಲವೊಮ್ಮೆ ದುಡಿಮೆಯೆನಿಸಿಕೊಳ್ಳುವುದಿಲ್ಲ. ಸೈದ್ಧಾಂತಿಕವಾಗಿಯೇ ಸಮಾಜ ವಿಜ್ಞಾನಗಳು ದುಡಿಮೆಗೆ ನೀಡಿರುವ ನಿರ್ವಚನ ಪುರುಷಶಾಹಿಯಾಗಿದೆ ಮತ್ತು ಏಕಲಿಂಗಿಯಾಗಿದೆ.

ಮಹಿಳೆಯರ ದುಡಿಮೆಯನ್ನು ಮಾಪನ ಮಾಡಲು ಸಾಧ್ಯವಿಲ್ಲದಿರುವುದು ಅದು ದುಡಿಮೆಯಲ್ಲವೆನಿಸಿಕೊಳ್ಳಲು ಕಾರಣವಾಗಬಾರದು. ಇದು ಮೌಲ್ಯಮಾಪನದ ವಿಧಾನದ ಲೋಪ. ಈ ಲೋಪವನ್ನು ಸರಿಪಡಿಸಿಕೊಳ್ಳದೇ ಮಹಿಳೆಯರ ದುಡಿಮೆಯನ್ನು ತೂಗಲು ಸಾಧ್ಯವಿಲ್ಲ. ಪುರುಷಶಾಹಿ ಸ್ತ್ರೀ-ಪುರುಷ ನಡುವಿನ ಜೈವಿಕ ವ್ಯತ್ಯಾಸಗಳನ್ನು ಅತಿಯಾಗಿ ದೊಡ್ಡದ್ದು ಮಾಡಿದೆ. ಜೈವಿಕವಾಗಿ ಭಿನ್ನತೆಗಳಿರುವುದರಿಂದ ಸ್ತ್ರೀಯರು-ಪುರುಷರು ಸಮಾಜದಲ್ಲಿ ಸಮಾನ ಪಾತ್ರಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂಬ ನಂಬಿಕೆ ಕೇವಲ ಮಿಥ್ಯೆಯಾಗಿದೆ. ಸ್ತ್ರೀಯರಲ್ಲಿ ಮತ್ತು ಪುರುಷರಲ್ಲಿ ಲಿಂಗ ನಿರ್ದಿಷ್ಟ ಗುಣಗಳು ಹಾಗೂ ಪಾತ್ರಗಳು ಸೃಷ್ಟಿಯಾಗಿರುವುದಕ್ಕೆ ಲಿಂಗ ತಾರತಮ್ಯ ಸಾಮಾಜೀಕರಣವೇ ಕಾರಣವಾಗಿದೆ.

ಪುರುಷಶಾಹಿ ವ್ಯವಸ್ಥೆಯು ಪುರುಷರಿಗೆ ಅತಿಪ್ರಾಧಾನ್ಯ ನೀಡಿ, ಅವರ ಪಾತ್ರವನ್ನು ಶ್ರೇಷ್ಠವೆಂದು ಪರಿಗಣಿಸಿದೆ. ಇದೇ ವ್ಯವಸ್ಥೆಯು ಸ್ತ್ರೀಯರ ಪಾತ್ರವನ್ನು, ಅವರು ಮಾಡುವ ಕಾರ್ಯಗಳನ್ನು ಅತಿ ಗೌಣವಾಗಿ ಕಂಡು, ಸ್ತ್ರೀಯರ ಮೇಲೆ ನಾನಾ ಬಗೆಯ ನಿಬಂಧನೆಗಳನ್ನು ಹೇರಿ ಲಿಂಗ ಅಸಮಾನತೆಯನ್ನು ಸೃಷ್ಟಿಸಿಬಿಟ್ಟಿದೆ. ಸ್ತ್ರೀ-ಪುರುಷರ ನಡುವಿನ ವ್ಯತ್ಯಾಸವನ್ನು ಸಮರ್ಥಿಸುವ, ಜೈವಿಕ ನಿಯತಿಯನ್ನು ಒಪ್ಪಿಕೊಳ್ಳುವ ಸಮಾಜ-ವಿಜ್ಞಾನಗಳು ಲಿಂಗ ಅಸಮಾನತೆಗೆ ಕಾರಣಗಳಾಗಿವೆ.

ಮಹಿಳೆಯರ ದುಡಿಮೆಯಲ್ಲಿ ಕೇವಲ ಸಂತಾನೋತ್ಪತ್ತಿ- ಸಂಗೋಪನಾ ವಲಯಕ್ಕೆ ಮಾತ್ರ ಸೀಮಿತಗೊಳಿಸುವುದು ಅರ್ಥಹೀನ. ಏಕೆಂದರೆ, ಅಭಿವೃದ್ಧಿಶೀಲ ದೇಶಗಳಲ್ಲಿ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಉತ್ಪದನಾ ಚಟುವಟಿಕೆಗಳಲ್ಲಿ ತೊಡಗಿರುವುದು ಸ್ಪಷ್ಟವಾಗಿದೆ. "ಕರ್ನಾಟಕ ರಾಜ್ಯದಲ್ಲಿನ ಒಟ್ಟು ದುಡಿಮೆಗಾರರ ಸಂಖ್ಯೆ ೧೭೨,೯೨ ಲಕ್ಷ. ಇವರಲ್ಲಿ ಮಹಿಳೆಯರ ಪ್ರಮಾಣ ಶೇ. ೩೦. ಕರ್ನಾಟಕದಲ್ಲಿನ ಕೃಷಿ ದುಡಿಮೆಗಾರರ ಸಂಖ್ಯೆ ೪೯.೯೯ ಲಕ್ಷ. ಇವರಲ್ಲಿ ಮಹಿಳೆಯರ ಸಂಖ್ಯೆ ೨೪.೮೭ ಲಕ್ಷ (ಶೇ.೪೯.೯೭)."೪ ನಮ್ಮ ಆರ್ಥಿಕತೆಯ ಬೆನ್ನೆಲುಬು ಕೃಷಿಯಾದರೆ ಕೃಷಿಯ ಬೆನ್ನೆಲುಬು ಮಹಿಳಾ ಕೃಷಿ ಕಾರ್ಮಿಕರಾಗಿದ್ದಾರೆ.

ಅಭಿವೃದ್ಧಿ ಶೀಲ ದೇಶಗಳಲ್ಲಿ ಮಹಿಳೆಯರ ದುಡಿಮೆಯು ಕೇವಲ ಕುಟುಂಬ ಸಂಬಂಧಿ ಚಟುವಟಿಕೆಗಳಿಗೆ ಮತ್ತು ಹೊಟ್ಟೆ ಬಟ್ಟೆ ಸಂಬಂಧಿ ಉತ್ಪಾದನಾ ಚಟುವಟಿಕೆಗಳಿಗೆ ಮೀಸಲಾಗಿರುತ್ತದೆ. ಈ ಬಗೆಯ ಬದಲಾವಣೆಯನ್ನು ಬಂಡವಾಳಶಾಹಿಯು ಉದ್ದೇಶಪೂರ್ವಕವಾಗಿ ಬೆಳೆಸುತ್ತಿರುತ್ತದೆ. ಕನಿಷ್ಠವಾದ ಸ್ಥಾನ-ಮಾನವನ್ನು ಹೊಂದಿರುವ ಹೊಟ್ಟೆ-ಬಟ್ಟೆ ಉತ್ಪಾದನಾ ವಲಯದಲ್ಲಿ ದುಡಿಯುವ ಮಹಿಳಾ ದುಡಿಮೆಗಾರರು ಎರಡನೆಯ ದರ್ಜೆ ದುಡಿಮೆಗಾರರಾಗಿರುತ್ತಾರೆ. ಬಂಡವಾಳಶಾಹಿ ಉತ್ಪಾದನಾ ವಲಯದಲ್ಲಿ ದುಡಿಯುವ ದುಡಿಮೆಗಾರರು ಉನ್ನತದರ್ಜೆಯ ದುಡಿಮೆಗಾರರಾಗಿರುತ್ತಾರೆ. ನಮ್ಮ ಸಮಾಜ ಇಂದು ಈ ಬಗೆಯ ವಿಚಿತ್ರ ಸ್ಥಿತಿಯನ್ನು ಅನುಭವಿಸುತ್ತಿದೆ. ಹೊಟ್ಟೆಬಟ್ಟೆ ಉತ್ಪಾದನಾ ವಲಯ ನಾಶವಾಗಿ ಬಂಡವಾಳಶಾಹಿ ಉತ್ಪಾದನಾ ವಲಯ ಇಲ್ಲಿ ವಿಸ್ತರಿಸುತ್ತಿಲ್ಲ. ಹೊಟ್ಟೆಬಟ್ಟೆ ಉತ್ಪಾದನಾ ವ್ಯವಸ್ಥೆಯಲ್ಲಿ ಸಾಮಂತವಾದಿ ಸಂಬಂಧಗಳು, ಕುಲಸಂಬಂಧಿ ಸಂಗತಿಗಳು ಮುಂದುವರಿದಿವೆ. ಹೊಟ್ಟೆ-ಬಟ್ಟೆ ಉತ್ಪಾದನಾ ವಲಯವನ್ನು ಬಿಡಲಾರದೆ, ಅಲ್ಲಿಯೇ ಮುಂದುವರಿದ ಮಹಿಳಾ ದುಡಿಮೆಗಾರರು ಸಾಮಂತವಾದಿ ಉತ್ಪಾದನಾ ಸಂಬಂಧಗಳ ಮತ್ತು ಪುರುಷಶಾಹಿಯ ಶೋಷಣೆಗೆ ಒಳಗಾಗಿದ್ದಾರೆ.

ಆದರೆ ಇಂದು ಪರಿಸ್ಥಿತಿ ಬದಲಾಗುತ್ತಿದೆ. ಮನೆಯ ಹೊರಗಿನ ದುಡಿಮೆಯು ಮಹಿಳೆಯರಲ್ಲಿ ಲಿಂಗಪ್ರಜ್ಞೆಯನ್ನು ಪ್ರಚೋದಿಸುತ್ತಿದೆ. ಉದ್ಯೋಗ, ವೇತನ, ಶಿಕ್ಷಣ ಮುಂತಾದವು ತಮಗೆ ತಾವೇ ಮಹಿಳೆಯರ ಬಿಡುಗಡೆಯ ಸಾಧನಗಳಾಗುವುದು ಸಾಧ್ಯವಿಲ್ಲ. ಮಹಿಳೆಯರು ಎಲ್ಲಿಯವರೆಗೆ ತಮ್ಮನ್ನು ತಾವು ಕುಟುಂಬದ ಜೊತೆಯಲ್ಲಿ ಸಮೀಕರಿಸಿಕೊಳ್ಳುತ್ತಿರುತ್ತಾರೋ ಅಲ್ಲಿಯವರೆಗೆ ಅವರ ದುಡಿಮೆಯ ಅಪಮೌಲ್ಯೀಕರಣ ಮುಂದುವರಿಯುತ್ತದೆ. ಮಹಿಳೆಯರು ತಮ್ಮನ್ನು ತಾವು ಆರ್ಥಿಕತೆಯ ಜೊತೆಗೆ, ರಾಜಕಾರಣದ ಜೊತೆಗೆ ಸಮೀಕರಿಸಿಕೊಳ್ಳಬೇಕು. ಮಹಿಳೆಯರ ಕೆಲಸ-ಪುರುಷರ ಕೆಲಸ, ಮಹಿಳೆಯರ ಕಾರ್ಯಕ್ಷೇತ್ರ, ಪುರುಷರ ಕಾರ್ಯಕ್ಷೇತ್ರವೆನ್ನುವ ವರ್ಗೀಕರಣ ಪ್ರತ್ಯೇಕೀಕರಣವನ್ನು ಹೋಗಲಾಡಿಸಲು ಪ್ರಯತ್ನಿಸಬೇಕು.

[illegible]

ಮಹಿಳೆಯರ ದುಡಿಮೆಯ ಬಹು ಮುಖ್ಯ ಲಕ್ಷಣವೆಂದರೆ ಅವರು ಕೆಲಸಗಳನ್ನು ಒಂದಾದ ಮೇಲೆ ಒಂದರಂತೆ ಮಾಡುವುದಿಲ್ಲ. ಅವರು ಏಕಕಾಲದಲ್ಲಿ ಅನೇಕ ಕೆಲಸಗಳನ್ನು ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಅವರ ದುಡಿಮೆಯ ಕಾಲಾವಧಿಯನ್ನು ಗಣನೆ ಮಾಡುವುದು ಕಷ್ಟ. ಅನೇಕ ಬಡದೇಶಗಳಲ್ಲಿ ಮಹಿಳೆಯರ ಉತ್ಪಾದನಾ ದುಡಿಮೆ ಹಾಗೂ ಗೃಹವಾರ್ತೆ ದುಡಿಮೆಗಳನ್ನು ಪರಸ್ಪರ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಮಹಿಳೆಯರ ದುಡಿಮೆಯ ಮತ್ತೊಂದು ಗುಣವೆಂದರೆ ಅದು ಅವಿರತವಾಗಿರುವುದು ದಿನದಲ್ಲಿ ಮೂರುಬಾರಿ ಅಡುಗೆ ಮಾಡಬೇಕು, ಶಿಶುಪಾಲನೆಯನ್ನು ವಿಳಂಬ ಮಾಡಲು ಸಾಧ್ಯವಿಲ್ಲ. ಅಭಿವೃದ್ಧಿಶೀಲ ದೇಶಗಳಲ್ಲಿನ ಮಹಿಳೆಯರ ದುಡಿಮೆಯ ಸ್ವರೂಪವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಮಹಿಳೆಯರ ದುಡಿಮೆಯ ಸ್ವರೂಪಕ್ಕಿಂತ ಭಿನ್ನವಾಗಿರುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಗೃಹವಾರ್ತೆ ಕೆಲಸಗಳನ್ನು ಗೃಹೋಪಯೋಗಿ ಯಂತ್ರಗಳ ಮೂಲಕ ಮಾಡುವುದರಿಂದ ದುಡಿಮೆಯ ಬೆನ್ನುಮೂಳೆ ಮುರಿಯುವಂತಿರುವುದಿಲ್ಲ. ಗೃಹಬಳಕೆಗೆ ಬೇಕಾದ ಸರಕುಗಳನ್ನು ಸಿದ್ಧವಾದ ರೀತಿಯಲ್ಲಿ ಅಲ್ಲಿ ಖರೀದಿಸಬಹುದು.

ಅಭಿವೃದ್ಧಿಶೀಲ ದೇಶಗಳಲ್ಲಿ ಇಂತಹ ಅನುಕೂಲಗಳಿರುವುದಿಲ್ಲ. ಗೃಹಬಳಕೆಗೆ ಬೇಕಾದ ಎಲ್ಲ ವಸ್ತುಗಳನ್ನು ಮಹಿಳೆಯರು ಇಲ್ಲಿ ಕಚ್ಚಾ ಸಾಮಗ್ರಿ ಹಂತದಿಂದ ಪರಿಷ್ಕರಿಸಿ-ಸಂಸ್ಕರಿಸಿ ಸಿದ್ಧಮಾಡಿಕೊಳ್ಳಬೇಕು. ಗಂಡು-ಹೆಣ್ಣಿನ ನಡುವಿನ ಸಂಬಂಧವನ್ನು, ಸಂತಾನೋತ್ಪತ್ತಿ ಆರ್ಥಿಕೋತ್ಪಾದನೆ ನಡುವಿನ ವರ್ಗೀಕರಣವನ್ನು, ಸಂಗೋಪನೆ-ಸಂಪಾದನೆ ನಡುವಿನ ಆಶ್ಲೇಷವನ್ನು, ಉಪಯೋಗಿಸಿ ಮಹತ್ವ-ವಿನಿಯಮ ಮಹತ್ವಗಳ ನಡುವಿನ ಭಿನ್ನತೆಯನ್ನು ಪ್ರಕೃತಿ-ಸಂಸ್ಕೃತಿ ನೆಲೆಯಲ್ಲಿ ನೋಡುವ ವಿಧಾನ ಪಾಶ್ಚಿಮಾತ್ಯರಲ್ಲೂ ಇದೆ. ಮತ್ತು ಪೌರಾತ್ಯರಲ್ಲೂ ಇದೆ. ಮಹಿಳೆಯರನ್ನು ಪ್ರಕೃತಿ ಜೊತೆ ಪುರುಷನನ್ನು ಸಂಸ್ಕೃತಿ ಜೊತೆ ಸಮೀಕರಿಸುವ ಕ್ರಮ ಎರಡೂ ನಾಗರೀಕತೆಗಳಲ್ಲೂ ವಾಡಿಕೆಯಾಗಿದೆ. ಸಂತಾನೋತ್ಪತ್ತಿ ಚಟುವಟಿಕೆಗಳನ್ನು ಮಹಿಳೆಯರಿಗೆ ಮತ್ತು ಆರ್ಥಿಕೋತ್ಪಾದನೆಯನ್ನು ಪುರುಷರಿಗೆ ಮೀಸಲಿಟ್ಟಿರುವ ಕ್ರಮವನ್ನು ಕುರಿತಂತೆ ಸ್ತ್ರೀವಾದಿಗಳು ಉತ್ತರವನ್ನು ಪ್ರಕೃತಿ ಮತ್ತು ಸಂಸ್ಕೃತಿಗಳನ್ನು ಗ್ರಹಿಸಿಕೊಂಡಿರುವ ನೆಲೆಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ.

ಮಹಿಳೆಯರ ಚಟುವಟಿಕೆಗಳು ಜೈವಿಕ- ಪ್ರಾಕೃತಿಕವೆಂದು ಮತ್ತು ಪುರುಷರ ಚಟುವಟಿಕೆಗಳನ್ನು ಆರ್ಥಿಕ-ಸಾಂಸ್ಕೃತಿಕವೆಂದು ನೀಟಾಗಿ ವರ್ಗೀಕರಿಸುವ ಕ್ರಮವನ್ನು ಭಾರತೀಯ ಸ್ತ್ರೀವಾದಿಗಳು ಪ್ರಬಲವಾಗಿ ಪ್ರಶ್ನಿಸುತ್ತಿದ್ದಾರೆ. 'ಪ್ರಕೃತಿ' ಯು ದತ್ತವಾದ ಒಂದು ಸ್ವಾಭಾವ ಘಟಕವಾದರೆ, 'ಸಂಸ್ಕೃತಿ' ಯೆನ್ನುವುದು ರೂಪಿಸಿಕೊಂಡದ್ದು. ಪ್ರಕೃತಿಗೆ ಮಹಿಳೆಯಯನ್ನು ಸಂವಾದಿಯನ್ನಾಗಿ ಮಾಡುವ ವಿಧದಲ್ಲಿ ಪ್ರಕೃತಿಯ

ಗುಣಗಳೆಲ್ಲವನ್ನು ಮಹಿಳೆಯಲ್ಲೂ ಕಾಣಲಾಗುತ್ತಿದೆ. ಆದ್ದರಿಂದ ಪ್ರಕೃತಿಯನ್ನು ತಾಯಿಯೆಂದು, ಪ್ರಕೃತಿ ಮಾತೆಯೆಂದು ಪರಿಗಣಿಸಲಾಗಿದೆ. ಪ್ರಕೃತಿಯ ಗುಣಗಳಾದ ಸಹನೆ, ಪಾಲನೆ, ಫಲವತ್ತತೆ, ಪುನರುತ್ಪತ್ತಿ ಇತ್ಯಾದಿಗಳೆಲ್ಲವನ್ನು ಮಹಿಳೆಯಲ್ಲೂ ಕಾಣಲಾಗುತ್ತದೆ.

ಸಂಸ್ಕೃತಿ ಎಂದರೆ ಸೃಜನಶೀಲ ಬದುಕಿನ ಮೂಲ, ಸಮಾಜ ರೂಪಿತವಾದದ್ದು, ಪ್ರಕೃತಿಗಿಂತ ಜೇಷ್ಠವಾದುದು ಮತ್ತು ಉತ್ತಮವಾದುದು. ಪ್ರಕೃತಿ-ಸಂಸ್ಕೃತಿಗಳ ನಡುವಿನ ಸಂಬಂಧವು ಏಣಿ-ಶ್ರೇಣಿ ಸ್ವರೂಪದ್ದಾಗಿದೆ. ಪ್ರಕೃತಿಯು ಕನಿಷ್ಠ-ಸಂಸ್ಕೃತಿಯು ಜೇಷ್ಠ ಅಂದ ಮೇಲೆ ಮಹಿಳೆ ಕನಿಷ್ಠ, ಪುರುಷ ಜೇಷ್ಠ, ಸಂತಾನೋತ್ಪತಿಯು ಕನಿಷ್ಟ ಮೌಲ್ಯವುಳ್ಳದ್ದಾದರೆ ಆರ್ಥಿಕೋತ್ಪಾದನೆಯು ಜೇಷ್ಠ ಮೌಲ್ಯವುಳ್ಳದ್ದಾಗಿದೆ. ಸಂಸ್ಕೃತಿಯು ಪುರುಷನ ಕಾರ್ಯ ಸಂಪಾದನೆಯದ್ದಾದರೆ ಪ್ರಕೃತಿಯದ್ದು ಸಂಗೋಪನೆ. ಸಂಸ್ಕೃತಿಯು ಬೀಜವಾದರೆ ಪ್ರಕೃತಿಯು ಕ್ಷೇತ್ರ. ಅನೇಕ ಸ್ತ್ರೀವಾದಿಗಳ ಪ್ರಕಾರ ಇಂತಹ ಅರಿವು, ಗ್ರಹಿಕೆ , ನಂಬಿಕೆ, ಪೂರ್ವಗ್ರಹ ಸಂತಾನೋತ್ಪತ್ತಿ ಮತ್ತು ಆರ್ದಿಕೋತ್ಪಾದನೆ ಎಂಬ ವಗೀಕರಣದ ಮೂಲದಲ್ಲಿದೆ. ಇಲ್ಲಿ ಪ್ರಕೃತಿಯ ಗುಣವನ್ನು ಎಸೆನ್ಸಿಯಲಿಸ್ಟ್ ನೆಲೆಯಲ್ಲಿ ಗ್ರಹಿಸಿಕೊಳ್ಳಲಾಗಿದೆ. ಮಹಿಳೆಗೂ ಇಂತಹ ಎಸೆನ್ಸಿಯಲಿಸ್ಟ್ ಗುಣವನ್ನು ಆರೋಪಿಸಲಾಗಿದೆ. ಸಹನೆ, ಸಂಯಮ, ಫಲವತ್ತತೆ, ಪುನರುತ್ಪಾದನೆ ಸಂಮೃದ್ಧತೆ ಇವೆಲ್ಲ ಮಹಿಳಾ ಗುಣ ಎನ್ನಲಾಗಿದೆ.

ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ನೌಕರಿ-ಉದ್ಯೋಗಗಳಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಅಗಾಧವಾಗಿ ಬೆಳೆದಿದೆ. ಮಹಿಳೆಯರು ಮನೆಯ ಹೊರಗೆ ನೌಕರಿ ಮಾಡುವುದು ಪ್ರತಿಷ್ಠೆಗೆ ಗರಿ ಮೂಡಿಸುವ ಸಂಗತಿಯಾಗಿಬಿಟ್ಟಿದೆ. ಇಂದು ದುಡಿಯುವ ದಂಪತಿಗಳ ಸಂಖ್ಯೆ ಅಧಿಕವಾಗುತ್ತಿದೆ. ಲಿಂಗ ಸಂಬಂಧಿಗಳ ದೃಷ್ಟಿಯಿಂದ, ಲಿಂಗ ಸಮಾನತೆ ದೃಷ್ಟಿಯಿಂದ ಇದೊಂದು ಆರೋಗ್ಯಕಾರಿ ಬೆಳವಣಿಗೆಯಾಗಿದೆ. ಮನೆಯ ಹೊರಗಿನ ದುಡಿಮೆಯು ಮಹಿಳೆಯರಿಗೆ ಸ್ವಾತಂತ್ರ್ಯವನ್ನು, ಸ್ವಾವಲಂಬನೆಯನ್ನು ಮತ್ತು ಸಾಮಾಜಿಕ ಸಂಪರ್ಕವನ್ನು ಒದಗಿಸಬಲ್ಲುದಾಗಿದೆ. ಮನೆಯ ಹೊರಗಿನ ದುಡಿಮೆಯು ಮಹಿಳೆಯರ ಬದುಕಿನ ಮೇಲೆ ಉಂಟುಮಾಡಿರುವ ಪರಿಣಾಮಗಳು ತುಂಬಾ ಸಂಕೀರ್ಣ ಸ್ವರೂಪದಾಗಿವೆ. ಒಟ್ಟಾರೆಯಾಗಿ ದುಡಿಮೆಯನ್ನು ವೃತ್ತಿಯನ್ನಾಗಿ ಕೈಗೊಳ್ಳುವುದು ಮಹಿಳೆಯರಿಗೆ ಸಾಧ್ಯವಿಲ್ಲ. ಏಕೆಂದರೆ ಸೈದ್ಧಾಂತಿಕವಾಗಿ ಅವರನ್ನು ದುಡಿಮೆಗಾರರೆಂದು ಸಮಾಜ ಒಪ್ಪುವುದಿಲ್ಲ. ಪುರುಷ ವರ್ಗ ದುಡಿಮೆಯನ್ನು ಮಹಿಳೆಯರು ವೃತ್ತಿಯನ್ನಾಗಿ ಮಾಡಿಕೊಳ್ಳುವುದನ್ನು ಸಹಿಸುವುದಿಲ್ಲ. ಏಕೆಂದರೆ ಅವರ ದುಡಿಮೆಯು ಕೌಟುಂಬಿಕ ಚೌಕಟ್ಟಿಗೆ ಮಾತ್ರ ಮೀಸಲು ಎಂಬ ಅಭಿಪ್ರಾಯ ಬೇರೂರಿದೆ.

ಒಂದು ವೇಳೆ ಪುರುಷಶಾಹಿಯು ರೂಪಿಸಿರುವ ಸೈದ್ಧಾಂತಿಕ ಸೆರೆಮನೆಯನ್ನು ಮುರಿದು ದುಡಿಮೆಯನ್ನು ವೃತ್ತಿಯನ್ನಾಗಿ ಮಹಿಳೆಯರು ಕೈಗೊಂಡರೆ ಅವರು ದುಡಿಮೆಯ ಸ್ಥಳದಲ್ಲಿ ಅನೇಕ ಬಗೆಯ ಅನ್ಯಾಯಗಳನ್ನು, ದೌರ್ಜನ್ಯಗಳನ್ನು ಎದುರಿಸಬೇಕಾಗುತ್ತದೆ. ಮಹಿಳೆಯರಿಗೆ ದುಡಿಮೆ ಅವಕಾಶಗಳು ಅವರು ನೆಲೆಸಿರುವ ಸ್ಥಳದಲ್ಲೇ ದೊರೆಯಬೇಕು. ಏಕೆಂದರೆ ಅವರ ಬದುಕು ಕುಟುಂಬದ ಜೊತೆ ಬೆಸೆದುಕೊಂಡು ಬಿಟ್ಟಿರುತ್ತದೆ. ಇದರಿಂದಾಗಿ ಅವರು ನೆಲೆಸಿರುವ ಸ್ಥಳದಲ್ಲಿ ದೊರೆತ ದುಡಿಮೆಯನ್ನು ಒಪ್ಪಿಕೊಳ್ಳಬೇಕು. ಇಲ್ಲಿ ಅವರಿಗೆ ಆಯ್ಕೆಗೆ ಅವಕಾಶಗಳಿಲ್ಲ. ಹಾಗಾಗಿ ಸಹಜವಾಗಿ ಸಂಪಾದನೆ ಸೀಮಿತವಾಗಿರುತ್ತದೆ.

ಯಾವುದೋ ಒಂದು ಕಾಲದ ಸಮಾಜ ತನ್ನ ಸ್ವಾರ್ಥ, ಕ್ರೌರ್ಯದಿಂದ ಜೀವವಿರೋಧಿ ಮೌಲ್ಯಗಳನ್ನು ಹುಟ್ಟು ಹಾಕಿತು ಎಂದ ಮಾತ್ರಕ್ಕೆ ಅದು ಎಲ್ಲ ಕಾಲದ ಸತ್ಯವಾಗುವುದಿಲ್ಲ. ಮನೆಗೆಲಸಗಳನ್ನು ಹೆಂಗಸರೇ ಮಾಡುವುದು ಒಂದು ಸಾಧಾರಣ ಸಂಗತಿ. 'ಅದು ಅವರೇ ಮಾಡಬೇಕಾದ್ದು'. ಎಂಬುದು ಒಂದು ಅಘೋಷಿತ, ಪ್ರತ್ಯಕ್ಷ ಮೌಲ್ಯವಾಗಿ ಚಾಲ್ತಿಯಲ್ಲಿದೆ. ಹೊರ ಕೆಲಸವನ್ನು ಪುರುಷನೂ, ಮನೆ ಕೆಲಸವನ್ನು ಮಹಿಳೆಯು ಮಾಡುವ ಒಂದು ಶ್ರಮವಿಭಜನೆಯ ಪದ್ಧತಿ ಬೆಳೆದು ಬಂದಿದೆ. ಎರಡು ಬಗೆಯ ಕೆಲಸಗಳೂ ನಮ್ಮ ಜೀವನಕ್ಕೆ ಅಗತ್ಯ, ಪರಸ್ಪರ ಪೂರಕ. ಈ ಕೆಲಸಗಳನ್ನು ಅವರವರ ಜೀವನ ಸಂದರ್ಭದಲ್ಲಿ ಹೇಗೆ ಬೇಕಾದರೂ ಬದಲಿಸಿಕೊಳ್ಳಬಹುದು, ಬದಲಿಸಿಕೊಳ್ಳಬೇಕಾಗುತ್ತದೆ. ಇಷ್ಟರ ಹೊರತು ಇಲ್ಲಿ ಮೇಲು-ಕೀಳಿನ ಪ್ರಶ್ನೆ ಇಲ್ಲ.

ಮಹಿಳೆಯರಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಸಾಮಾಜಿಕ ಮೌಲ್ಯಗಳು ಮುಖ್ಯವಾಗಿ ಪುರುಷ ಪ್ರಧಾನ ಸಮಾಜ ಸೃಷ್ಟಿಸಿದವು. ಈ ಮೌಲ್ಯಗಳು ಸ್ತ್ರೀಯರ ದೃಷ್ಟಿಯಿಂದಲೇ ಎಷ್ಟು ಹಿತಕರ, ಎಷ್ಟು ಸತ್ಯ, ಅವು ಬೇಕೇ, ಬೇಡವೇ ಎಂಬುದನ್ನು ಗುರುತಿಸಿಕೊಳ್ಳುವುದು ಮಹಿಳೆಯರ ಮುಂದಿರುವ ಅತ್ಯಂತ ದೊಡ್ಡ ಸವಾಲು. ಎಲ್ಲ ಮಹಿಳೆಯರಿಗೂ ಎದುರಾಗುವ, ಸಂವೇದನಾಶೀಲರನ್ನು ತೀವ್ರವಾಗಿ ಕಾಡುವ ಈ ಸಮಸ್ಯೆ ನಿಜವಾಗಿ ದೊಡ್ಡ ಸವಾಲಾಗುವುದು. ಏಕೆಂದರೆ ಪುರುಷ ನಿರ್ಮಿತ ಮೌಲ್ಯಗಳು ಆಳವಾಗಿ ನಮ್ಮೊಳಗೆ ಬೇರುಬಿಟ್ಟಿದ್ದು, ಅವನ್ನು ಪ್ರಶ್ನಿಸುವುದೂ ಅಸಾಧ್ಯವೆಂಬಂಥ ಸ್ಥಿತಿ ಇರುತ್ತದೆ. ಈ ಮೌಲ್ಯಗಳು ನಿಂತಿರುವ ನೆಲೆಗಟ್ಟು ಸತ್ಯದ್ದೇ ಎಂದು ಪರೀಕ್ಷಿಸಲು ನಮ್ಮೊಳಗಿನ ನಮ್ಮನ್ನು ಕಂಡುಕೊಳ್ಳಬೇಕು. ಪೂರ್ವಾಗ್ರಹಗಳಿಗೆ ಬಲಿಯಾಗದೇ ನಮ್ಮ ಸಾಕ್ಷಿ ಪ್ರಜ್ಞೆಯನ್ನು ಪ್ರಾಮಾಣಿಕವಾಗಿರಿಸಿಕೊಂಡು ಇವುಗಳನ್ನು ತೂಗಿ ನೋಡಬೇಕಾಗಿದೆ.

'ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಣ್ಣಿನದು' ಎಂಬಂಥ ಮೌಲ್ಯವನ್ನು ಸಮಾಜ ನಮಗೆ ಕೊಡುವಾಗ ತಾಯಿತನ ಹೆಣ್ಣಿನ ಪ್ರಮುಖ ಲಕ್ಷಣ; ಮನೆ ಮಕ್ಕಳ ಬಗೆಗೆ ಗಂಡಸಿಗಿಲ್ಲದ ತುಡಿತ ಹೆಣ್ಣಿನ ಸ್ವಭಾವದಲ್ಲೇ ಇದೆ; ಅವಳನ್ನು ಮನೆಗೆ ಯಾರೂ ಕಟ್ಟಿಹಾಕಿಲ್ಲ. ಅವಳೇ ಮನೆಗೆ ಕಟ್ಟುಬಿದ್ದಿದ್ದಾಳೆ- ಎಂದೆಲ್ಲಾ ವಿವರಣೆ ನೀಡುತ್ತದೆ, ನೀಡಿತು. ಇಂಥದೊಂದು ಮೌಲ್ಯದ ಸಹಜತೆಯನ್ನು ಸಾಕ್ಷಾತ್ಕರಿಸಿ ಕೊಳ್ಳುವುದು ತೀರ ಕಠಿಣವಾದ ಕೆಲಸ. ಯಾವುದು ಸಹಜ ಪ್ರವೃತ್ತಿ, ಯಾವುದು ಶತಶತಮಾನದಿಂದ ಸಾಗಿಬಂದು ನಮ್ಮನ್ನು ಆವರಿಸಿಬಿಟ್ಟಿದೆ, ಪ್ರವೃತ್ತಿಯಲ್ಲಿಲ್ಲದುದನ್ನು ಇದೆ ಎಂದುಕೊಂಡಿದ್ದೇವೆಯೇ? ಇದು ಸಹಜ ಪ್ರವೃತ್ತಿಯಲ್ಲ ಎನ್ನುವ ವಾದವೂ ಕೇವಲ ಪೂರ್ವಾಗ್ರಹದಿಂದ ಮಾಡಿದ ತಪ್ಪು ತೀರ್ಮಾನವೇ? ಇವೆಲ್ಲ ಪ್ರಶ್ನೆಗಳಿಗೆ ನಮ್ಮ ಒಳದನಿಗಳೇ ಉತ್ತರಿಸಬೇಕು. ಇತಿಹಾಸದ ಬೆಳಕಿನಲ್ಲಿ ನಾವೇ ವಿಶ್ಲೇಷಿಸಿಕೊಳ್ಳಬೇಕು.

ಸಾಮಾಜಿಕ ಮೌಲ್ಯ ಬದಲಾವಣೆಯ ಬಗ್ಗೆ ಮಹಿಳೆಯರು ಕ್ರಿಯಾಶೀಲರಾಗಲು, ಮಹಿಳೆಯರ ಬಗೆಗಿನ ಸಾಮಾಜಿಕ ಮೌಲ್ಯಗಳು ಸಮಗ್ರವಾಗಿ ಬದಲಾಗಲು ನಮ್ಮ ಬದುಕಿನ ಎಲ್ಲ ಕ್ಷೇತ್ರಗಳನ್ನು ವ್ಯಾಪಿಸುವಂತೆ ಹಮ್ಮಿಕೊಂಡ ದೊಡ್ಡ ಪ್ರಮಾಣದ ವ್ಯವಸ್ಥಿತ ಯೋಜನೆಗಳು ಬೇಕು. ಕ್ಷೀಣವಾಗಿ ಛಿದ್ರಛಿದ್ರವಾಗಿರುವ ಈಗಿನ ಪ್ರಯತ್ನಗಳಿಂದ ಹೆಚ್ಚಿನ ಪರಿಣಾಮಗಳನ್ನು ನಿರೀಕ್ಷಿಸುವುದು ವ್ಯರ್ಥವಾದೀತು. ಹೀಗೆ ತತ್ವ ಮತ್ತು ಆಚರಣೆ- ಈ ಎರಡೂ ನೆಲೆಗಳಲ್ಲೂ ಮಹಿಳಾ ದುಡಿಮೆಗಾರರು ದುಡಿಮೆಯನ್ನು 'ವೃತ್ತಿ' ಯನ್ನಾಗಿ ಕೈಗೊಳ್ಳಲು ಹೆಣಗಾಡುತ್ತಿರುವುದನ್ನು ಕಾಣಬಹುದಾಗಿದೆ. ಈ ಎಲ್ಲ ಸಮಸ್ಯೆಗಳ ನಡುವೆ ಆರ್ಥಿಕ ಮುಗ್ಗಟ್ಟಿನಿಂದ ನರಳುತ್ತಿರುವ ಮಹಿಳೆಯರು ಸ್ವಾವಲಂಬಿ ಬದುಕನ್ನು ನಡೆಸಲು ಪರಾವಲಂಬಿ ಬದುಕನ್ನು ತಿರಸ್ಕರಿಸುತ್ತಾ ದುಡಿಮೆಯ ಜೊತೆ ಬದುಕನ್ನು ಸಾಗಿಸುತ್ತಿರುವ, ಯಶಸ್ಸನ್ನು ಸಾಧಿಸುತ್ತಿರುವ 'ದುಡಿಯುವ ಮಹಿಳೆ'ಯರನ್ನು ಇಂದು ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

೧) ಮಹಿಳೆ ಮತ್ತು ದುಡಿಮೆ - ಡಾ.ಬಿ.ಹೆಚ್.ಆಂಜನಪ್ಪ, ೨೦೦೬- ಪು.ಸಂ.-೪೩.

೨) ಮಹಿಳೆ: ಆರ್ಥಿಕತೆ ಮತ್ತು ಅಭಿವೃದ್ಧಿ ೨೦೦೧- ಟಿ.ಆರ್.ಚಂದ್ರಶೇಖರ-ಪು.ಸಂ.-೩೩

೩) ಮಹಿಳೆ ಬಿಡುಗಡೆಯ ಹಾದಿಯಲ್ಲಿ ೧೯೯೬-ಎನ್.ಗಾಯಿತ್ರಿ-ಪು.ಸಂ-೧೩೫

೪) ಮಹಿಳೆ-ಆರ್ಥಿಕತೆ ಮತ್ತು ಅಭಿವೃದ್ಧಿ ೨೦೦೧- ಟಿ.ಆರ್.ಚಂದ್ರಶೇಖರ-ಪು.ಸಂ.-೪೨.

ಅಧ್ಯಾಯ-೨

ಸಂಘಟಿತ ವಲಯ ಮತ್ತು ಅಸಂಘಟಿತ ವಲಯದಲ್ಲಿ ಮಹಿಳೆಯ ಪಾತ್ರ.

ಸಾಮಾಜಿಕ-ಆರ್ಥಿಕ ರಂಗಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ನಡೆಯುತ್ತಿವೆ. ಆದರೆ ಈ ಪ್ರಗತಿಯಲ್ಲಿ ಮಹಿಳೆಯ ಸ್ಥಾನ-ಮಾನದ ವೇಗ ಈ ಬದಲಾವಣೆಗೆ ಸಾಟಿಯಾಗಿಲ್ಲ. ಮಹಿಳೆಯ ಸ್ಥಾನ-ಮಾನದ ಪ್ರಶ್ನೆಯನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿ, ಸಂಪ್ರದಾಯಬದ್ಧ ಸಾಮಾಜಿಕ ಮೌಲ್ಯಗಳಿಂದ ಬೇರ್ಪಡಿಸಿ ನೋಡಲಾಗದು. ಮಹಿಳೆಯ ಸ್ಥಾನ-ಮಾನ ಕುರಿತು ವಿಚಾರ ಮಾಡುವ ಮುನ್ನ ಹಿನ್ನೆಲೆಯಾಗಿ ಕೆಲವು ವಿಚಾರಗಳನ್ನು ಪರಿಶೀಲಿಸುವ ಅಗತ್ಯವಿದೆ.

ಮಹಿಳೆಯರನ್ನು ದುಡಿಮೆಗಾರರೆಂದು, ಆರ್ಥಿಕತೆಗೆ ಅವರ ದುಡಿಮೆಯಿಂದ ಪ್ರಾಪ್ತವಾಗುವ ಕಾಣಿಕೆ ಅಪಾರವಾದುದು ಹಾಗೂ ನಿರ್ಣಾಯಕವಾದುದು ಎಂದು ಸರ್ಕಾರವಾಗಲಿ, ಸಮಾಜವಾಗಲಿ ಪರಿಗಣಿಸಲು ಸಿದ್ಧವಿಲ್ಲ. ಮಹಿಳೆಯರ ದುಡಿಮೆಯನ್ನು ಕುಟುಂಬಕ್ಕೆ ಸಂಬಂಧಿಸಿದಂತೆ, ಗಂಡನಿಗೆ ಸಂಬಂಧಿಸಿದಂತೆ ಪರಿಭಾವಿಸಿಕೊಳ್ಳುವುದು ವಾಡಿಕೆಯಲ್ಲಿದೆ. ಗಂಡ-ಮಕ್ಕಳು, ಅತ್ತೆ-ಮಾವ ಹೀಗೆ ಕುಟುಂಬದ ಸದಸ್ಯರ ಹಿತಾಸಕ್ತಿಗಳನ್ನು ಪೂರೈಸುವುದೇ ಮಹಿಳೆಯರ ದುಡಿಮೆಯ ಪರಮಗುರಿಯಾಗಿಬಿಟ್ಟಿದೆ. ಆದರೆ ಮಹಿಳಾ ದುಡಿಮೆಗಾರರು ಪುರುಷರಿಗೆ ಸರಿಸಮಾನರಾಗಿ ದುಡಿಯುತ್ತಿರುವುದು ನಮ್ಮ ಮುಂದಿದೆ. ಅಭಿವೃದ್ಧಿಯ ದೃಷ್ಟಿಯಿಂದ ಅವರ ದುಡಿಮೆ ನಿರ್ಣಾಯಕವೆಂಬೂದೂ ಸ್ಪಷ್ಟ. ಆದರೆ, ಇಲ್ಲಿ ಪುರುಷಶಾಹಿ ಧೋರಣೆಯ ಪಾತ್ರವಿದೆ. ಮಹಿಳೆಯರನ್ನು ಸದಾ ತಮ್ಮ ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸುವ ಪುರುಷ ವರ್ಗವು ಮಹಿಳೆಯರನ್ನು ದುಡಿಮೆಗಾರರೆಂದು ಪರಿಗಣಿಸಲು ಸಿದ್ಧವಿಲ್ಲ.

ಮಹಿಳೆಯರ ದುಡಿಮೆಯನ್ನು ಕುರಿತಂತೆ ಕೆಲವು ಸಮಿತಿಗಳು ಕುಟುಂಬದಲ್ಲಿ ದುಡಿಯುವ ದುಡಿಮೆಗಾರರಿಗೆ ಸಮನಾಗಿ ಕಾಣಬೇಕೆಂದು, ಕಾರ್ಖಾನೆಯಲ್ಲಿ ದುಡಿಯುವ ದುಡಿಮೆಗಾರರಿಗೆ ನೀಡುವ ಕಾರ್ಮಿಕ ಕಲ್ಯಾಣ ಬಾಬ್ತು ಸೌಲಭ್ಯಗಳನ್ನು ಕುಟುಂಬದ ದುಡಿಮೆ ನಡೆಸುವ ಮಹಿಳಾ ದುಡಿಮೆಗಾರರಿಗೂ ನೀಡಬೇಕು ಎಂದು ಶಿಫಾರಸ್ಸು ಮಾಡಿದೆ. ಆದರೆ ಮಹಿಳಾ ದುಡಿಮೆ ಎಂದು ಪರಿಗಣಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯಲ್ಲಿ, ಹಲವು ಸಮಿತಿಗಳ ಶಿಫಾರಸ್ಸುಗಳನ್ನು ಎಷ್ಟರಮಟ್ಟಿಗೆ ಜಾರಿಗೊಳಿಸಲು ಸಾಧ್ಯವಿದೆ. ಕಲ್ಯಾಣಬಾಬ್ತು ಸೌಲಭ್ಯಗಳನ್ನು ಕುಟುಂಬದ ದುಡಿಮೆ ನಡೆಸುವ ಮಹಿಳಾ ದುಡಿಮೆಕಾರರಿಗೂ ನೀಡಬೇಕು ಎಂದು ಶಿಫಾರಸ್ಸು ಮಾಡಿದೆ. ಆದರೆ, ದುಡಿಮೆ ಎಂದು ಪರಿಗಣಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯಲ್ಲಿ, ಹಲವು ಸಮಿತಿಗಳ ಶಿಫಾರಸ್ಸುಗಳನ್ನು ಎಷ್ಟರಮಟ್ಟಿಗೆ ಜಾರಿಗೊಳಿಸಲು ಸಾಧ್ಯವಿದೆ ಎಂಬ

ಪ್ರಶ್ನೆ ಎದುರಾಗುತ್ತದೆ. ಹಾಗಾಗಿ ಮೇಲಿನ ಅಂಶಗಳಿಗೆ ಪೂರಕವಾಗಿ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಮಹಿಳಾ ದುಡಿಮೆ, ದುಡಿಮೆಯ ಸಹಭಾಗಿತ್ವವನ್ನು ಕಂಡುಕೊಳ್ಳಬೇಕಾಗಿದೆ. ಈ ದುಡಿಮೆಯ ಕ್ಷೇತ್ರವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ.

1) ಸಂಘಟಿತ ವಲಯ

2) ಅಸಂಘಟಿತ ವಲಯ

ಸಂಘಟಿತ ವಲಯ:- ಎಂದರೆ, ಉದ್ಯೋಗದ ಭದ್ರತೆಯನ್ನು ಒದಗಿಸುವ ಮತ್ತು ಸೇವಾ ನಿಯಮಗಳನ್ನು ಪಾಲಿಸುವ ಸಲುವಾಗಿ ಸರ್ಕಾರವು ರೂಪಿಸಿರುವ ಶಾಸನಗಳು ಮತ್ತು ಕಾನೂನುಗಳ ಚೌಕಟ್ಟಿನಲ್ಲಿರುವ, ಕಾರ್ಮಿಕ ಸಂಘ-ಸಂಘಟನೆಗಳು ಇರುವ ಉತ್ಪಾದನಾ ಘಟಕಗಳು ಮತ್ತು ಅಲ್ಲಿ ದುಡಿಯುವ ದುಡಿಮೆಗಾರರನ್ನು ಸಂಘಟಿತ ದುಡಿಮೆಗಾರರೆಂದು ಕರೆಯಬಹುದು. ಸಂಘಟಿತ ವಲಯಕ್ಕೆ ಉದಾಹರಣೆಯಾಗಿ, ಸರ್ಕಾರಿ ಸ್ವಾಮ್ಯದ ಉದ್ಯಮಗಳು, ಪೆಟ್ರೋಲಿಯಂ ತೈಲ ಉದ್ಯಮ, ರೈಲ್ವೆ ಇಲಾಖೆ, ದೂರವಾಣಿ ಇಲಾಖೆ, ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಅಂಚೆ ಇಲಾಖೆ, ವೈಮಾನಿಕ ಕ್ಷೇತ್ರ, ಶಿಕ್ಷಣಾ ವಲಯ, ಬ್ಯಾಂಕ್ ಕ್ಷೇತ್ರ ಇತ್ರಾದಿ. ಖಾಸಗಿಯಾಗಿದ್ದರೂ ಸರ್ಕಾರದ ನಿಯಂತ್ರಣದಲ್ಲಿರುವ ಸಂಸ್ಥೆಗಳು, ಎಲ್.ಐ.ಸಿ., ಔಷಧಿ ಕಾರ್ಖಾನೆಗಳು, ಸಹಕಾರ ಸೊಸೈಟಿಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು, ಆಧುನಿಕ ಯಂತ್ರ ಸಲಕೋಪಕರಣಗಳನ್ನು ಉತ್ಪಾದಿಸುವ ಕಂಪನಿಗಳು ಇತ್ಯಾದಿಗಳನ್ನು ತೆಗೆದುಕೊಳ್ಳಬಹುದು.

ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆ:-

ಭಾರತದಲ್ಲಿ ಶೇಕಡ ಹತ್ತಕ್ಕಿಂತ ಕಡಿಮೆ ಮಹಿಳೆಯರು ಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಈ ವಲಯದಲ್ಲಿ ಮಹಿಳೆ ವೃತ್ತಿಪರ ಕೋರ್ಸುಗಳಲ್ಲಿ ಪಾಂಡತ್ಯ ಪಡೆದಿದ್ದರೂ ದುಡಿಯುವುದಕ್ಕೆ ಅವಕಾಶ ಕೊಡದೇ ಇರುವ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಕುಟುಂಬ ನಿರ್ವಹಣೆಗೆ ಹಣ ಸಾಲದು ಎನ್ನುವ ಸಂದರ್ಭದಲ್ಲಿ ಮಹಿಳೆಯ ಹೊರಗಿನ ದುಡಿಮೆ ಕುಟುಂಬಕ್ಕೆ ಅಷ್ಟೊಂದು ಅಡ್ಡಿ ಎನಿಸುವುದಿಲ್ಲ. ಆರ್ಥಿಕ ಮುಗ್ಗಟ್ಟು ಇಲ್ಲವೆಂದಾದರೆ ಅವಳು ಮನೆಯನ್ನು ನೋಡಿಕೊಂಡರೆ ಸಾಕು ಎನಿಸುತ್ತದೆ. ಅಂದರೆ ಕುಟುಂಬಕ್ಕೆ ಅಗತ್ಯವಿದ್ದರೆ ಅವಳು ಉದ್ಯೋಗದಲ್ಲಿದ್ದರೆ ಪರವಾಗಿಲ್ಲ. ಉದ್ಯೋಗಪರತೆ ತನಗೂ ಅಗತ್ಯ ಎಂದು ಅವಳು ಅದಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುವುದನ್ನು ಕುಟುಂಬ, ಸಮಾಜಗಳು ಒಪ್ಪುವುದಿಲ್ಲ. ಮೇಲು ನೋಟಕ್ಕೆ ಕಾಣುವುದೆಲ್ಲ ಸತ್ಯವಲ್ಲ. ಕೆಲವು ಸಂಗತಿಗಳು ನಮ್ಮಲ್ಲಿ ಅಂಥ ಭ್ರಮೆಯನ್ನು ಹುಟ್ಟಿಸಿರುತ್ತವೆ. ಮಹಿಳೆಯ ಉದ್ಯೋಗಪರತೆಯ ವಿಷಯವೂ ಹಾಗೆಯೇ.

ಸಮಾಜದಲ್ಲಿ ಸಂಘಟಿತ ವಲಯದಲ್ಲಿ ದುಡಿಯುತ್ತಿದ್ದ ಮಹಿಳೆಯರ ಪರಿಸ್ಥಿತಿಗೆ ಕೆಲವೊಂದು ಉದಾಹರಣೆಗಳನ್ನು ಕೊಡಬಹುದು. ಸಂಧ್ಯಾ ತಾನು ವೈದ್ಯಳಾಗಬೇಕೆಂದು ಬಯಸಿ ಬಿಡಿಎಸ್ ಮುಗಿಸಿದಳು. ಆಕೆಗೂ ಎಂ.ಡಿಗೂ ಸೀಟು ಸಿಕ್ಕಿತು. ಆರು ತಿಂಗಳಲ್ಲಿ ಅವಳ ಇಷ್ಟದಂತೆ ಎಂಜಿನಿಯರ್ ವರನ ಜೊತೆ ಮದುವೆಯಾಯಿತು. ಆಫ್ರಿಕನ್ ದೇಶವೊಂದರಲ್ಲಿ ಕೆಲಸ ಮಾಡುತ್ತಿರುವ ಅವಳ ಗಂಡ ಭಾರತಕ್ಕೆ ಬರಲು ನಿರಾಕರಿಸಿದ್ದರಿಂದ ಓದನ್ನು ಅರ್ಧಕ್ಕೆ ನಿಲ್ಲಿಸಿ ಗಂಡನನ್ನು ಹಿಂಬಾಲಿಸಿದಳು. ಹತ್ತು ವರ್ಷಗಳಿಂದ ಅಲ್ಲಿ ಅವಳಿಗೆ ಪ್ರಾಕ್ಟೀಸ್ ಅವಕಾಶವೇ ಸಿಗದೆ ಅಮ್ಮನಾಗಿ ಎರಡು ಮಕ್ಕಳನ್ನು ಹೆತ್ತು ಬೆಳೆಸುವಷ್ಟಕ್ಕೆ ತೃಪ್ತಿಪಡಬೇಕಾಯಿತು.

ರೂಪಳದು ಇನ್ನೊಂದು ಬಗೆ. ಗಂಡನಂತೆ ಆಕೆಯೂ ಸಾಫ್ಟ್‌ವೇರ್ ಎಂಜಿನಿಯರ್, ಗಂಡನನ್ನು ಆತ ಕೆಲಸ ಮಾಡುವ ಕಂಪನಿ ಕೆಲವು ವರ್ಷಗಳಿಗಾಗಿ ಅಮೇರಿಕಾಕ್ಕೆ ಕಳುಹಿಸಿತು. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಅವಳು ಮಕ್ಕಳ ಲಾಲನೆ ಪಾಲನೆಗಾಗಿ ಸರ್ಕಾರಿ ಉದ್ಯೋಗವನ್ನೇ ಬಿಟ್ಟು ಮನೆಯಲ್ಲಿಯೇ ಇರಬೇಕಾಯಿತು.

ಇಬ್ಬರ ಗಂಡಂದಿರೂ ಮದುವೆಗೆ ಮೊದಲು ಇಂಥ ಪದವಿ ಪಡೆದ ಹುಡುಗಿಯೇ ಬೇಕು ಎಂದು ಅಂಥವರನ್ನೇ ಆರಿಸಿ ಮದುವೆಯಾದವರು. ಆದರೆ ಅನಂತರ ಹೆಂಡತಿಯ ಉದ್ಯೋಗಪರತೆ ತಮ್ಮಷ್ಟೇ ಮುಖ್ಯವೆಂದು ಅವರಿಗೆ ಅನಿಸಿದಂತೆ ಕಾಣುವುದಿಲ್ಲ. ಹಾಗಾದರೆ ಹೆಂಡತಿಯ ಶಿಕ್ಷಣ ಗಂಡನ ಪ್ರತಿಷ್ಠೆಯ ಸಂಕೇತವೇ? ಅವಕಾಶ ಇದ್ದರೆ ಉದ್ಯೋಗ ಮಾಡಲಿ, ಇಲ್ಲದಿದ್ದರೆ ಮನೆಯಲ್ಲಿರಲಿ ಎನ್ನುವುದು ಹೆಚ್ಚಿನವರ ಧೋರಣೆ. ಹಾಗಾಗಿ ವಿವಾಹಾ ನಂತರದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಮಹಿಳೆಗೆ ಅನಿವಾರ್ಯ. ಇತ್ತೀಚಿನ ವರ್ಷಗಳಲ್ಲಿ ಹೀಗೆ ಹೊಂದಾಣಿಕೆ ಮಾಡಿಕೊಳ್ಳುವವರ ಸಂಖ್ಯೆ ವೃದ್ಧಿಸುತ್ತಿದೆ. ಅನೇಕ ಸಂದರ್ಭಗಳಲ್ಲಿ ಮದುವೆಯಾದ ಮೇಲೆ ಮಹಿಳೆಗೆ ಕೆಲಸ ಬಿಡುವ ಅನಿವಾರ್ಯತೆ ಎದುರಾಗುತ್ತಿವೆ. ಈ ವಿಷಯದಲ್ಲಿ ಆಕೆ ಹೊಂದಾಣಿಕೆ ಮಾಡಿಕೊಳ್ಳಲೇಬೇಕಾದ ಸನ್ನಿವೇಶ ಈಗಿನದು. ಹೊಂದಾಣಿಕೆ ಇಲ್ಲದಿದ್ದರೆ ಬದುಕು ಬದುಕಾಗಿ ಉಳಿಯುವುದೇ ಇಲ್ಲ. ಒಂದಲ್ಲ ಒಂದು ರೀತಿಯಲ್ಲಿ ಹೊಂದಾಣಿಕೆ ಅಗತ್ಯ, ಅವಶ್ಯಕ. ಆದರೆ ಯಾರು? ಯಾರೊಂದಿಗೆ? ಎಷ್ಟು? ಯಾಕಾಗಿ? ಎನ್ನುವುದು ಇಲ್ಲಿ ಮುಖ್ಯ.

ವಿವಾಹಯೋಗ್ಯ ವರನನ್ನು ಮಾತಾಡಿಸಿದರೆ ಹುಡುಗಿಯ ಓದು ಮತ್ತು ಉದ್ಯೋಗ ಕುರಿತು ಬಹಳ ಇತ್ಯಾತ್ಮಕವಾಗಿ ಮಾತನಾಡುತ್ತಾರೆ. ಅದರಲ್ಲೂ ಸಾಫ್ಟವೇರ್ ಎಂಜಿನಿಯರ್ ಆಗಿದ್ದರಂತೂ ಎಂಜಿನಿಯರಿಂಗ್ ಓದಿರುವ ಹುಡುಗಿಯೇ ಬೇಕು ಎಂದು ಅಂಥ ಹುಡುಗಿಯನ್ನೇ ಆಯ್ಕೆ ಮಾಡುತ್ತಾರೆ. ಹುಡುಗಿಗೆ ಮತ್ತು ಹುಡುಗಿಯ ಮನೆಯವರಿಗೂ ಹುಡುಗ ಎಂಜಿನಿಯರ್/ವೈದ್ಯ ಅಂದ

ಮೇಲೆ ಹುಡುಗ ಎಂಜಿನಿಯರ್/ವೈದ್ಯ ಆಗಿರಲಿ ಎನ್ನುವ ಆಸೆ, ಅದು ತಪ್ಪಲ್ಲ. ಆದರೆ ಮದುವೆಯಾದ ಮೇಲೆ ಎಷ್ಟು ಹುಡುಗಿಯರಿಗೆ ತಮ್ಮ ಉದ್ಯೋಗಪರತೆಗೆ ಆದ್ಯತೆ ನೀಡಲು ಅವಕಾಶವಿದೆ? ಎನ್ನುವುದು ಇಲ್ಲಿನ ಪ್ರಶ್ನೆ.

ವೈದ್ಯ, ವಕೀಲ ಮುಂತಾದ ಬೇರೆ ವೃತ್ತಿ ನಿರತರಿಗಿಂತ ಐಟಿ ಕ್ಷೇತ್ರದ ಉದ್ಯೋಗಿಗಳಿಗೆ ಬೇಡಿಕೆ. ಸಂಬಳ ಹೆಚ್ಚಿರುವುದರಿಂದ ಕನ್ಯಾಪಿತೃಗಳಿಗೂ ಅವರ ಮೇಲೆ ಕಣ್ಣು. ಮಗಳ ಉದ್ಯೋಗಕ್ಕಿಂತ ಅಳಿಯ ಗಳಿಕೆ ಎಷ್ಟು ಎಂಬುವುದೇ ಇಲ್ಲಿ ಮುಖ್ಯ. ಇದ್ದರಿಂದ ಉದ್ಯೋಗಪರತೆಗೆ ಹೆಚ್ಚು ಪ್ರಾಧಾನ್ಯ ನೀಡಬೇಕು ಎಂದು ಬಯಸುವ ಹೆಣ್ಣುಮಕ್ಕಳೂ ಆದರಿಂದ ವಂಚಿತವಾಗುವ ಸನ್ನಿವೇಶ ನಿರ್ಮಾಣವಾಗಿದೆ. ಮದುವೆಯಾಗುವ ಹುಡುಗ-ಹುಡುಗಿ ಬೇರೆಬೇರೆ ಊರುಗಳಲ್ಲಿದ್ದರೆ ಕೆಲಸ ಬಿಡಬೇಕಾದವಳು ಹುಡುಗಿಯೇ. ಒಮ್ಮೆ ಆಕೆ ಆತನಿಗಿಂತ ಹೆಚ್ಚಿನ ಸಂಬಳ ಪಡೆಯುತ್ತಿದ್ದರೂ ಅವಳು ಹುಡುಗ ಇರುವ ಊರಿನಲ್ಲಿ ಬೇರೆ ಕೆಲಸ ಹುಡುಕಿಕೊಂಡರೆ ಆಯಿತು ಎನ್ನುವ ಸಲಹೆ ಹುಡುಕಿಕೊಂಡರೆ ಆಯಿತು ಎನ್ನುವ ಸಲಹೆ ಎಲ್ಲ ಕಡೆಯಿಂದ ಸಿಗುತ್ತದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವುದು ಮದುವೆಗೆ ಮೊದಲು ಸರಿ. ಮದುವೆಯಾದ ಮೇಲೆ ಯಾಕೆ? ಎನ್ನುವುದು ಅನೇಕರ ಧೋರಣೆ. ಹಾಗಾಗಿ ಕೆಲಸ ಕಳೆದುಕೊಳ್ಳುವ ಮಹಿಳೆಯರ ಸಂಖ್ಯೆ ಸಾಕಾಷ್ಟು ಇದೆ. ಗಂಡ ಉದ್ಯೋಗ ಬದಲಿಸಿದರೆ ಅವನ ಹಿಂದೆ ಹೋಗದೆ ಇದ್ದಲ್ಲೇ ಉಳಿಯುವಂತಿಲ್ಲ. ಇನ್ನು ನಮ್ಮನೆಗೆ ಮಗು ಬಂತೆಂದರೆ ಕೆಲಸ ಬಿಡಬೇಕಾದವಳು ಅವಳೇ. ಮಗುವನ್ನು ಬೆಳೆಸುವ ಹೊಣೆಗಾರಿಕೆ ತಾಯಿಯದೇ ತಾನೆ? ಇಬ್ಬರದೂ ಎಂದು ಯೋಚಿಸುವುದು ಬೆರಳೆಣಿಕೆಯಷ್ಟು ಮಂದಿ ಮಾತ್ರ.

ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವವರನ್ನು ಕಂಪನಿಗಳು ಹೊರದೇಶಗಳಿಗೆ ಕಳುಹಿಸುವ ಸಂದರ್ಭದಲ್ಲಿ ಪುರುಷರು ಅದನ್ನು ಒಪ್ಪಿಕೊಳ್ಳುವುದು ಸಹಜ. ಮಹಿಳೆಯ ವಿಷಯದಲ್ಲಿ ಇದು ಅಸಹಜ. ನಮ್ಮ ದೇಶದ ಐಟಿ ಕ್ಷೇತ್ರದ ಉದ್ಯೋಗಿಗಳಲ್ಲಿ ಸುಮಾರು ಶೇಕಡ ೩೦ ರಷ್ಟು ಮಹಿಳೆಯರು. ಉನ್ನತ ಹುದ್ದೆಯಲ್ಲಿರುವ ಮಹಿಳೆಯರು ಅತ್ಯಲ್ಪ. ಇತ್ತೀಚಿನ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಶಿಕ್ಷಣ ಪಡೆಯುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಶಿಕ್ಷಣ ಪಡೆದಿರುವ ಮಹಿಳೆಯರು ಮತ್ತು ಉದ್ಯೋಗಸ್ಥ ಮಹಿಳೆಯರ ಅನುಪಾತದಲ್ಲಿ ದೊಡ್ಡ ಕಂದಕವಿದೆ. ಉದ್ಯೋಗಕ್ಕೆ ಸೇರಿದ್ದರೂ ನಾನಾ ಕಾರಣಗಳಿಂದ ಕೆಲಸ ಬಿಡುವವರು ಸಾಕಷ್ಟಿದ್ದಾರೆ. ಇಂಥ ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಗಾಗಿ ಸರಕಾರ ಹಣವನ್ನು ವ್ಯಯಿಸಿರುತ್ತದೆ. ಆದರೆ ಇದು ಪ್ರಾಯೋಜನವಾಗುತ್ತಿಲ್ಲ. ಇದೇ ರೀತಿ ಮುಂದುವರೆದರೆ ಹೆಣ್ಣುಮಕ್ಕಳ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣಕ್ಕಾಗಿ ಹಣ ಖರ್ಚು ಮಾಡುವುದು ದಂಡ ಎನಿಸುವ ದಿನವೂ ಬರಬಹುದು.

ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು ನೆಮ್ಮದಿಯಿಂದ ಕೆಲಸ ಮಾಡುವುದು ಕಷ್ಟವಾಗುತ್ತದೆ. ಹೆರಿಗೆ ರಜೆ, ಹೆರಿಗೆ ಭತ್ಯೆಯನ್ನು ಸಂಘಟಿತ ಮಹಿಳೆಯರು ಪಡೆಯುವರಾದರೂ ಕೆಲವು ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಾದ ಗಗನ ಸಖಿಯರು ಹಾಗೂ ಸಿವಿಲ್ ಸರ್ವೀಸ್ ಹುದ್ದೆಯಲ್ಲಿರುವವರಿಗೆ ಮದುವೆ, ತಾಯ್ತನಗಳು ದುಬಾರಿ ಅಥವಾ ಕೆಲವೊಮ್ಮೆ ಆತಂಕಕಾರಿ ಸಂಗತಿಗಳಾಗುತ್ತವೆ. ಕೆಲವು ಖಾಸಗಿ ಕಂಪನಿಗಳಲ್ಲಂತೂ ಹೆರಿಗೆ ಸೌಕರ್ಯಗಳನ್ನು ನೀಡಬೇಕೆಂಬ ಕಾರಣಕ್ಕಾಗಿಯೇ ಮಹಿಳೆಯರನ್ನು ಕೆಲಸದಿಂದ ತೆಗೆದುಹಾಕುವ ಪದ್ಧತಿ ಇದೆ. ೧೯೬೭ ರಲ್ಲಿ ನಡೆಸಿದ ಸಮೀಕ್ಷೆಯ ವರದಿಯು "ದುಡಿಯುವ ಮಹಿಳೆಯರ ಸಂಖ್ಯೆಯನ್ನು ಕಡಿಮೆ ಮಾಡುವ ಮಾಲೀಕರ ಧೋರಣೆಗೆ ಮುಖ್ಯ ಕಾರಣ ಮಹಿಳೆಯರ ಹೆರಿಗೆ ಸೌಕರ್ಯಗಳನ್ನು ಮತ್ತು ಕ್ರೆಷ್ ವ್ಯವಸ್ಥೆಯನ್ನು ನೀಡಬೇಕೆಂಬುದೇ ಆಗಿದೆ" ಎಂದಿದೆ.

ಸಂಘಟಿತ ವಲಯದಲ್ಲಿ ಬರುವ ಕಾರ್ಮಿಕ ಕ್ಷೇತ್ರದಲ್ಲೂ ಮಾತೃತ್ವಕ್ಕೆ ಸಂಬಂಧಪಟ್ಟಂತೆ ಹೆಣ್ಣನ್ನು ಅಪಮಾನಗೊಳಿಸುವ ನಿದರ್ಶನಗಳು ನಮಗೆ ಸಿಕ್ಕುತ್ತವೆ. "ವಿಜಯವಾಡದ ಬಳಿ ಇರುವ ವಿಜಯ ಮಿಲ್ ಲಿಮಿಟೆಡ್ ಹತ್ತಿಗಿರಣಿ ಕಾರ್ಖಾನೆಯಲ್ಲಿ ದುಡಿಯುವ ಹೆಂಗಳೆಯರು ಮದುವೆಯಾದಲ್ಲಿ ಕೆಲಸ ಕಳೆದುಕೊಳ್ಳಬೇಕೆಂಬ ಭೀತಿಯಿಂದ ತತ್ತರಿಸುತ್ತಿದ್ದಾರೆ. ಮದುವೆಯಾಗಿದ್ದ ಪಕ್ಷದಲ್ಲಿ ಸಂತಾನ ನಿಯಂತ್ರಣ ಅಥವಾ ವಿವಾಹ ವಿಚ್ಛೇದನದ ಪ್ರಮಾಣ ಪತ್ರಗಳನ್ನು ಕೆಲಸಕ್ಕೆ ಸೇರುವ ವೇಳೆಯಲ್ಲಿ ಮಾಲೀಕರಿಗೆ ತೋರಿಸಬೇಕು. ೮೦೦ ಮಂದಿ ಕೆಲಸ ಮಾಡುವ ಈ ಕಾರ್ಖಾನೆಯಲ್ಲಿ ೩೦೦ ಮಂದಿ ಮಹಿಳಾ ಕಾರ್ಮಿಕರ ಹೆರಿಗೆ ರಜೆ ಮತ್ತು ಹೆರಿಗೆ ಭತ್ಯೆಯನ್ನು ಖೋತಾ ಮಾಡಬೇಕೆಂಬುದೇ ಇಲ್ಲಿಯ ಮುಖ್ಯ ಉದ್ದೇಶ."೧ ಸಂಸ್ಥೆಯು ವರ್ಷಕ್ಕೆ ಸುಮಾರು ೫ ರಿಂದ ೬ ಲಕ್ಷಗಳಷ್ಟು ಹಣವನ್ನು ಈ ಬಾಬತ್ತಿನಲ್ಲಿ ಉಳಿಸುತ್ತದೆ. ಈ ಕುಟಿಲ ನೀತಿಯನ್ನು ದೇಶದ ಹಲವಾರು ಚಿಕ್ಕ ಪುಟ್ಟ ಘಟಕಗಳಲ್ಲಿ ಯಶಸ್ವಿಯಾಗಿ ಬಳಕೆಗೆ ತರಲಾಗಿದೆ. ಆದರೆ ಸಂಘಟಿತ ಕಾರ್ಮಿಕ ಮಹಿಳೆಯರನ್ನೂ ಇಲ್ಲಿ ಈ ರೀತಿ ನಡೆಸಿಕೊಳ್ಳುತ್ತಿರುವುದು ಆಶ್ಚರ್ಯದ ವಿಷಯ. ವಿಜಯ ಹತ್ತಿಗಿರಣಿ ನೌಕರರ ಸಂಘದ ನೇತೃತ್ವದಲ್ಲಿ ಮಹಿಳೆಯರಿಗಾದ ಈ ಅನ್ಯಾಯದ ವಿರುದ್ಧ ಹೋರಾಟ ನಡೆದಿದೆ.

"ಕೊಯಮತ್ತೂರಿನ ಅವಿನಾಶಿಲಿಂಗಂ ಹೋಂ ಸೈನ್ಸ್ ಕಾಲೇಜಿನಲ್ಲಿ ಅಲ್ಲಿನ ಮಹಿಳಾ ಕಾಲೇಜಿನ ಪ್ರಾಂಶುಪಾಲರು ೧೯೮೬ ರಲ್ಲಿ ಹೊರಡಿಸಿದ್ದ ಒಂದು ಸುತ್ತೋಲೆ ವಿಚಿತ್ರವಾಗಿದೆ. ಅವರ ಕಾಲೇಜಿನ ಅಧ್ಯಾಪಕಿಯರು ಬೇಸಿಗೆ ರಜೆಯ ಅವಧಿಯಲ್ಲಿ ಹೆರಿಗೆಯಾಗುವಂತೆ ಗರ್ಭ ಧರಿಸುವ ಯೋಜನೆ ಹಾಕಿಕೊಳ್ಳಬೇಕೆಂದು ಆಜ್ಞೆ ಹೊರಡಿಸಲಾಗಿತ್ತು. ಇದಕ್ಕೆ ಸಮ್ಮತಿಸದ ಕೆಲವು ಮಹಿಳಾ ಅಧ್ಯಾಪಕಿಯರನ್ನು ಬಲಾತ್ಕಾರವಾಗಿ ಗರ್ಭಪಾತಕ್ಕೆ ಒಳಗಾಗಿಸಿರುವುದೂ ಉಂಟೆಂದು ತಿಳಿದುಬರುತ್ತದೆ."೧

ಸಂಘಟಿತ ಕಾರ್ಮಿಕ ಕ್ಷೇತ್ರದಲ್ಲಿರುವ ಮಹಿಳೆಯರ ಸ್ಥಿತಿ-ಗತಿಯೇ ಹೀಗಿರಬೇಕಾದರೆ ಅಸಂಘಟಿತ ಕ್ಷೇತ್ರದ ಮಹಿಳೆಯರ ಪಾಡನ್ನು ಕೇಳುವಂತಿಲ್ಲ. ಸರ್ಕಾರ ಈ ಕುರಿತು ಮಾಡಿರುವ ಕಾನೂನು ಕೂಡ ತಾಂತ್ರಿಕ ತೊಂದರೆಗಳಿಂದಾಗಿ ಹೆಚ್ಚು ಪ್ರಯೋಜನವಾಗುವುದಿಲ್ಲ. ಅಂಥ ಕಾನೂನುಗಳನ್ನು ಮೂರನ್ನು ಇಲ್ಲಿ ಪ್ರಮುಖವಾಗಿ ಹೆಸರಿಸಬಹುದು.

1) '೧೯೪೧ ರ ಕಲ್ಲಿದ್ದಲು ಗಣಿ ಕಾರ್ಮಿಕ ಹೆರಿಗೆ ಸೌಕರ್ಯ ಕಾಯಿದೆ

2) ೧೯೫೧ ರ ಪ್ಲಾಂಟೇಷನ್ ಕಾರ್ಮಿಕರ ಹೆರಿಗೆ ಸೌಕರ್ಯ ಕಾಯಿದೆ.

3) ೧೯೬೧ ರ ಹೆರಿಗೆ ಸೌಕರ್ಯ'೩.

ಭಾರತದಲ್ಲಿ ಹೆರಿಗೆ ಸೌಕರ್ಯಕ್ಕೆ ಸಂಬಂಧಪಟ್ಟ ಮೊತ್ತ ಮೊದಲನೆಯ ಕಾಯಿದೆಯು ೧೯೨೯ ರಲ್ಲಿ ಮುಂಬಯಿ ಸರ್ಕಾರದಿಂದ ಜಾರಿಯಾಯಿತು. ೧೯೬೧ ರಲ್ಲಿ ಹೆರಿಗೆ ಸೌಕರ್ಯದ ಕಾಯಿದೆಯು ಕೇಂದ್ರ ಸರ್ಕಾರದಿಂದ ಜಾರಿಗೊಂಡ ಕಾಯಿದೆಯಾಗಿದ್ದು ಅದು ಎಲ್ಲಾ ರಾಜ್ಯಗಳಿಗೂ ಸಮಾನವಾಗಿ ಅನ್ವಯಿಸುತ್ತದೆ. ಈ ೧೯೬೧ ರ ಕಾಯಿದೆಯಲ್ಲಿರುವ ಲೋಪದೋಷಗಳನ್ನು ತೆಗೆದು ೧೯೭೩ ರಲ್ಲಿ ಇದಕ್ಕೆ ಮತ್ತೊಂದು ತಿದ್ದುಪಡಿಯನ್ನು ಸೇರಿಸಲಾಯಿತು.

ಸರ್ಕಾರಿ ಉದ್ಯಮಗಳಲ್ಲಿ ಹೆಣ್ಣುಗಂಡಿನ ನಡುವೆ ಸಮಾನ ವಿದ್ಯಾರ್ಹತೆಗಳಿರುವುದರಿಂದ ಮತ್ತು ಕಾರ್ಮಿಕ ಕಾಯಿದೆಯನ್ನು ಬಿಗಿಯಾಗಿ ಪಾಲಿಸಬೇಕಾಗಿರುವುದರಿಂದ ಸಮಾನ ದುಡಿಮೆಗೆ ಸಮಾನ ವೇತನ ದೊರೆಯುತ್ತದೆ. ಆದರೆ ಇಂತಹ ದುಡಿಮೆಯಲ್ಲಿ ತೊಡಗಿರುವವರ ಸಂಖ್ಯೆ ಹೆಚ್ಚಿಲ್ಲ. ಸಮಾಜದಲ್ಲಿ ಎರಡನೆಯ ಪ್ರಜೆಯೆನಿಸಿಕೊಂಡ ಹೆಣ್ಣಿನ ಶ್ರಮ ಅತ್ಯಂತ ಅಗ್ಗವಾದ್ದರಿಂದ ಮಾಲೀಕರಿಗೆ ಇದರ ಮೇಲೆ ಕಣ್ಣು. ಲೈಂಗಿಕ ಅಸಮಾನತೆಯನ್ನು ವೇತನ ತಾರತಮ್ಯದಲ್ಲಿ ಅನುಭವಿಸುವ ದುಡಿಯುವ ಮಹಿಳೆಯರೇ ಹೆಚ್ಚು. ಬೀಡಿ, ಹೊಗೆಸೊಪ್ಪು, ಅಗರಬತ್ತಿ, ಅಕ್ಕಿಗಿರಣಿ, ಗೋಡಂಬಿ, ಸೆಣಬಿನನಾರು, ಮುಂತಾದ ಕಾರ್ಖಾನೆಗಳ ಕೈಗಾರಿಕೆಗಳಲ್ಲಿ ದುಡಿಯುವ ಸ್ತ್ರೀಯರಿಗೆ ಮತ್ತು ಕೃಷಿ ಕಾರ್ಮಿಕ ಮಹಿಳೆಯರಿಗೆ ಹಾಗೂ ಮನೆ ಕಟ್ಟುವ ಕೆಲಸದಲ್ಲಿರುವ ಹೆಂಗಸರಿಗೆ ಸಮಾನ ದುಡಿಮೆಗೆ ಸಮಾನ ವೇತನ ಸಿಗುವುದಿಲ್ಲ. ಭಾರತ ಸರ್ಕಾರವು ೧೯೭೫ ರ ಸೆಪ್ಟೆಂಬರ್ ೨೬ ರಂದು ಸಮಾನ ದುಡಿಮೆಗೆ ಸಮಾನ ವೇತನವೆಂಬ ಆರ್ಡಿನೆನ್ಸ್‌ನ್ನು ತಂದಿತು. ಅದರ ಪ್ರಕಾರ ಸಮಾನ ಕೆಲಸ ಮತ್ತು ಸಮಾನ ಸ್ವರೂಪದ ಕೆಲಸ ಮಾಡುವ ಹೆಣ್ಣು ಗಂಡುಗಳಿಬ್ಬರಿಗೂ ಸಮಾನ ವೇತನ ನೀಡಬೇಕೆಂದು ಹೇಳಲಾಗಿತ್ತು. ಮಹಿಳೆಯರಿಗೆ ಈ ಕಾನೂನು ಪ್ರಯೋಜನವಾಗಬೇಕಿದ್ದರೆ ಅದನ್ನು ಸೂಕ್ತ ರೀತಿಯಲ್ಲಿ ಜಾರಿಗೊಳಿಸಬೇಕು. ಚಾಣಾಕ್ಷ ಮಾಲೀಕರು ಇದು ಜಾರಿಯಾಗದಂತೆ ನೋಡಿಕೊಳ್ಳಲು ಈ ಆರ್ಡಿನೆನ್ಸ್‌ನಲ್ಲಿರುವ ಕುಂದುಕೊರತೆಗಳನ್ನೆಲ್ಲಾ ಜಾಣ್ಮೆಯಿಂದ ಬಳಸಿಕೊಳ್ಳುತ್ತಾರೆ. ಪರಿಣಾಮವಾಗಿ

ಮಹಿಳೆಯರು ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಮಹಿಳೆಯರನ್ನು ಕೆಲಸದಿಂದ ತೆಗೆದುಹಾಕುವುದನ್ನು ಈ ಕಾಯಿದೆ ನಿಷೇಧಿಸುವುದಿಲ್ಲವಾದ್ದರಿಂದ ಮಹಿಳೆಯರ ಉದ್ಯೋಗದ ಭದ್ರತೆಯನ್ನು ಕಾಪಾಡಲು ಅಸಮರ್ಪಕವಾಗಿದೆ. ಉದ್ಯೋಗ ಕಳೆದುಕೊಳ್ಳಬಹುದೆಂಬ ಭಯದಿಂದ ಮಹಿಳೆಯರೂ ಕೂಡ ಈ ಬೇಡಿಕೆಗಳನ್ನು ಒತ್ತಾಯಿಸುವುದಕ್ಕೆ ಮುಂದೆ ಬರುವುದಿಲ್ಲ.

ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆ:

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಂಘಟಿತ ವಲಯದ ಪಾತ್ರ, ಗಾತ್ರ ಅಗಾಧವಾದುದಾಗಿದೆ. ಈ ವಲಯದಲ್ಲಿ ದುಡಿಮೆಗಾರರ ಪ್ರಮಾಣ ಅತ್ಯಧಿಕವಾಗಿದೆ. ಅಸಂಘಟಿತ ವಲಯದಲ್ಲಿ ದುಡಿಮೆಗಾರರ ಶೋಷಣೆ ನಿರಂತರವಾಗಿ ಮುಂದುವರಿದಿದೆ. ಅದರಲ್ಲೂ ಮುಖ್ಯವಾಗಿ ಮಹಿಳಾ ದುಡಿಮೆಗಾರರು ಅಧಿಕ ಸಂಖ್ಯೆಯಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವುದು ಕಂಡು ಬರುತ್ತದೆ.

ಸ್ವಯಂ ಉದ್ಯೋಗಿ ಮಹಿಳಾ ದುಡಿಮೆಗಾರರನ್ನು ಕುರಿತಂತೆ ಅಧ್ಯಯನ ಮಾಡಲು ಕೇಂದ್ರ ಸರ್ಕಾರವು ನೇಮಿಸಿದ್ದ ರಾಷ್ಟ್ರೀಯ ಆಯೋಗವು ಸಿದ್ಧಪಡಿಸಿದ ವರದಿ ಶ್ರಮಶಕ್ತಿಯಲ್ಲಿ ಉಲ್ಲೇಖಿಸಿರುವಂತೆ ಮಹಿಳಾ ದುಡಿಮೆಗಾರರಲ್ಲಿ ಶೇ.೯೪ ರಷ್ಟು ಮಂದಿ ಅಸಂಘಟಿತ ವಲಯದಲ್ಲಿದ್ದಾರೆ. ಅಸಂಘಟಿತ ವಲಯದಲ್ಲಿ ಅನೇಕ ಬಗೆಯ ಚಟುವಟಿಕೆಗಳಿವೆ. ಕೃಷಿ, ಪಶುಪಾಲನೆ, ಕರಕುಶಲತೆ, ಹೈನುಗಾರಿಕೆ, ಕೈಮಗ್ಗ, ಕಟ್ಟಡ ನಿರ್ಮಾಣ, ಬೆಂಕಿಪೊಟ್ಟಣ ತಯಾರಿಕೆ, ಚಿಕಣಿ ಕೈಗಾರಿಕೆ, ಬಿದಿರುಬುಟ್ಟಿ ಮಾಡುವುದು, ಈಚಲ ಬುಟ್ಟಿ ಮಾಡುವುದು, ಕಸಬರಿಗೆ ಮಾಡುವುದು, ಬಟ್ಟೆ ಹೊಲಿಯುವುದು, ಸಿದ್ಧ ಉಡುಪುಗಳ ತಯಾರಿಕೆ, ಮನೆಗೆಲಸ ಇನ್ನೂ ಮುಂತಾದವು.

ಅಸಂಘಟಿತ ಕ್ಷೇತ್ರದ ಕೆಲಸಗಳಲ್ಲಿನ ಒಂದು ವೈಶಿಷ್ಟ್ಯವೆಂದರೆ, ಅದರಲ್ಲಿನ ಕೆಲಸ ಕಾರ್ಯಗಳು ಸ್ಥಳೀಯವಾಗಿದ್ದು ಅದಕ್ಕೆ ಸ್ಥಳೀಯ ಜನರನ್ನೇ ನೇಮಿಸಿಕೊಳ್ಳಬೇಕಾದದ್ದು ಸಾಂಪ್ರದಾಯಿಕ ಗೃಹಕೃತ್ಯ ಜವಾಬ್ದಾರಿ ಹೊಂದಿರುವ ಮಹಿಳೆಯರು ಸಾಮಾನ್ಯವಾಗಿ ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಎರಡನೆಯದಾಗಿ, ಭಾರತದಲ್ಲಿ ಅಸಂಘಟಿತ ಕ್ಷೇತ್ರವು ಸಂಘಟಿತ ಕ್ಷೇತ್ರದ ಕಾರ್ಮಿಕರು ಅನುಭವಿಸುವ ಕಾಯಿದೆ, ರಕ್ಷಣೆ ಮತ್ತು ಆರ್ಥಿಕ ಲಾಭಗಳಿಂದ ಹೊರತಾಗಿದೆ. ಕಾನೂನು ಕಾಯಿದೆಗಳನ್ನು ಈ ಕ್ಷೇತ್ರದಲ್ಲಿ ಅಷ್ಟೊಂದು ಪ್ರಬಲವಾಗಿ ಜಾರಿಗೆ ತರಲೂ ಸಾಧ್ಯವಾಗಿಲ್ಲ. ಈ ಕ್ಷೇತ್ರದಲ್ಲಿ ಅಷ್ಟೊಂದು ಪ್ರಬಲವಾಗಿ ಜಾರಿಗೆ ತರಲೂ ಸಾಧ್ಯವಾಗಿಲ್ಲ. ಈ ಕ್ಷೇತ್ರದಲ್ಲಿ ಸಂಬಳ, ಸಾರಿಗೆಗಳು ಹಾಗೂ ಕೆಲಸದಿಂದ ತೆಗೆದುಹಾಕುವಿಕೆ ಎಲ್ಲವೂ ಸ್ವೇಚ್ಛಾನುಸಾರವಾಗಿ ನಡೆಯುತ್ತವೆ. ಮಹಿಳಾ ಕಾರ್ಮಿಕರಿಗೆ ಅವರು ಮಾಡುವ ಕೆಲಸದ ಅವಧಿ ಕಾನೂನು ಪ್ರಕಾರ ನಿಗಧಿತ ವೇಳೆಗಿಂತ ಅಧಿಕವಾಗಿರುತ್ತದೆ. ಹೆಚ್ಚು

ಕೆಲಸದ ಅವಧಿಗೆ ಯಾವುದೇ ಹೆಚ್ಚುವರಿ ಭತ್ಯೆಯನ್ನು ನೀಡುವುದಿಲ್ಲ. ಎಷ್ಟೋ ವೇಳೆ ಮಹಿಳಾ ಕಾರ್ಮಿಕರಿಗೆ ಹೆಚ್ಚುವರಿ ಭತ್ಯೆ ಎಂದರೆ ಏನೆಂದೇ ಗೊತ್ತಿರುವುದಿಲ್ಲ. ವೈದ್ಯಕೀಯ ಮತ್ತು ಹೆರಿಗೆ ಸೌಲಭ್ಯಗಳ ಬಗ್ಗೆ ಕೇಳಿಯೂ ಇರುವುದಿಲ್ಲ. ಅಂತೆಯೇ ಮಹಿಳೆಯರಿಗೆ ನೀಡುವ ಸಂಬಳವೂ ಪುರುಷರಿಗಿಂತ ಕಡಿಮೆ. ನೀಡುವ ವೇತನವೂ ಸ್ಥಳಕ್ಕೆ ಅನುಗುಣವಾಗಿ ಮಾಪಾಟು ಆಗುತ್ತಿರುತ್ತದೆ. ಒಟ್ಟಿನಲ್ಲಿ ಅಸಂಘಟಿತ ಕ್ಷೇತ್ರದಲ್ಲಿನ ದುಡಿಮೆ ಭರವಸೆ ಹಾಗೂ ರಕ್ಷಣೆ ಇಲ್ಲದ, ಹೆಚ್ಚು ಕಾಲ ದುಡಿಸಿಕೊಳ್ಳುವ ಹಾಗೂ ಕಡಿಮೆ ಪ್ರತಿಫಲ ನೀಡುವ ವೃತ್ತಿ ಎಂಬುದಾಗಿ ತಿಳಿಯಬಹುದಾಗಿದೆ.

ಅಸಂಘಟಿತ ಕ್ಷೇತ್ರಗಳಲ್ಲಿ ಹೆಚ್ಚಾಗಿ ಕೈ ದುಡಿಮೆಯೇ ಅಧಿಕ. ಅಸಂಘಟಿತ ರಂಗದ ಇತರ ಲಕ್ಷಣಗಳೆಂದರೆ, ಇದರಲ್ಲಿ ದುಡಿಯುವ ಬಹುತೇಕ ಕಾರ್ಮಿಕರು ಅನಕ್ಷರಸ್ಥರು. ಈ ವಲಯದಲ್ಲೂ ನಿರುದ್ಯೋಗ ತಾಂಡವವಾಗುತ್ತಿದೆ. ಮಿತಿಮೀರಿದ ಕಾರ್ಮಿಕರ ಸಂಖ್ಯೆಯಿಂದಾಗಿ ಅಸಂಘಟಿತ ವಲಯದಲ್ಲಿ ಮೂರು ರೀತಿಯ ನಿರುದ್ಯೋಗವನ್ನು ಕಾಣಬಹುದು. ಅಲ್ಪ ಉದ್ಯೋಗ, ಮರೆ ಮಾಚಿದ ನಿರುದ್ಯೋಗ, ಕಾಲಿಕ ನಿರುದ್ಯೋಗ (ಕಾಲಿಕವೆಂದರೆ ಸಮಯಕ್ಕೆ ಸಂಬಂಧಿಸಿದ). ಈ ರೀತಿ ನಿರುದ್ಯೋಗ ಇರುವುದು ವ್ಯಾಪಕವಾಗಿದೆ. ಆದ್ದರಿಂದ ಅಸಂಘಟಿತ ಉದ್ದಿಮೆಗಳಲ್ಲಿ ಕಾರ್ಮಿಕರಿಗೆ ಭದ್ರತೆಯಿಲ್ಲ. ಕೆಲಸದ ಖಾತ್ರಿಯಿಲ್ಲ. ದುಡಿಮೆಯ ವೇಳೆ ಬಹಳ ದೀರ್ಘವಾದುದು. ವಾರದ, ಹಬ್ಬ ಹರಿದಿನಗಳ ಮತ್ತು ಅಸ್ವಸ್ಥತೆಯ ಕಾರಣಗಳಿಗೆ ರಜೆಯಿಲ್ಲ. ವೈದ್ಯಕೀಯ ಸೌಲಭ್ಯ, ವಸತಿ ಸೌಕರ್ಯ, ತಾಯ್ತನದ ಭತ್ಯೆ. ಔದ್ಯೋಗಿಕ ವಿಮೆ, ವೃದ್ಧಾಪ್ಯ ವೇತನ, ಅಪಘಾತ, ಪರಿಹಾರ ಮುಂತಾದ ಯಾವುದೇ ಕೂಲಿಯೇತರ ಸೌಲಭ್ಯಗಳು ಅಸಂಘಟಿತ ಕಾರ್ಮಿಕರಿಗಿಲ್ಲ.

ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ಹೆಚ್ಚು ಸಾಂದ್ರವಾಗಿರುವುದಕ್ಕೆ ಅನೇಕ ಕಾರಣಗಳಿವೆ.

1) ಸಾಮಾನ್ಯವಾಗಿ ಹೆಣ್ಣು ಮಕ್ಕಳನ್ನು ಅವರು ವಾಸಿಸುವ ಸ್ಥಳಗಳಿಂದ ಹೊರತುಪಡಿಸಿ ಬೇರೆ ಸ್ಥಳಗಳಿಗೆ ಕೆಲಸ ಮಾಡಲು ಕಳುಹಿಸುವುದಿಲ್ಲ. ಅವರ ಚಲನೆಯ ಮೇಲಿರುವ ನಿರ್ಬಂಧವು ಅವರು ತಾವು ವಾಸಿಸುವ ಸ್ಥಳದಲ್ಲೇ ಸಿಗುವಂತಹ ಕಡಿಮೆ ಕೂಲಿ, ಕಡಿಮೆ ಕೌಶಲ್ಯದ, ಋತುಮಾನಕ್ಕನುಗುಣವಾದ ನಿರಂತರ ದುಡಿಮೆ ನಿರೀಕ್ಷಿಸದ ಕೆಲಸಗಳಲ್ಲಿ ತೊಡಗುತ್ತಾರೆ.
2) ದುಡಿಯುವ ಮಹಿಳೆಯರ ವಯೋಮಿತಿಯನ್ನು ತೆಗೆದುಕೊಂಡಾಗ ೧೫-೪೦ ವರ್ಷದ ಮಹಿಳೆಯರು ದುಡಿಮೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಈ ವಯಸ್ಸು ಅವರ ಸಂತೋನೋತ್ಪತ್ತಿಯ ಅವಧಿಯೂ ಆಗಿರುತ್ತದೆ. ಸಂತಾನೋತ್ಪತ್ತಿ ಹಾಗೂ ಕುಟುಂಬದ ಜವಾಬ್ದಾರಿ ಅವರನ್ನು ತಮ್ಮ ಅನುಕೂಲತೆಗೆ ತಕ್ಕಂತೆ ಫ್ಲೆಕ್ಸಿಬಲ್ ಗುಣವುಳ್ಳ ಕೆಲಸಗಳಲ್ಲಿ ತೊಡಗುತ್ತಾರೆ. ಅದು ಲಭ್ಯವಿರುವುದು ಅಸಂಘಟಿತ ಕ್ಷೇತ್ರದಲ್ಲಿ ಮಾತ್ರ.

3) ಅನಕ್ಷರತೆ, ಶಿಕ್ಷಣ, ತರಬೇತಿ ಹಾಗೂ ಕೌಶಲ್ಯದ ಕೊರತೆಯಿಂದ ಸಂಘಟಿತ ಕ್ಷೇತ್ರದಲ್ಲಿರುವ ಸ್ಪರ್ಧಾತ್ಮಕ ಕೆಲಸಗಳನ್ನು ಪಡೆಯುವುದು ಕಷ್ಟವಾಗುತ್ತದೆ. ಸಾಕ್ಷರತೆ, ಕನಿಷ್ಟ ವಿದ್ಯಾರ್ಹತೆ, ಅನುಭವ, ಕಾರ್ಯಕ್ಷಮತೆ ಕೌಶಲ್ಯ ತರಬೇತಿಗಳನ್ನು ಪೂರೈಸಲಾಗದೆ ಅಸಂಘಟಿತ ವಲಯಕ್ಕೆ ಹೋಗುತ್ತಾರೆ.

4) ಅಸಂಘಟಿತ ವಲಯದಲ್ಲಿ ಪೂರೈಕೆ ಅಧಿಕವಾಗಿರುವುದರಿಂದ ಬೇಡಿಕೆ ಕಡಿಮೆಯಾಗುತ್ತದೆ. ಬೇಡಿಕೆ ಕಡಿಮೆಯಾದಾಗ ಕಡಿಮೆ ಕೂಲಿಗೆ ದುಡಿಯಬೇಕಾಗುತ್ತದೆ.

5) ಇತ್ತೀಚಿನ ತಂತ್ರಜ್ಞಾನ ಬೆಳವಣಿಗೆ, ಆಧುನೀಕರಣ, ಹೊಸ ಆರ್ಥಿಕ ನೀತಿ, ಜಾಗತೀಕರಣ ಈ ಪ್ರಕ್ರಿಯೆ ಮಹಿಳೆಯರನ್ನು ಅಸಂಘಟಿತ ಕ್ಷೇತ್ರಕ್ಕೆ ಕಟ್ಟಿಹಾಕಿವೆ.

ಅಸಂಘಟಿತ ವಲಯದಲ್ಲಿ ದುಡಿಯುವ ದುಡಿಮೆಗಾರರಿಗೆ ಸಾಮಾಜಿಕ ಭದ್ರತಾ ಕಾಯ್ದೆಗಳಿದ್ದರೂ ಈ ಕಾಯ್ದೆಗಳ ವಿಧಿಯನ್ನು ಪಾಲಿಸುವುದರಲ್ಲಿ ಉದ್ದಿಮೆ ಘಟಕಗಳು ಹಿಂದೇಟು ಹಾಕುತ್ತಿವೆ. ಇಲ್ಲಿ ದುಡಿಮೆಯಲ್ಲಿ ನಿರತರಾಗಿರುವ ಮಹಿಳಾ ಕಾರ್ಮಿಕರು ಹೆಚ್ಚು ವೇತನದ ಕೆಲಸಗಳನ್ನು ಹಾಗೂ ವಿಶೇಷ ಸೌಲಭ್ಯಗಳನ್ನು ಪಡೆಯಬೇಕಾದರೆ, ಅವರಿಗೆ ಮುಖ್ಯವಾಗಿ ಶಿಕ್ಷಣ ಮತ್ತು ತಾಂತ್ರಿಕ ಕೌಶಲದ ತರಬೇತಿ ಅವಶ್ಯಕ. ಜೊತೆಗೆ ಶೋಷಣೆ ಬಗೆಗೆ ಜಾಗೃತಿ ಮೂಡಿಸಬೇಕು, ಸಮಾನ ಕೆಲಸಕ್ಕೆ ಸಮಾನವೇತನ ಪಡೆಯುವಂತೆ ಪ್ರೇರಣೆ ನೀಡಬೇಕು. ಇದೆಲ್ಲಕ್ಕಿಂತ ಮುಖ್ಯವಾಗಿ, ಅವರಲ್ಲಿ ಸಂಘಟನಾ ಭಾವನೆಯನ್ನು ಮೂಡಿಸಬೇಕು. ದುಡಿಯುವ ಮಹಿಳೆಯರಿಗೆ ವಿಷಯದ ಬಗ್ಗೆ ಅರಿವು ಮೂಡಿಸಲು ವ್ಯಾಪಕವಾದ ಮತ್ತು ಸವಿಸ್ತಾರವಾದ ಅಧ್ಯಯನ ಹಾಗೂ ಪ್ರಚಾರ ಮುಖ್ಯವಾಗಿ ಆಗಬೇಕಾಗಿದೆ.

ಸಂಘಟಿತ ವಲಯ ಹಾಗೂ ಅಸಂಘಟಿತ ವಲಯಗಳಲ್ಲಿ ಮಹಿಳಾ ಕಾರ್ಮಿಕರ ಹಿತರಕ್ಷಣೆ ಕಾಪಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಪುರುಷ-ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನವೇತನ ಸಿಗುವಂತಹ ಕಾನೂನನ್ನು ಜಾರಿಗೆ ತರುವಂತೆ ಕಾನೂನನ್ನು ಬಿಗಿಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ, ಉದ್ದಿಮೆಯ ಒಡೆಯ, ಸಂಘ-ಸಂಸ್ಥೆಗಳು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಬೇಕು. ಸಂಘ-ಸಂಸ್ಥೆಗಳ ಮೂಲಕ ಕಾರ್ಮಿಕರಿಗೆ ಕೆಲವೊಂದು ನಿರೀಕ್ಷಿತ ಹಾಗೂ ಅನಿರೀಕ್ಷಿತ ಗಂಡಾಂತರಗಳು ಬಂದಾಗ ಸಾರ್ವಜನಿಕ ಸಾಮಾಜಿಕ ನೆರವು, ಸಾಮಾಜಿಕ ವಿಮೆ ಯೋಜನೆ ಜಾರಿ ಹೀಗೆ ಹಲವಾರು ರೀತಿಯ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಅಡಿ ಟಿಪ್ಪಣಿಗಳು:

೧) ಮಹಿಳೆ ಬಿಡುಗಡೆಯ ಹಾದಿಯಲ್ಲಿ- ಎನ್.ಗಾಯಿತ್ರಿ, ೧೯೯೬ ಪು.ಸಂ.-೧೩೫-೧೩೬

೨) ಮಹಿಳೆ ಮತ್ತು ದುಡಿಮೆ ಮಹಿಳಾಭಿವೃದ್ಧಿ ಕಾರ್ಯನೀತಿ ಯೋಜನೆಗಳು -ಪು.ಸಂ. ೩೩

೩) ಮಹಿಳೆ ಮತ್ತು ದುಡಿಮೆ –ಡಾ.ಹೆಚ್.ಎಂ.ಹೇಮಲತಾ-೨೦೦೬, ಪು.ಸಂ-೪೫.

ಅಧ್ಯಾಯ-೩

ಮಹಿಳೆಯರು ದುಡಿಯುವ ಸ್ಥಳಗಳು

ದುಡಿಮೆ ಮತ್ತು ಮಹಿಳೆ ಒಂದು ಪರ್ಯಾಯ ಪದವಾಗಿ ರೂಪಿತಗೊಂಡಿದ್ದು ಸಮಾಜದಲ್ಲಿ ನಾವಿಂದು ದಾಖಲಿಸಬೇಕಾಗಿರೋದು ಅವಳ ದುಡಿಮೆ ಎಲ್ಲೂ ದಾಖಲೆ ಆಗ್ತಾ ಇಲ್ಲ ಎನ್ನುವಂತಹ ವಿಚಾರವನ್ನು ಅವಳ ಉತ್ಪಾದನೆಯ ದುಡಿತದಲ್ಲಿ ದುಡಿತ ಮತ್ತು ಆದಾಯ, ಆರ್ಥಿಕತೆ ಇದರೊಳಗೆ ಮಹಿಳೆಯ ಶ್ರಮ ಎಲ್ಲೂ ಕೂಡ ದಾಖಲಾಗದೇ ಇರುವಂತಹ ದುರಂತ ಇಲ್ಲಿದೆ ಅನ್ನೋದನ್ನ ಗಮನಿಸಬೇಕಾಗುತ್ತದೆ.

ತಾಯಿತನವೂ ಕೂಡ ಈ ಹೊತ್ತಲ್ಲಿ ಒಂದು ಉದ್ಯೋಗದ ನೆಲೆಯನ್ನು ಪಡೆದುಕೊಳ್ಳುವಂತಹ ಸನ್ನಿವೇಶ ನಿರ್ಮಾಣವಾಗುತ್ತಿರುವ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬಹುದು. ಕೆ.ಎಸ್.ನರಸಿಂಹಸ್ವಾಮಿ ಅವರ ಸಣ್ಣ ಸಂಗತಿ ಅನ್ನುವಂತಹ ಒಂದು ಕವನದ ಆಶಯ ಹೀಗಿದೆ. ಒಬ್ಬ ತಾಯಿ ಮಗುವನ್ನು ಮಲಗಿಸುತ್ತಿದ್ದಾಳೆ. ಆ ಮಗು ಹೊದಿಕೆಯನ್ನು ಒದೆಯುತ್ತಾ ಇದೆ. ಅದು ಒದ್ದ ಹಾಗೆಲ್ಲ ರಾತ್ರಿ ಇಡೀ ತಾಯಿ ಅದಕ್ಕೆ ಹೊದಿಕೆಯನ್ನು ಹೊದಿಸುತ್ತಲೇ ಇದ್ದಾಳೆ. ಕವನದ ಒಂದು ಮಾತಿದು "ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ ಅದನ್ನು ಲೆಕ್ಕಿಸದೆ ಮಗು ಹೊದಿಕೆಯನು ಒದೆಯುತಿದೆ"೧ ಮಹಿಳೆಯ ಸ್ಥಿತಿ ಇಂಥ ಒಂದು ಸಣ್ಣ ಸಂಗತಿಯ ವಿಷಾದದ ಪರಿಸ್ಥಿತಿಯಿಂದ ಹೊರ ಬರಬೇಕಾಗಿದೆ.

ಮಹಿಳೆಯರು ಶ್ರಮಶಕ್ತಿಯ ಉತ್ಪಾದಕರೂ ಹೌದು. "ಉದ್ಯೋಗಂ ಪುರಷ ಲಕ್ಷಣಂ" ಮಾತನ್ನು ಹೇಳಿಕೊಂಡು ಬಂದ ಭಾರತೀಯ ಸಮಾಜದಲ್ಲಿ ದುಡಿಯುವ ಮಹಿಳೆ ಇಪ್ಪತ್ತನೆಯ ಶತಮಾನದ ಅದ್ಭುತವೇನಲ್ಲ. ಅನಾದಿಕಾಲದಿಂದಲೂ ಪುರುಷರೊಡನೆ ಮಹಿಳೆಯರ ಸಶಕ್ತೀಕರಣದಿಂದಾಗಿ ಪುರುಷರ ಭದ್ರ ಕೋಟೆಯೆನಿಸಿಕೊಂಡ ಎಲ್ಲ ಕ್ಷೇತ್ರದ ಸ್ಥಳಗಳಲ್ಲೂ ಮಹಿಳೆ ದುಡಿಯುತ್ತಿದ್ದಾಳೆ.

ಮನೆವಾರ್ತೆಯ ದುಡಿಮೆ:

ಜನ್ಮಜನ್ಮಾಂತರಗಳಿಂದ ಅಂಟಿದ ನಂಟು ಬಿಡದ ಮಾಯೆ ಮನೆಗೆ ಅಂಟಿಕೊಂಡು ಬದುಕಬೇಕಾದ ಪರಿಸ್ಥಿತಿಯಲ್ಲಿ ಗಂಡನ ಹಿತಾಸಕ್ತಿ-ಮಕ್ಕಳ ಹಿತಾಸಕ್ತಿ-, ಕುಟುಂಬದ ಹಿತಾಸಕ್ತಿಗಳಲ್ಲಿ ದಿನನಿತ್ಯ ಆಕೆ ಬೆರೆತು ಹೋಗುತ್ತಾಳೆ. ಅವಳ ದುಡಿಮೆ ಅಡುಗೆ ಮಾಡುವ ಕಾರ್ಯದಲ್ಲಿ ಶ್ರಮವನ್ನು ತೊಡಗಿಸಬೇಕಾಗುತ್ತದೆ. ಆದರೆ ನಮ್ಮ ಸಮಾಜ ವಿಜ್ಞಾನಗಳು ಇಂತಹ ಚಟುವಟಿಕೆಗಳನ್ನು ಉತ್ಪಾದನೆ ಎಂದು ಪರಿಗಣಿಸುವುದಿಲ್ಲ. ಉತ್ಪಾದನೆಯೆಂದೆನಿಸುವ ಚಟುವಟಿಕೆಗಳಿಗೆ ಸಾಮಾಜಿಕ ಮಹತ್ವದತ್ತವಾಗುವುದಿಲ್ಲ.

ಇಂತಹ ಅನೇಕ ಚಟುವಟಿಕೆಗಳನ್ನು ಹೆಸರಿಸಬಹುದು. ಬಟ್ಟೆ ಒಗೆಯುವುದು, ಕಸ, ಮುಸುರೆ, ಅಡುಗೆ, ಕಾಳುಗಳ ಒಪ್ಪ-ಓರಣ ನೀರಿನ ಸಂಗ್ರಹ, ಉರುವಲು ಸಂಗ್ರಹ, ಮಕ್ಕಳ ಪೋಷಣೆ, ಉಪ್ಪಿನಕಾಯಿ-ಹಪ್ಪಳ ತಯಾರಿಕೆ, ಮನೆಯ ಸ್ವಚ್ಛತೆ , ಪೂಜೆ-ವ್ರತ, ಪುನಸ್ಕಾರ, ಸ್ವಂತ ಹೊಲ-ಗದ್ದೆಗಳಲ್ಲಿ ದುಡಿಮೆ, ದನ-ಕರುಗಳ ಪಾಲನೆ, ಹಾಲು ಹಿಂಡುವುದು, ಮೇವು ಸೊಪ್ಪುಸೊದೆ ಮುಂತಾದವು ಮಾರುಕಟ್ಟೆ ಪ್ರವೇಶಿಸದ ವಿನಿಮಯ ಮಹತ್ವವಿಲ್ಲದೆ, ವಿಶಾಲಾರ್ಥದಲ್ಲಿ ಸಂತಾನೋತ್ಪತ್ತಿ ಚಟುವಟಿಕೆಗಲು ಎನಿಸಿಕೊಳ್ಳುತ್ತದೆ. ಇಲ್ಲಿ ಸಂಪಾದನೆ ಇಲ್ಲ. ಈ ಎಲ್ಲ ಚಟುವಟಿಕೆಗಳು 'ಉತ್ಪಾದನೆ' ಎಂದೆನಿಸಿಕೊಳ್ಳದ ಚಟುವಟಿಕೆಗಳಲ್ಲಿ ಸರಿಸುಮಾರು ಮಹಿಳೆಯರು ಮಾಡುವ ಕೆಲಸಗಳಾಗಿವೆ. ಇದಕ್ಕೆ 'ಉಪಯೋಗಿ ಮಹತ್ವ' ವಿದೆ. ಆದರೆ ಇವುಗಳಿಗೆ 'ಸಾಮಾಜಿಕ ಮಹತ್ವ' ವಿಲ್ಲ. ಆದ್ದರಿಂದ ಇವುಗಳನ್ನು ಮಹಿಳೆಯರಿಗೆ ವಹಿಸಿಕೊಡಲಾಗಿದೆ.

ಮಹಿಳೆ ಹೊರಗೆ ದುಡಿಯಲಿ, ದುಡಿಯದಿರಲಿ, ಮನೆಗೆಲಸ ಅವಳಿಗೆ ಕಟ್ಟಿಟ್ಟಬುತ್ತಿ. ಹೆಣ್ಣನ್ನು ನಿರಂತರ ದಾಸ್ಯಕ್ಕೆ ದೂಡಿರುವ ಶಾಶ್ವತ ಗುಲಾಮ ಚಾಕರಿ ಇದು. ಬೆಲೆಯೇ ಇಲ್ಲದ ಹೆಣ್ಣಿನ ಈ ದುಡಿಮೆ ಅವಳಿಗೆ ಯಾವ ರೀತಿಯ ಸ್ಥಾನ ಮತ್ತು ಅಂತಸ್ತನ್ನು ಕೊಡುವುದಿಲ್ಲ. ಕುಟುಂಬದಲ್ಲಿ ವಯಸ್ಕ ಸ್ತ್ರೀ-ಪುರುಷರಿಬ್ಬರೂ ಹಂಚಿಕೊಂಡು ಮಾಡಬೇಕಾದ ಗೃಹಕೃತ್ಯವನ್ನು ಸಂಪೂರ್ಣವಾಗಿ ಮಹಿಳೆಯರ ಪಾಲಿಗೂ ನೀಡಿರುವುದು ಶೋಷಣೆಯ ಮುಖ್ಯ ಸೂತ್ರವಾಗಿದೆ. ಶ್ರಮದಾಯಕವಾದ ಮನೆಯ ಚಾಕರಿ ಮಾಡುತ್ತಿದ್ದರೂ ಗೃಹಿಣಿಯರಿಗೆ ಆರ್ಥಿಕ ಸ್ವಾವಲಂಬನೆ ಮಾತ್ರ ಇಲ್ಲ; ಆಕೆ ಈ ವಿಚಾರದಲ್ಲಿ ಪರಾವಲಂಬಿ.

ಅಂತರರಾಷ್ಟ್ರೀಯ ಮಹಿಳಾ ದಶಕದ ಸಂದರ್ಭದಲ್ಲಿ ನೈರೋಬಿಯದಲ್ಲಿ ನಡೆದ ವಿಶ್ವಮಹಿಳಾ ಸಮ್ಮೇಳನದಲ್ಲೂ ಮಹಿಳೆಯ ದುಡಿಮೆಯನ್ನು ಕುರಿತಂತೆ ಇಂತಹುದೇ ಅಪಸ್ವರದ ಧ್ವನಿಯೊಂದು ಕೇಳಿ ಬಂತು. ಮಹಿಳೆ ಮನೆಯಲ್ಲಿ ಮಾಡುವ ಕೆಲಸಕ್ಕೆ ವೇತನ ಕೊಡಬೇಕು; ಗಂಡನಲ್ಲ, ಸರ್ಕಾರ ಎನ್ನುವ ಅಭಿಪ್ರಾಯ ಕೆಲವರದಾದರೆ, ಗಂಡನೇ ಹೆಂಡತಿಯ ದುಡಿಮೆಗೆ ಕೂಲಿಕೊಡಬೇಕು ಎಂಬ ಅಭಿಪ್ರಾಯವುಳ್ಳವರೇ ಕೆಲವರು ಇದ್ದರು. ಮಹಿಳೆಯರ ಗೃಹಕೃತ್ಯದ ಶ್ರಮವನ್ನು ಬೆಲೆಯುಳ್ಳ ದುಡಿಮೆಯನ್ನಾಗಿಸಬೇಕೆಂಬ ಈವಾದ ಅತಿರೇಕದ್ದು ಎಂದೆನಿಸಿದರೂ ಪಾಶ್ಚಾತ್ಯ ಮಹಿಳಾ ಚಳುವಳಿಗಾರರು ಗೃಹಕೃತ್ಯಕ್ಕೆ ಕೂಲಿ ಕೊಡಿಸುತ್ತೇವೆಂದು ಮಾನವೀಯ ಮೌಲ್ಯಕ್ಕೆ ಕೈಹಾಕಲಿದ್ದರು. ಆದರೆ ಮಾನವೀಯ ಸಂಬಂಧಗಳಾದ ತಾಯಿ, ಮಡದಿ ಸಂಬಂಧಗಳು ವ್ಯಾಪಾರೀಕರಣಕ್ಕೆ ಒಳಪಡಿಸುವುದರಲ್ಲಿ ಬದುಕಿಗೆ ಅರ್ಥವೇ ಇರುವುದಿಲ್ಲ. ವಿಶ್ವ ಮಹಿಳಾ ಸಮ್ಮೇಳನದಲ್ಲಿ ಮಹಿಳೆಯ ಗೃಹಕೃತ್ಯದ ದುಡಿಮೆಗೆ

ಕೂಲಿಕೊಡಬೇಕೆಂಬ ವಾದವನ್ನು ತಿರಸ್ಕರಿಸಿದ ಭಾರತದ 'ದೇವಕಿ ಜೈನ್' ಅಭಿಪ್ರಾಯ ಗಮನಾರ್ಹವಾದದ್ದು; "ಅಭಿವೃದ್ಧಿ ಶೀಲ ರಾಷ್ಟ್ರಗಳ ಬಡ ಮಹಿಳೆ ಒಂದು ಬಿಂದಿಗೆ ನೀರು ತರಲು ಆರುಗಂಟೆ ತೆಗೆದುಕೊಳ್ಳುತ್ತಾಳೆಂದುಕೊಳ್ಳಿ. ಅದಕ್ಕೆ ಅವಳಿಗೆ ಎರಡೇ ಗಂಟೆ ಸಾಕಾಗುವಂತೆ ಮಾಡಿದರೆ ಉಳಿದ ಸಮಯವನ್ನು ಅವಳು ಹೆಚ್ಚು ಕೂಲಿ ಪಡೆಯಲು ತೊಡಗಿಸುತ್ತಾಳೆ. ಬಹಳಷ್ಟು ಮಹಿಳೆಯರು ವೇತನ ಸಹಿತ ಮತ್ತು ರಹಿತ ದುಡಿಮೆ ಮಾಡುತ್ತಿದ್ದಾರೆ. ನಮಗೆ ಈಗ ಅಗತ್ಯವಾಗಿರುವುದು ಮನೆಗೆಲಸವನ್ನು ಹಗುರ ಮಾಡುವ ವಿಧಾನ; ಮೂಲಭೂತ ಅಗತ್ಯಗಳು ಮೂಲಭೂತ ಹಕ್ಕಾಗುವಂತೆ ಹಾಗೂ ಈ ಕುಟುಂಬ ಸೇವೆ ಬಂಡವಾಳವಾಗಿ ಪರಿಣಮಿಸುವ ವ್ಯವಸ್ಥೆ"೨ ಈ ಮಾತು ಅಕ್ಷರಶಃ ಸತ್ಯ. ಇದಕ್ಕೆಲ್ಲಾ ಜೊತೆ ಜೊತೆಯಲ್ಲೇ ಆಗಬೇಕಾದ್ದು ಸ್ತ್ರೀ-ಪುರುಷರಿಬ್ಬರೂ ಮನೆಗೆಲಸನ್ನು ಸಮಸಮವಾಗಿ ಹಂಚಿಕೊಳ್ಳಬಲ್ಲಂತಹ ಮಾನಸಿಕ ಸಿದ್ಧತೆ, ಅದಕ್ಕೆ ತಕ್ಕ ವಾತಾವರಣವನ್ನು ರೂಪಿಸುವ ಕೆಲಸ ಶತಮಾನಗಳಿಂದಲೂ ಮಾನಸಿಕವಾಗಿಯೂ, ದೈಹಿಕವಾಗಿಯೂ ಮನೆಚಾಕರಿಗೆ ತಮ್ಮನ್ನು ಒಗ್ಗಿಸಿಕೊಳ್ಳದ ಪುರುಷ ಸಮುದಾಯವನ್ನು ಈ ದಿಸೆಯತ್ತ ಒಗ್ಗಿಸುವ ಕೆಲಸ ನಮ್ಮ ಸಮಾಜದಲ್ಲಿ ತುರ್ತಾಗಿ ಆಗಬೇಕಾಗಿದೆ.

ಕೃಷಿ: ವ್ಯವಸಾಯ ಗಂಡಸು ಮತ್ತು ಹೆಂಗಸರಿಬ್ಬರೂ ಸೇರಿ ಮಾಡುವಂತ ಕೆಲಸವಾಗಿದೆ. ಪುರುಷನೊಬ್ಬನೇ ಆಹಾರ ಒದಗಿಸುವವನು ಎಂದು ಸಾಮಾನ್ಯೀಕರಿಸುವುದು ತಪ್ಪಾಗುತ್ತದೆ. ಇಲ್ಲಿ ಎರಡು ವಿಧಗಳನ್ನು ಕಾಣಬಹುದು. ಪುರುಷರ ಸಹಾಯವಿಲ್ಲದೆ ಮಹಿಳೆಯರೇ ಆಹಾರ ಉತ್ಪಾದಿಸುವುದು, ಮಹಿಳೆಯರ ಸಹಾಯದಿಂದ ಪುರುಷರು ಆಹಾರ ಉತ್ಪಾದನೆಯಲ್ಲಿ ತೊಡಗಿರುವುದು. ಒಟ್ಟಿನಲ್ಲಿ ಕೃಷಿಯು ಪುರುಷ ಮತ್ತು ಮಹಿಳೆಯರಿಬ್ಬರೂ ಸೇರಿ ನಿರ್ವಹಿಸುವ ಹೊಣೆಗಾರಿಕೆಯಾಗಿದೆ.

ಆದರೆ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಕೂಲಿಯಾಳುಗಳಾಗಿ ಹೊಲ-ಗದ್ದೆಗಳಲ್ಲಿ ದುಡಿಯಲು ಹೋಗುತ್ತಾರೆ. ತಮ್ಮ ತಮ್ಮ ಮನೆಗಳಲ್ಲಿ ದುಡಿದು ಪುನಃ ತಮ್ಮ ಸ್ವಂತ ಹೊಲಗದ್ದೆಗಳಲ್ಲಿ ದುಡಿಯುವ ಮಹಿಳೆಯರನ್ನೂ ಕಾಣಬಹುದಾಗಿದೆ. ಕೂಲಿಯಾಳುಗಳಾಗಿ ಕೆಲಸ ಮಾಡುವ ಮಹಿಳೆಯರು ಪುರುಷರಗಿಂತ ಕಡಿಮೆ ವೇತನ ಪಡೆಯುತ್ತಿರುವುದನ್ನು ಕಾಣಬಹುದಾಗಿದೆ. ೧೯೦೧ ರ ಗಣತಿಯ ಪ್ರಕಾರ ರಾಷ್ಟ್ರದ ದುಡಿಮೆ ಶಕ್ತಿಯಲ್ಲಿ ಪ್ರತಿ ೧೦೦೦ ಪುರುಷರಿಗೆ ೫೨೫ ಮಹಿಳೆಯರಿದ್ದರು. ೧೯೭೧ರ ವೇಳೆಗೆ ಪ್ರತಿ ೧೦೦೦ ಪುರುಷರಿಗೆ ಕೇವಲ ೨೧೦ ಸ್ತ್ರೀಯರು ದುಡಿಮೆ ಕ್ಷೇತ್ರದಲ್ಲಿದ್ದರು. ವರಮಾನದ ದೃಷ್ಟಿಯಿಂದ ನೋಡಿದರೆ, ಕೃಷಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಪುರುಷರ ವೇತನದಲ್ಲಿ ಶೇಕಡ ೪೦ ರಿಂದ ೬೦ ರಷ್ಟು ಮಾತ್ರ ಕೂಲಿ ದೊರೆಯುತ್ತಿದೆ ಎಂದು ಸರ್ಕಾರವೇ ಹೇಳಿದೆ. ಕಾಲ ಉರುಳಿದಂತೆ ಮಹಿಳೆಯರಿಗೆ ಕೂಲಿ ಹೆಚ್ಚುವ ಬದಲು ಕಡಿಮೆಯಾಗುತ್ತಿದೆ. "೧೯೭೬ ರಲ್ಲಿ

ಸಮಾನವೇತನ ಕಾನೂನು ಜಾರಿಗೆ ಬಂದರೂ ಇಬ್ಬರ ವೇತನದಲ್ಲಿ ಇಂದಿಗೂ ಸಮಾನತೆ ಇಲ್ಲ.[೩] ಇಂದು ವಿಶ್ರಾಂತಿ ಎಂಬುದು ಗ್ರಾಮೀಣ ಮಹಿಳೆಗೆ ಮರೀಚಿಕೆಯಾಗಿದೆ. ಮಹಿಳೆಯರು ಇಂದಿಗೂ ದುಡಿಯುವ ಯಂತ್ರವಾಗಿದ್ದಾರೆ, ಪರಿಸ್ಥಿತಿಯ ಕೈಗೊಂಬೆಯಾಗಿದ್ದಾರೆ.

ಮುಂಜಾನೆಯ ನಸುಕಿನಲ್ಲಿ ಎದ್ದ ಅಮ್ಮ ಅಡುಗೆ ಮನೆಗೆ ಬಂದು ಇದೊಂದು ಜನ್ಮಜನ್ಮಾಂತರಗಳಿಂದ ಅಂಟಿದ ಸಾಮ್ರಾಜ್ಯವಾಗಿ ಸೌದೆ ತುಂಡುಗಳನ್ನು ಒಲೆಗೆ ಜೋಡಿಸಿ ಪಾತ್ರೆಗಳನ್ನು ಇಟ್ಟು ನೀರು ತುಂಬಿಸಿ ಸಣ್ಣಗೆ ಉರಿಮಾಡಿ ಚೊಂಬು ತೆಗೆದುಕೊಂಡು ಹಾಲು ಕರೆಯಲು, ಮತ್ತೆ ಒಲೆಯ ಮೇಲಿನ ಬಿಸಿನೀರನ್ನು ಗಂಡನಿಗೆ ಮುಖ ತೊಳೆಯಲು ಕೊಟ್ಟು ಒಲೆಯ ಮೇಲಿನ ಹೆಂಚಿನಲ್ಲಿ ಸುಟ್ಟಿದ ರೊಟ್ಟಿಯನ್ನು ಗಂಡ-ಮಕ್ಕಳಿಗೆ ನೀಡಿ ಚಟ್ನಿ ತುಪ್ಪವನ್ನು ಹಾಕಿ ಮತ್ತೆ ಮನೆ ಆಳುಗಳಿಗೆ ಊಟಕ್ಕೆ ಸಿದ್ಧಪಡಿಸಲು ಮುಂದಾಗಿ ಬಿಸಿ ಮುದ್ದೆಯನ್ನು ಮಾಡಿ ಬುಟ್ಟಿಯಲ್ಲಿ ೧೦ ರಿಂದ ೧೫ ಜನ ಆಳುಗಳಿಗೆ ದೊಡ್ಡ ದೊಡ್ಡ ಪಾತ್ರೆಯಲ್ಲಿ ಅಡುಗೆ ಬೇಯಿಸಿ ಬಡಿಸಿ ರಾಗಿಯ ಮಧ್ಯೆ ಬೆಳೆದ ಕಳೆ ಕೀಳುವ ಕೆಲಸ ಮತ್ತೆ ಬಂದ ಮಕ್ಕಳಿಗೆ ಗಂಡನಿಗೆ ಊಟ ಪುನಃ ಸಂಜೆ ದನ-ಕರು ಹಸುವಿನ ಕೆಲಸ; ರಾತ್ರಿಯ ಊಟಕ್ಕೆ ಒಲೆಯ ಮುಂದೆ ಉರಿಯ ನಡುವೆ ದಣಿದ ಜೀವ ಮನೆ ಕೆಲಸದ ಒಪ್ಪ-ಓರಣದ ನಡುವೆ ಅಡುಗೆ ಕೆಲಸ ಮುಗಿಸುವ ಇವಳಿಗೆ ಮನರಂಜನೆಗೆ ಮನಸ್ಸನ್ನು ವಾಲಿಸಲು ಸಮಯವೆಲ್ಲಿ? ಧಣಿದ ಜೀವಕ್ಕೆ ಶ್ರಮದ ದುಡಿಮೆಗೆ ಪ್ರತಿಫಲವಾಗಿ ದೊರೆತಿದ್ದಾದರೂ ಏನು? ಎನ್ನುವ ಪ್ರಶ್ನೆ ನಮ್ಮನ್ನು ಸದಾ ಕಾಡುತ್ತಿರುತ್ತದೆ.

ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರು : ಕೆಳವರ್ಗದಲ್ಲಿ ಮಹಿಳೆಯ ದುಡಿಮೆಯ ಭಾರ-ಒತ್ತಡ ಅಪಾರವಾಗಿರುತ್ತದೆ. ಉತ್ಪಾದನಾ ದುಡಿಮೆಗೆ ದೊರೆಯುವ ಕೂಲಿ ಅತ್ಯಂತ ಕಡಿಮೆಯಿರುತ್ತದೆ. ಬಡತನವು ತೀವ್ರವಾಗುತ್ತಾ ನಡೆದಂತೆ ಅದರ ನಿರ್ವಹಣೆಯ ಜವಾಬ್ದಾರಿ ಆರ್ಥಿಕವಾಗಿ ಮಹಿಳೆಯರ ಮೇಲೆ ಬೀಳುತ್ತದೆ. ಈ ಮಹಿಳೆಯರಿಗೆ ದುಡಿಮೆಗೆ ಅವಕಾಶ ನೀಡುವ ಉದ್ಯಮಪತಿಗಳು ಅವರಿಂದ ಕಡಿಮೆ ಕೂಲಿಗೆ ಹೆಚ್ಚುಕಾಲ ದುಡಿಸಿಕೊಳ್ಳುತ್ತಾರೆ. ಅಧಿಕ ಗಂಟೆಗಳ ಕಾಲ ಉತ್ಪಾದನಾ ದುಡಿಮೆ ನಡೆಸುವ ಮಹಿಳೆಯರು ಅದರ ಜೊತೆಯಲ್ಲಿ ಮನೆವಾರ್ತೆ ದುಡಿಮೆಯನ್ನು ನಿರ್ವಹಿಸಬೇಕಾಗುತ್ತದೆ. ಕಡುಬಡತನದ ಕುಟುಂಬಗಳಲ್ಲಿ ಪುರುಷರು ಮಕ್ಕಳ ಲಾಲನೆ-ಪೋಷಣೆಯ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ. ಆಗ ಮಕ್ಕಳ ಲಾಲನೆ-ಪೋಷಣೆಯ ಜವಾಬ್ದಾರಿಯೂ ತಾಯಿಯ ಮೇಲೆ ಬೀಳುತ್ತದೆ. ಹೀಗೆ ಕೆಳವರ್ಗದ ಮಹಿಳೆಯರು ಅದರಲ್ಲೂ ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರು ಮೂರು ಬಗೆಯ ದುಡಿಮೆಯ ಬಾಬ್ತು ದಿನದಲ್ಲಿ ೧೬ ರಿಂದ ೧೮

ಗಂಟೆಗಳ ಕಾಲ ದುಡಿಯುವ ಸಂಭವವಿದೆ. ಇಂಥ ದುಡಿಮೆಯು ಅತ್ಯಂತ ಶ್ರಮದಾಯಕವಾದುದಾಗಿರುತ್ತದೆ. ಹೀಗೆ ದುಡಿದರೂ ಬಡಕುಟುಂಬಗಳಿಗೆ ಹೊಟ್ಟೆ ತುಂಬ ಊಟ ದೊರೆಯದಿರುವ ಸಂಭವವೇ ಹೆಚ್ಚು.

ದುಡಿಯುವ ಪರಿಸರದಲ್ಲಿ ಮಹಿಳೆಯರು ಲೈಂಗಿಕ ಕಿರುಕುಳವನ್ನೂ ಎದುರಿಸಬೇಕಾಗಿರುವುದು ಹೆಚ್ಚು ಆತಂಕಕ್ಕೆ ಗುರಿಮಾಡುವ ವಿಚಾರ ಬೀಡಿ ಪೊಟ್ಟಣದಲ್ಲಿ ಬೀಡಿಯೊಂದನ್ನು ತೆಗೆದು ಸೇದಿದಾಗ ಅದನ್ನು ಕಟ್ಟಿದವರು ಯಾರು ಎಂಬ ಪ್ರಶ್ನೆ ಸೇದಿದವನಿಗೆ ನೆನಪಾಗುತ್ತದೆಯೇ ಅಥವಾ ಆ ಕಾರಣದಿಂದ ಬೀಡಿಯ ರುಚಿ ಬದಲಾಗುತ್ತಿದೆಯೇ? ಇಲ್ಲ. ಆದರೆ ಮಹಿಳೆ ಬೀಡಿ ಕಟ್ಟಿದರ ಅದಕ್ಕೆ ಕಡಿಮೆ ಕೂಲಿ, ಪುರುಷ ಕಟ್ಟಿದರೆ ಅದಕ್ಕೆ ಹೆಚ್ಚು ಕೂಲಿ. ಈ ಕೂಲಿ ತಾರತಮ್ಯತೆಯ ಹಿಂದೆ ಮೇಲು-ಕೀಳಿನ ಅಪಮೌಲ್ಯ ಎದ್ದು ಕಾಣುತ್ತದೆ.

ಬೀಡಿ, ಹೊಗೆಸೊಪ್ಪು, ಅಗರಬತ್ತಿ, ಅಕ್ಕಿಯಗಿರಣಿ, ಹತ್ತಿ ಕಾರ್ಖಾನೆ, ಗೋಡಂಬಿ, ಸೆಣಬಿನ ನಾರು ಮುಂತಾದ ಕಾರ್ಖಾನೆಗಳ ಕೈಗಾರಿಕೆಗಳಲ್ಲಿ ದುಡಿಯುವ ಸ್ತ್ರೀಯರಿಗೆ ಕೃಷಿ ಕಾರ್ಮಿಕ ಮಹಿಳೆಯರಿಗೆ, ಮನೆ ಕಟ್ಟುವ ಕೆಲಸದಲ್ಲಿರುವ ಹೆಂಗಸರಿಗೆ 'ಸಮಾನ ದುಡಿಮೆಗೆ ಸಮಾನ ವೇತನ' ಸಿಗುವುದಿಲ್ಲ. ಸಮಾನ ದುಡಿಮೆಗೆ ಸಮಾನವೇತನಕ್ಕೆ ಒತ್ತಾಯಿಸಿದುದೇ ಕಾರಣವಾಗಿ "ಕಲ್ಲಿದ್ದಲು ಗಣಿಗಳಲ್ಲಿ ಮಹಿಳೆಯರನ್ನು ಕೆಲಸದಿಂದ ತೆಗೆಯಲಾಯಿತು ಎಂದು ಕಲ್ಲಿದ್ದಲು ಗಣಿ ಕಾರ್ಖಾನೆಯ ದುಡಿಯುವ ಸ್ಥಿತಿಗತಿ"ಳ ಗಳ ಳ ಬಗ್ಗೆ ಬಂದ ೧೯೬೭ ವರದಿ ಅಭಿಪ್ರಾಯಪಟ್ಟಿದೆ.

ಕಛೇರಿಗಳಲ್ಲಿ ದುಡಿಯುವ ಮಹಿಳೆಯರು: ಪುರುಷನಂತೆ ಮಹಿಳೆಯು ಸಮಾನ ಹಾಗೂ ಉನ್ನತ ವಿದ್ಯಾಭ್ಯಾಸದಲ್ಲಿ ಪಾಂಡಿತ್ಯ ಸಾಧಿಸಿ ತಾನೂ ಸಹ ಸಮಾನವೇತನ ಸ್ವೀಕರಿಸುತ್ತಿರುವುದು ಆಧುನಿಕ ಸಮಾಜದ ಮಹಿಳೆ ಯಶಸ್ಸನ್ನು ಗುರುತಿಸಿದರೂ ಸಹ ಇಲ್ಲೂ ಆಕೆ ಕೆಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕಾಣುತ್ತೇವೆ. ಗಂಡನಿಂದಲೇ ಶೋಷಣೆ, ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಕಛೇರಿಯಲ್ಲಿ ದುಡಿದು ದಣಿದು ಹೋದರೂ ಮತ್ತೆ ಮನೆಯಲ್ಲಿ ಮಕ್ಕಳ ಗಂಡನ ಉಪಚಾರಕ್ಕೆ ನಿಲ್ಲಬೇಕಾದ ಪರಿಸ್ಥಿತಿ, ಮಾನಸಿಕ ಅಸ್ವಸ್ಥತೆ, ಮನರಂಜನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿರುವಿಕೆ, ಅನಾರೋಗ್ಯ ಈ ರೀತಿ ಉದ್ಯೋಗ ನಿರತ ಮಹಿಳೆಯರು ಇಬ್ಬಗೆಯ ಹೊಣೆಗಾರಿಕೆಯಿಂದ ಹೆಣಗಾಡುತ್ತಿದ್ದಾರೆ. ಎರಡೂ ಕ್ಷೇತ್ರದಲ್ಲೂ ಅವರ ಶ್ರಮ-ಬುದ್ಧಿಮತ್ತೆ ಹಂಚಿ ಹೋಗುವುದರಿಂದ ಅವರಿಗೆ ವೃತ್ತಿ ಔನ್ನತ್ಯ ಸಾಧ್ಯವಾಗುವುದಿಲ್ಲ.

ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಆಕೆ ಊರಿಂದೂರಿಗೆ ವರ್ಗಾವಣೆಯಾದಾಗ ಕುಟುಂಬ ಕಲಹಕ್ಕೆ ಒಳಗಾಗಬೇಕಾಗುತ್ತದೆ. ಒಂಟಿಯಾಗಿ ಜೀವಿಸುವ ಸಂದರ್ಭ, ಕುಟುಂಬ ವಿಘಟನೆ ಇಂಥ ಹಲವಾರು ಸಮಸ್ಯೆಗಳನ್ನು ಕಛೇರಿಯಲ್ಲಿ ದುಡಿಯುವ ಮಹಿಳೆ ಎದುರಿಸಿ ನಿಲ್ಲಬೇಕಾಗುತ್ತದೆ.

ಕಛೇರಿಯಲ್ಲಿ ದುಡಿಯುವ ಅದರಲ್ಲೂ ಉನ್ನತ ಹುದ್ದೆಯಲ್ಲಿ ಕೆಲಸ ಮಾಡುವ ಮಹಿಳೆಯರ ಪರಿಸ್ಥಿತಿಗಳನ್ನು ಇಲ್ಲಿ ಗಮನಕ್ಕೆ ತರಬಯಸುತ್ತೇನೆ. ಕೆಲವು ಉದಾಹರಣೆಗಳಾದ:

1) ಒಬ್ಬ ಮಹಿಳೆಗೆ ಕಂದಾಯ ಇಲಾಖೆಯಲಲಿ ಉನ್ನತ ಹುದ್ದೆ, ದೊಡ್ಡ ಮನೆ, ಆಫೀಸು, ಕಛೇರಿಗಳನ್ನು ತಪಾಸಣೆ ಮಾಡುವಂತಹ ಉನ್ನತ ಅಧಿಕಾರಿ ಬೆಂಗಳೂರಿನಿಂದ ಮತ್ತೊಂದು ಊರಿಗೆ ವರ್ಗಾವಣೆಯಾಗಿ, ಕಾಲೇಜಿನಲ್ಲಿ ಓದುವ ಇಬ್ಬರು ಮಕ್ಕಳು, ವಯಸ್ಸಾದ ಅತ್ತೆ-ಮಾವ, ಇವರಷ್ಟೇ ಉನ್ನತ ಹುದ್ದೆಯಲ್ಲಿರುವ ಪತಿ ಇವೆರೆಲ್ಲರನ್ನು ಬಿಟ್ಟು ಬರುವಂತಹ ಪರಿಸ್ಥಿತಿ ಎದುರಾಗಿ ದೊಡ್ಡ ಮೊತ್ತದ ಸಂಬಳ ತೆಗೆದುಕೊಂಡರೂ ಒಂಟಿಯಾಗಿ ಬದುಕಬೇಕಾಗುತ್ತದೆ.
2) ಮತ್ತೊಬ್ಬಾಕೆ ಶಿಕ್ಷಕಿಯಾಗಿ ಸರ್ಕಾರ ಈ ಹುದ್ದೆಗಾಗಿ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿ ಪ್ರೌಢಶಾಲೆಯ ಶಿಕ್ಷಕಿಯಾಗಿ ನೇಮಕಗೊಂಡ ಈಕೆ ಸ್ವಸ್ಥಾನವನ್ನು ಬಿಟ್ಟು ದೂರದ ಪುತ್ತೂರಿನ ಬಳಿಯ ಸಣ್ಣ ಹಳ್ಳಿಯಲ್ಲಿ ಇರಬೇಕಾದ ಪರಿಸ್ಥಿತಿ ಇಬ್ಬರು ಚಿಕ್ಕಮಕ್ಕಳು ಪತಿ, ಸಂಸಾರ, ಬಂಧು-ಬಳಗ ಬಿಟ್ಟು ಇರುವ ಪರಿಸ್ಥಿತಿ ಇವರದಾಗಿದೆ.

ಈ ರೀತಿಯಲ್ಲಿ ಪುರುಷನಂತೆ ಸ್ವತಂತ್ರವಾಗಿ, ಸಮಾನವಾಗಿ, ದಿಟ್ಟವಾಗಿ ಬದುಕನ್ನು ಸಾಗಿಸಲು ಮುಂದಾದ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಏನು? ಎಂಬ ಪ್ರಶ್ನೆ ಮೂಡಿದಾಗ ಮಹಿಳೆಯ ಕುಟುಂಬ ಇರುವಲ್ಲಿಯೇ ಆಕೆಗೆ ದುಡಿಯುವ ಸೌಲಭ್ಯ ಒದಗಿಸುವುದು ಸರ್ಕಾರದ ಜಬಾಬ್ದಾರಿಯಾಗಿದ್ದು ಸರ್ಕಾರ ಇನ್ನೂ ಹೆಚ್ಚಿನ ಚಿಂತನೆಯನ್ನು ನಡೆಸಬೇಕಾಗಿದೆ.

ರಾಜಕೀಯದಲ್ಲಿ ದುಡಿಯುವ ಮಹಿಳೆಯರು: ಬಡತನ, ಅನ್ಯಾಯದ ವಿರುದ್ಧ ಪುರುಷರಿಗಿಂತ ಮಹಿಳೆಯರು ಹೆಚ್ಚು ಶಕ್ತಿಯುತವಾಗಿ ಹೋರಾಡುತ್ತಾರೆ. ಅವರಿಗೆ ಯಾವ ವಿಷಯಕ್ಕೆ ಹೆಚ್ಚಿನ ಮಹತ್ವ ನೀಡಬೇಕೆಂಬುದು ತಿಳಿದಿದೆ. ಇದನ್ನು ರಾಷ್ಟ್ರಾದ್ಯಂತ ಮಹಿಳೆಯರ ಕೈಗೆ ಅಧಿಕಾರ ಬಂದ ಸ್ಥಳದಲ್ಲಿ ಅವರು ಯಾವ ರೀತಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ ಎಂಬುದನ್ನು ಗಮನಿಸಿದಲ್ಲಿ ತಿಳಿಯುತ್ತದೆ. ಬಾಳಿನ ಭವಿಷ್ಯ ಈ ಹೆಂಗಸರ ಕೈಯಲ್ಲಿದೆ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ.

ಭಾರತದ ಮೊಟ್ಟ ಮೊದಲ ಪ್ರಧಾನಿಯಾಗಿದ್ದ ಜವಹರ್‌ಲಾಲ್ ನೆಹರು ರವರು "ಒಂದು ದೇಶದ ಪ್ರಗತಿ ಆ ದೇಶದ ಮಹಿಳೆಯರಲ್ಲಿ ಕಾಣಬಹುದು"೫ ಎಂದಿರುವುದು ಗಮನಾರ್ಹವಾದ ಮಾತು. ಇಷ್ಟೇ ಅಲ್ಲ ಮಹಿಳೆಯರಿಗೆ ರಾಜಕಾರಣದ ಅಧಿಕಾರ ನೀಡುವ ಜೊತೆಗೆ ಅವಳಿಗೆ ಪ್ರಮುಖವಾದ ಭದ್ರತೆ, ಅಭಿವೃದ್ಧಿ, ಸಾಮಾಜಿಕ ಸ್ಥಾನ-ಮಾನ, ಆರೋಗ್ಯ, ಶಿಕ್ಷಣ ಇವೆಲ್ಲವೂ ಉತ್ತಮವಾದಲ್ಲಿ ಅವಳು ಒಬ್ಬ ಉತ್ತಮ ರಾಜಕಾರಣಿಯಾಗುವುದರಲ್ಲಿ ಸಂದೇಹವಿಲ್ಲ ಎಂದು ಒತ್ತಿ ನುಡಿದಿದ್ದಾರೆ. ಇಂದಿರಾಗಾಂಧಿ, ಮೇನಕಾಗಾಂಧಿ, ಸೋನಿಯಾಗಾಂಧಿ ಸಮಾಜಸೇವಾ ಕಾರ್ಯಕರ್ತೆ ಇಳಾಭಟ್, ಮಾಯಾವತಿ, ಸುಷ್ಮಾಸ್ವರಾಜ್ ಇತ್ಯಾದಿ ಮಹಿಳೆಯರು ಯಶಸ್ವಿ ರಾಜಕಾರಣದ ಮಹಿಳೆಯರ ಪ್ರತಿಬಿಂಬವಾಗಿರುವುದು ಕಾಣಬಹುದಾಗಿದೆ.

ಗಾಂಧಿಜೀಯವರು ತಮ್ಮ ಗ್ರಾಮ ಸ್ವರಾಜ್ ಕಲ್ಪನೆಯಲ್ಲಿ ಸಮವಾಗಿ ಸ್ತ್ರೀ, ಪುರುಷರಿಬ್ಬರಿಗೂ ಪ್ರಾತಿನಿಧ್ಯವಿರಬೇಕೆಂದು ಒತ್ತಿ ಹೇಳಿದ್ದರು. ಅದೇ ರೀತಿ ರಾಜಕಾರಣದಲ್ಲಿ ಉತ್ತಮವಾಗಿ ದುಡಿದು ಯಶಸ್ವಿಯಾದಂತಹ ಮೇನಕಾಗಾಂಧಿ, ಮಾರ್ಗರೇಟ್ ಆಳ್ವ ಇತ್ಯಾದಿ ಸೃಜನಶೀಲರಾಗಿ ರಾಜಕಾರಣವನ್ನು ನಡೆಸಿದಂತವರಾಗಿದ್ದಾರೆ.

ಕಾಲ್‌ಸೆಂಟರ್‌ನಲ್ಲಿ ದುಡಿಯುವ ಮಹಿಳೆಯರು: "ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಂದ ಇಂದು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ, ನಾನಾ ರೀತಿಯ ಗ್ರಾಹಕ ಸೇವೆಗಳ ಕೆಲಸಗಳು ವರ್ಗಾವಣೆಯಾಗಿದೆ. ಇಲ್ಲಿ ವಿವಿಧ ರಾಷ್ಟ್ರಗಳ ಗ್ರಾಹಕರ ವಿಚಾರಣೆಗೆ ಉತ್ತರಗಳನ್ನು ನೀಡಲಾಗುತ್ತದೆ. ಕಡಿಮೆ ಕೂಲಿ ಇರುವ ರಾಷ್ಟ್ರಗಳಿಗೆ ಈ ಕಾಲ್‌ಸೆಂಟರ್‌ಗಳು ಕೇಂದ್ರೀಕೃತವಾಗುತ್ತಿವೆ."೬ ಈ ಕಾಲ್‌ಸೆಂಟರ್‌ಗಳು ಹೆಚ್ಚಾಗಿ ಮಹಿಳೆಯರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುತ್ತವೆ. ಇವು ಬೇರೆ ಬೇರೆ ರಾಷ್ಟ್ರಗಳಲ್ಲಿ ಬೇರೆ ಬೇರೆ ರೀತಿಯ ಉದ್ಯೋಗಗಳಿಗೆ ಸೀಮಿತವಾಗಿದೆ. ಉದಾ:- ಮಲೇಷಿಯಾದ ಕಾಲ್‌ಸೆಂಟರ್‌ಗಳಲ್ಲಿ ಹಣಕಾಸು, ಬ್ಯಾಂಕಿಂಗ್ ಮತ್ತು ಏರ್‌ಲೈನ್ಸ್ ಕಂಪನಿಗಳಿಗೆ ಕೇಂದ್ರೀಕೃತವಾಗಿದ್ದರೆ, ಭಾರತದಲ್ಲಿ ಇವು ಬ್ರಿಟಿಷ್ ಏರ್‌ವೇಸ್, ಅಥವಾ ಅಮೇರಿಕದ ಎಕ್ಸ್‌ಪ್ರೆಸ್ ಮುಂತಾದ ಬಹುರಾಷ್ಟ್ರೀಯ ಕಂಪನಿಗಳ ಸೇವೆಗೆ ಕೇಂದ್ರೀಕೃತವಾಗಿದೆ. ಎರಡೂ ರಾಷ್ಟ್ರಗಳಲ್ಲಿನ ಕಾಲ್‌ಸೆಂಟರ್‌ಗಳಲ್ಲಿ ಶೇಕಡ ೪೦ ರಿಂದ ೭೦ ರಷ್ಟು ಮಹಿಳಾ ಉದ್ಯೋಗಿಗಳಿದ್ದು ಅವರು ಕಷ್ಟಪರ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಮಹಿಳೆಯರು ೨೦-೨೫ ವರ್ಷಗಳ ವಯಸ್ಸಿನವರಾಗಿರುವುದು ಸಹ ವಿಶೇಷ. ಇದರಿಂದ ಮಹಿಳೆಯರಿಗೆ ಉದ್ಯೋಗಾವಕಾಶಗಳು ಹೆಚ್ಚುವ ಸಾಧ್ಯತೆಗಳು ಹೆಚ್ಚು. ಈ ಕಾಲ್‌ಸೆಂಟರ್‌ಗಳಲ್ಲಿ ಮಹಿಳೆಯರಿಗೆ, ಭಾರತದ ಸರಾಸರಿ ಕೂಲಿಗಿಂತ ನಾಲ್ಕು ಪಟ್ಟು ಹೆಚ್ಚು ಕೂಲಿ ದೊರೆಯುತ್ತದೆ.

24 ಗಂಟೆ ಕೆಲಸ ಮಾಡುವ ಈ ಕಾಲ್‌ಸೆಂಟರ್‌ಗಳಲ್ಲಿ ಮಹಿಳೆಯರು ಷಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಾರೆ. ಇದು ಅತ್ಯಧಿಕ ಶ್ರಮವನ್ನು ಬೇಡುವ ಕೆಲಸ ಎನ್ನುವುದು ಸ್ಪಷ್ಟ.

ಕಾಲ್‌ಸೆಂಟರ್‌ಗಳಲ್ಲಿ ದುಡಿಯುವ ಮಹಿಳೆಯರು ಕೆಲವೊಂದು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇವರು ರಾತ್ರಿಯ ಪಾಳಿಯಲ್ಲಿ ಕೆಲಸ ಮಾಡುವುದರಿಂದ ಲೈಂಗಿಕ ಶೋಷಣೆಯನ್ನು ಎದುರಿಸಬೇಕಾಗುತ್ತದೆ. ಗ್ರಾಹಕರ ಬಿರುನುಡಿಗಳಿಗೆ ತುತ್ತಾಗಬೇಕಾಗುತ್ತದೆ. ರಾತ್ರಿ ವೇಳೆ ಕೆಲಸ ಮಾಡಬೇಕಾಗಿರುವುದರಿಂದ ಕೆಲಸ ಅಭದ್ರತೆ ಸಹ ಅವರನ್ನು ಕಾಡುತ್ತಿರುತ್ತದೆ. ಇವರೆಲ್ಲ ಒಂದು ರೀತಿಯಲ್ಲಿ ಪರೋಕ್ಷವಾಗಿ ಅಸಂಘಟಿತ ವಲಯಕ್ಕೆ ಸೇರುವವರೇ.

ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸೇವಾಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು:- ಇಂಗ್ಲೀಷ್ ಜ್ಞಾನವಿರುವ, ಹೆಚ್ಚಾಗಿ ಪಟ್ಟಣದಲ್ಲಿ ಕೇಂದ್ರೀಕೃತವಾಗಿರುವ ಮಹಿಳೆಯರು, ಡಿಜಿಟಲ್ ವ್ಯವಸ್ಥೆಯಲ್ಲಿ, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಒಟ್ಟು ಉದ್ಯೋಗದಲ್ಲಿ ಶೇ.೨೦ ರಷ್ಟು ಮಾತ್ರ ಮಹಿಳೆಯರು ದುಡಿಯುತ್ತಿದ್ದಾರೆ ಎಂಬುದು ಗಮನಿಸಬೇಕಾದ ವಿಷಯ. ಇಲ್ಲೂ ಸಹ ಉನ್ನತ ಹುದ್ದೆಗಳು ಪುರುಷರಿಗೇ ಮೀಸಲು. ಈ ಕ್ಷೇತ್ರದ ಹುದ್ದೆಗಳಲ್ಲಿ ಸಹ ಕೆಳಗಿನ ಹುದ್ದೆಗಳಲ್ಲಿ ಮಹಿಳೆಯರು ಹೆಚ್ಚಾಗಿದ್ದಾರೆ. ಮತ್ತೊಂದು ಮುಖ್ಯ ಅಂಶವೆಂದರೆ, ಸಾಫ್ಟ್‌ವೇರ ಹುದ್ದೆಗಳಲ್ಲಿ ಸಮಯಕ್ಕೆ ಸರಿಯಾಗಿ ಪ್ರಾಜೆಕ್ಟ್ ಕೆಲಸಗಳನ್ನು ಮುಗಿಸಬೇಕಾಗಿರುವುದರಿಂದ, ಮಹಿಳಾ ಉದ್ಯಮಿಗಳಿಗೆ ಒತ್ತಡ ಹೆಚ್ಚಾಗಿರುತ್ತದೆ. ಒಂದು ಕಡೆ ಸಂಸಾರದ ಜವಾಬ್ದಾರಿ, ಮತ್ತೊಂದು ಕಡೆ ಕೆಲಸದ ಒತ್ತಡ. ಇವು ಮಹಿಳಾ ಉದ್ಯೋಗಿಗಳನ್ನು ಸತತವಾಗಿ ಕಾಡುತ್ತವೆ. ಅನೇಕ ಸಂದರ್ಭಗಳಲ್ಲಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿರುವ ನಿದರ್ಶನಗಳೂ ಇವೆ. ಹಾಗೆಯೇ ಮಾಹಿತಿ ತಂತ್ರಜ್ಞಾನದಲ್ಲಿ ದುಡಿಯುವ ಮಹಿಳೆಯ ಸ್ಥಳಗಳು ಗ್ರಾಹಕರ ಕಾಲ್‌ಸೆಂಟರ್‌ಗಳು, ಹೋಟೆಲ್ ಮತ್ತು ಕಾರ್ ರಿಸರ್ವೇಷನ್‌ಗಳು, ವಿಮಾ ಬೇಡಿಕೆ ಮುಂತಾದವುಗಳ ಪರಿಶೀಲನೆ, ಸೆಕ್ರೆಟರಿ ಕೆಲಸಗಳು, ಕಾಲ್‌ಸೆಂಟರ್‌ನಲ್ಲಿ ಲೆಕ್ಕಗಳ ವಿವರ ನೀಡಿಕೆ, ಸರಕು ಸೇವೆಗಳ ಮಾರಾಟದ ನಂತರ ವಿವರಣೆ ನೀಡಿಕೆ. ಮತ್ತೊಂದೆಡೆಗಳಲ್ಲಿ ಅಕೌಂಟಿಂಗ್, ಬುಕ್ ಕೀಪಿಂಗ್, ಎಲೆಕ್ಟ್ರಾನಿಕ್ ಪ್ರಕಾಶನ, ವೆಬ್‌ಸೈಟ್ ಡಿಸೈನಿಂಗ್, ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್, ಲೀಗಲ್ ಟ್ರಾನ್ಸ್‌ಕ್ರಿಪ್ಷನ್, ಮೆಡಿಕಲ್ ರಿಕಾರ್ಡ್‌ಗಳ ನಿರ್ವಹಣೆ, ಸಂಶೋಧನೆ ಮತ್ತು ತಾಂತ್ರಿಕ ಬರವಣಿಗೆಗಳು ಇತ್ಯಾದಿ. ಈ ಕೆಲಸಗಳಲ್ಲಿ ಇಂದಿಗೂ ಪುರುಷರೇ ಹೆಚ್ಚಾಗಿದ್ದಾರೆ. ಮಹಿಳಾ ಉದ್ಯೋಗಸ್ಥರು ಅತ್ಯಲ್ಪವಾದರೂ ಈ ಕ್ಷೇತ್ರದಲ್ಲೂ ಮಹಿಳೆ ಯಶಸ್ಸು ಹೊಂದುತ್ತಿದ್ದಾಳೆ.

ಹೀಗೆ ಕೆಲವೊಂದು ವಲಯಗಳಲ್ಲಿ ದುಡಿಯುವ ಮಹಿಳೆಯರ ಬಗ್ಗೆ ಹೇಳಿದ್ದು ಇನ್ನು ಮಹಿಳೆ ಸಮಾಜದ ಹಲವಾರು ಕ್ಷೇತ್ರಗಳಲ್ಲಿ ದುಡಿಯುತ್ತಿರುವುದು ನೋಡಿದ್ದೇವೆ. ಬಸ್ ಕಂಡಕ್ಟರ್ ಆಗಿ, ಚಾಲಕಿಯಾಗಿ, ವೈದ್ಯಳಾಗಿ ಎಂಜಿನಿಯರ್ ಆಗಿ, ವಿಮಾನ ಚಾಲಕಿಯಾಗಿ, ಲಾಯರ್ ಆಗಿ, ಜಡ್ಜ್ ಆಗಿ, ಮಕ್ಕಳನ್ನು ನೋಡಿಕೊಳ್ಳುವ ಆಯಾಗಳಾಗಿ, ಸಾರ್ವಜನಿಕ ಶೌಚಾಲಯಗಳಲ್ಲಿ ಸ್ವಚ್ಛತೆಯನ್ನು ಮಾಡುವ ದುಡಿಮೆಗಾರಳಾಗಿ ಮೇಲ್ವರ್ಗದಿಂದ ಕೆಳವರ್ಗದ ತನಕ ಮಹಿಳೆಯರು ದಿನನಿತ್ಯ ದುಡಿಮೆಗಾರಳಾಗಿ ಸಮಾಜಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

1) ಮಹಿಳೆ ದುಡಿಮೆ ಮತ್ತು ಬಿಡುವು: ಡಾ. ದೇವಕಿಜೈನ್, ಪು.ಸಂ.೧೫೪

ಸಂಪಾದಕರು ಡಾ. ಎಚ್.ಎಸ್. ಶ್ರೀಮತಿ

ಡಾ. ಎಸ್.ಶಿವಾನಂದ ವಿರಕ್ತ ಮಠ

ಡಾ. ಜೆ.ಕೃಷ್ಣ

೨) ಮಹಿಳೆ:- ಬಿಡುಗಡೆಯ ಹಾದಿಯಲ್ಲಿ - ಎನ್ ಗಾಯಿತ್ರಿ ಪುಟ ಸಂಖ್ಯೆ ೧೪೬

೩) ಮಹಿಳೆ : ಬಿಡುಗಡೆಯ ಹಾದಿಯಲ್ಲಿ ಎನ್. ಗಾಯಿತ್ರಿ- ೧೯೯೬ ಪು.ಸಂ. ೧೪೧

೪) ಮಹಿಳಾ ಅಧ್ಯಯನ : ಡಾ.ಎಚ್.ಎಸ್.ಶ್ರೀಮತಿ-೨೦೦೧ ಪುಟ ಸಂಖ್ಯೆ ೬೯

೫) ಮಹಿಳಾ ಅಧ್ಯಯನ : ಡಾ. ಎಚ್. ಎಸ್. ಶ್ರೀಮತಿ ೨೦೦೧ ಪುಟ ಸಂಖ್ಯೆ-೮೩

೬) ಮಹಿಳೆ ಮತ್ತು ಅಭಿವೃದ್ಧಿ-ಡಾ.ಸಿ.ಕೆ.ರೇಣುಕಾಚಾರ್ಯ ಪುಟ ಸಂಖ್ಯೆ: ೦೮.

ಅಧ್ಯಾಯ-೪

ದುಡಿಯುವ ಮಹಿಳೆಯ ಸಮಸ್ಯೆಗಳು

ದುಡಿಯದೇ ಇರುವ ಮಹಿಳೆ ಪ್ರಾಯಶ: ಇರಲಾರಳು. ಮಹಿಳೆ ಮತ್ತು ದುಡಿಮೆ ಪರ್ಯಾಯ ಪದಗಳೇನೋ ಅನ್ನುವಷ್ಟು ಮಟ್ಟಿಗೆ ಹೆಣ್ಣಿನ ಜೀವನದಲ್ಲಿ ದುಡಿಮೆ ಬೆಸೆದುಕೊಂಡಿದೆ. ಸಮಾಜದಲ್ಲಿ ಗಂಡು-ಹೆಣ್ಣು ಇಬ್ಬರೂ ಅನೇಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಸಾಧಾರಣವಾಗಿ ಕೆಲಸಗಳನ್ನು ಉತ್ಪಾದನೆ, ಪುನರುತ್ಪಾನೆ ಮತ್ತು ಸಾಮೂಹಿಕ ಕಾರ್ಯ ಎಂದು ವಿಂಗಡಿಸಲಾಗುತ್ತದೆ. ಲಿಂಗಾಧಾರಿತ ಶ್ರಮ ವಿಭಜನೆಯಿಂದಾಗಿ ಸ್ತ್ರೀ ಪುರುಷರು ಮಾಡುವ ಕೆಲಸಗಳ ವ್ಯಾಖ್ಯೆಯೂ ಬದಲಾಗುತ್ತದೆ.

1. **ಕೌಟುಂಬಿಕ ಜವಾಬ್ದಾರಿ ಮತ್ತು ಕಚೇರಿ ಕೆಲಸ**:- ಇಬ್ಬಗೆಯ ಜವಾಬ್ದಾರಿಗಳಲ್ಲಿ ಎದುರಿಸುವ ಸಮಸ್ಯೆಗಳು ಬಹು ಕಾಲದಿಂದಲೂ ಮಹಿಳೆ ಮನೆಯ ಒಳಗಿನ ಜವಾಬ್ದಾರಿಯನ್ನು ನಿಭಾಯಿಸುತ್ತಲೇ ಬಂದಿದ್ದಾಳೆ. ಮನೆಯ ಹಿರಿಯರ ಸೇವೆ, ಮಕ್ಕಳ ಪಾಲನೆ, ಅತಿಥಿಗಳ ಆತಿಥ್ಯ, ರೋಗಿಗಳ ಶುಶ್ರೂಷೆ ಗಂಡನ ಹಾರೈಕೆ ಇವೆಲ್ಲವೂ ಅವಳ ಪಾಲಿಗೆ ಮಾಡಲೇಬೇಕಾದ ಕರ್ತವ್ಯಗಳು. ಇವುಗಳಲ್ಲಿ ತುಸು ವ್ಯತ್ಯಯವಾಗಕೂಡದೆಂದು ನಿರೀಕ್ಷಿಸಲಾಗುತ್ತಿತ್ತು. ಅವಿಭಕ್ತ ಕುಟುಂಬಗಳಲ್ಲಿ ನಾಲ್ಕಾರು ಮಹಿಳೆಯರಿರುತ್ತಿದ್ದುದರಿಂದ, ಕುಟುಂಬ ಒಳಗಿನ ಕೆಲಸಗಳು ಸಾಂಗೋಪಾಂಗವಾಗಿ ನಡೆಯುತ್ತಿದ್ದವು. ಬಸಿರು, ಬಾಣಂತನ, ಹಬ್ಬ-ಹರಿದಿನ, ಮಡಿ-ಮೈಲಿಗೆಗಳೆಂದು ಆಗಲೂ ಸಾಕಷ್ಟು ಪರದಾಡುವಂತಾದರೂ ಕೈ ಜೋಡಿಸಲು ಜೊತೆಯಲ್ಲಿರುತ್ತಿದ್ದರು. ಕುಟುಂಬ ಚಿಕ್ಕದಾಗುತ್ತಾ ಬಂದಂತೆಲ್ಲ ಇವನ್ನು ನಿಭಾಯಿಸಲು ಮಹಿಳೆ ಸಾಕಷ್ಟು ತಿಣುಕಾಡಬೇಕಾಯಿತು. ಹೊರಗಿನ ದುಡಿಮೆಗೆ ಆಕೆ ಕಾಲಿಟ್ಟ ಮೇಲಂತೂ ಎರಡೂ ಕಡೆಗೆ ಸಮಯವನ್ನು ಹೊಂದಿಸಿಕೊಳ್ಳಲು ಕಷ್ಟವಾಗುತ್ತಿದ್ದು, ವಿವಾಹಿತ ಮಹಿಳೆಗೆ ಈ ಇಂಥ ಹೊಂದಾಣಿಕೆ ಭಾರವಾಗುತ್ತಿದೆ. ಉದ್ಯೋಗಸ್ಥೆಯಾಗಿಯೂ ಮಹಿಳೆ ಸುಖಿಯೇ? ಇದರಿಂದ ಅವಳ ಸ್ಥಾನಮಾನ ಹೆಚ್ಚಿದೆಯೇ? ಉದ್ಯೋಗಸ್ಥ ಮಹಿಳೆಯರು ಗೃಹಿಣಿಯರಿಗಿಂತ ಉತ್ತಮ ಜೀವನವನ್ನು ಮಾನಸಿಕ ನೆಮ್ಮದಿಯನ್ನು ಪಡೆದಿದ್ದಾರೆಯೇ? ಎಂಬ ಪ್ರಶ್ನೆಗಳಿಗೆ ಬಹುಪಾಲು ದೊರೆಯುವ ಉತ್ತರ `ಇಲ್ಲ' ಎಂದೇ. ಉದ್ಯೋಗಸ್ಥ ಮಹಿಳೆಯರು ವೃತ್ತಿ-ಸಂಸಾರಗಳ ನಡುವೆ ಹೈರಾಣಾಗಿದ್ದಾರೆ.

ಮಹಿಳೆಯರಿಗೆ ಮನೆಯ ಹೊರಗೆ ದುಡಿಯುವುದು, ನೌಕರಿ ಮಾಡುವುದು ಅನಿವಾರ್ಯವಾಗಿದೆ. ಇಬ್ಬಗೆಯ ದುಡಿಮೆ ಒತ್ತಡಗಳನ್ನು, ಇಬ್ಬಗೆಯ ಹೊಣೆಗಾರಿಕೆಯನ್ನು

ನಿರ್ವಹಿಸಬೇಕಾಗಿದೆ. ಇದರಿಂದಾಗಿ ಅವಳು ಅನೇಕ ಮಾನಸಿಕ ಹಾಗೂ ದೈಹಿಕ ಒತ್ತಡಗಳಿಗೆ ಒಳಗಾಗಿದ್ದಾಳೆ. ಎರಡಕ್ಕೂ ನ್ಯಾಯ ಒದಗಿಸಲಾಗದೆ. ಮಾನಸಿಕ ಕ್ಲೇಶಕ್ಕೆ ಅವಳು ಒಳಗಾಗಿದ್ದಾಳೆ. ಕುಟುಂಬದ ಹಿತವನ್ನು ಕಾಪಾಡುವ ಸಲುವಾಗಿ ಮತ್ತು ಆದರ್ಶ ಗೃಹಿಣಿಯೆಂಬ, ಆದರ್ಶ ತಾಯಿಯೆಂಬ ಕೀರ್ತಿಗೆ ಪಾತ್ರವಾಗುವ ಸಲುವಾಗಿ ಮಹಿಳೆಯರು ಎರಡೂ ಜವಾಬ್ದಾರಿಗಳನ್ನು ನಿರ್ವಹಿಸುವ ಹೊಣೆ ಹೊತ್ತಿದ್ದಾರೆ. ಇದರಿಂದ ದೈಹಿಕವಾಗಿಯೂ ಅವಳು ಜರ್ಜರಿತಳಾಗಿದ್ದಾಳೆ.

2. ಹಣದ ಅವಶ್ಯಕತೆ, ಆರ್ಥಿಕ ಸ್ವಾತಂತ್ರ್ಯವಿಲ್ಲ:- ಮನೆಯ ಹೊರಗೆ ದುಡಿಯುವ ಹೆಣ್ಣು ಕುಟುಂಬದ ಪುರುಷ ಸದಸ್ಯರಿಗೆ ಸಮನಾದ ಗಳಿಕೆಯನ್ನು ತಂದರೂ ಸಹ ಅದು ಕೇವಲ ಕುಟುಂಬದ ಪೂರಕ ವರಮಾನ ಮತ್ತು ದುಡಿಮೆಗಾರ ಮಹಿಳೆಯು ಅಪ್ರಧಾನಗಳಿಕೆದಾರಳು. ಏಕೆಂದರೆ ಸಮಾಜವು ವರಮಾನವನ್ನು ವ್ಯಯಿಸುವ ಅಧಿಕಾರವನ್ನು ಮಹಿಳೆಗೆ ನೀಡಲು ಸಿದ್ಧವಿಲ್ಲ. ಕುಟುಂಬಕ್ಕೆ ವರಮಾನವನ್ನು ಮಹಿಳೆಯರು ದುಡಿದು ಸೇರಿಸಿದರೂ ಅದರ ವಿನಿಯೋಜನೆ ಮೇಲೆ ಅವರಿಗೆ ಪ್ರಧಾನ ಹಕ್ಕಿರುವುದಿಲ್ಲ. ಆಕೆಯ ಮನೆಯ ಒಳಗಿನ ದುಡಿಮೆಯನ್ನು ಸಮಾಜವು ಪರಿಮಾಣಾತ್ಮಕವಾಗಿ ಗಣನೆ ಮಾಡುತ್ತಿಲ್ಲ. ಆದ್ದರಿಂದ ದುಡಿಮೆಗಾರ ಮಹಿಳೆಯು ಮೊದಲನೆಯದಾಗಿ ಅಪ್ರಧಾನ ಗಳಿಕೆದಾರಳು, ಎರಡನೆಯದಾಗಿ ಅವಳ ದುಡಿಮೆಯು ಕುಟುಂಬದ ಪೂರಕ ವರಮಾನವೇ ವಿನಾ ಪ್ರಧಾನ ವರಮಾನವಲ್ಲ.

3. ದುಡಿಮೆಯ ಅವಧಿ ಹೆಚ್ಚು:- ಸ್ವಯಂ ಉದ್ಯೋಗಿ ಮಹಿಳಾ ದುಡಿಮೆಗಾರರನ್ನು ಕುರಿತಂತೆ ಅಧ್ಯಯನ ಮಾಡಲು "ಕೇಂದ್ರ ಸರ್ಕಾರವು ನೇಮಿಸಿದ್ದ ರಾಷ್ಟ್ರೀಯ ಆಯೋಗ ಸಿದ್ಧಪಡಿಸಿದ ವರದಿ ಶ್ರಮಶಕ್ತಿಯನ್ನು ಉಲ್ಲೇಖಿಸಿರುವಂತೆ ಮಹಿಳಾ ದುಡಿಮೆಗಾರರಲ್ಲಿ ಶೇಕಡ ೯೪ ಮಂದಿ ಅಸಂಘಟಿತ ವಲಯದಲ್ಲಿದ್ದಾರೆ."೧ ಈ ಸಂಘಟಿತ ವಲಯದಲ್ಲಿ ಅನೇಕ ಬಗೆಯ ಚಟುವಟಿಕೆಗಳಿದ್ದು ಕೃಷಿಯಿಂದ ಹಿಡಿದು ದಿನಕೂಲಿ ಕಾರ್ಮಿಕರತನಕ ಈ ವಲಯದಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ.

"ಕಾರ್ಖಾನೆಗಳಲ್ಲಿ ೧೧ ಗಂಟೆಗಳ ಕಾಲ ದುಡಿಯುವವರ ಪ್ರಮಾಣ ಶೇಕಡ ೫೨ ರಷ್ಟು ಅನಂತರ ೧೦ ಮತ್ತು ೯ ಗಂಟೆಗಳ ಕಾಲ ದುಡಿಯುವವರ ಪ್ರಮಾಣ ಕ್ರಮವಾಗಿ ಶೇಕಡ ೩೬.೫೦." ೨ ಅಂದರೆ ಹೆಚ್ಚು ಗಂಟೆಗಳ ಕಾಲ ದುಡಿಸಿಕೊಳ್ಳುವುದು ಹಾಗೂ ಕಡಿಮೆ ಕೂಲಿ ಕೊಡುವುದರವಿರುದ್ಧವಾಗಿ ಕೈಗಾರಿಕಾ ಕ್ರಾಂತಿಗಳು 8 ಗಂಟೆಗಳ ಕಾಲ ದುಡಿಮೆಯ ವೇಳೆಯನ್ನು ನಿಗದಿಪಡಿಸಿತು. ಆದರೆ, ಮಾಲೀಕರು ಈ ಕಾಯ್ದೆಯನ್ನು ಗಾಳಿಗೆ ತೂರಿದ್ದಾರೆ.

ಹೀಗಾಗಿ, ಕಾರ್ಖಾನೆಗಳಲ್ಲಿ ೮-೧೧ ಗಂಟೆಗಳ ಶ್ರಮದೊಂದಿಗೆ ಮನೆಗೆಲಸ ಅಥವಾ ಗೃಹಕೃತ್ಯದ ದುಡಿಮೆಯ ವೇಳೆ ಯಾವ ಪ್ರಮಾಣದಲ್ಲಿದೆ ಎಂಬ ಅಂಶ ತಿಳಿದುಕೊಳ್ಳಬಹುದಾಗಿದೆ.

4. ದುಡಿಯುವ ಹೆಣ್ಣು ಮಗಳು ಶಿಕ್ಷಣದಿಂದ ವಂಚಿತಳಾಗುವುದು: ಭಾರತೀಯ ಕುಟುಂಬ ಪದ್ಧತಿಯಲ್ಲಿ ಹೆಣ್ಣು ಮಗು ತನ್ನ ಕಾಲ ಮೇಲೆ ತಾನು ಓಡಾಡಲಾರಂಭಿಸುವುದೇ ತಡ, ಅವಳ ಕಂಕುಳಿಗೆ ಮುಂದಿನ ಮಗು ಬರುತ್ತದೆ. ಆ ಹೆಣ್ಣು ತನ್ನ ತಂದೆ-ತಾಯಿಗಳಿಬ್ಬರೂ ದುಡಿಯಲು ಹೊರಗೆ ಹೋಗುವಾಗ ಮನೆಗೆಲಸದ ಜವಾಬ್ದಾರಿ, ತಮ್ಮ-ತಂಗಿಯರ ಆರೈಕೆ ಮಾಡುವವಳಾಗಿ ಅನೇಕ ಸೌಲಭ್ಯಗಳಿಂದ ವಂಚಿತಳಾಗುತ್ತಾಳೆ.

ಮಕ್ಕಳು ಶಾಲೆಗೆ ಹೋಗಬೇಕಾದ ವಯಸ್ಸಿನಲ್ಲಿ ಕೂಲಿ ಕೆಲಸಕ್ಕೆ, ಕುಟುಂಬದ ಕಾರ್ಯಗಳಲ್ಲಿ ನಿರತರಾಗುವುದರಿಂದ ಭಾರತದಲ್ಲಿ ಲಕ್ಷಾಂತರ ಹೆಣ್ಣು ಮಕ್ಕಳು ಮೂಲಭೂತ ಶಿಕ್ಷಣದಿಂದ ವಂಚಿತರಾಗಿ ದುಡಿಯುತ್ತಿದ್ದಾರೆ. ಇದರ ಜೊತೆಗೆ ಅವರಿಗೆ ಯಾವುದೇ ರೀತಿಯ ತರಬೇತಿ, ಕುಶಲತೆಗೆ ಅವಕಾಶವಿಲ್ಲವಾಗಿದೆ. ಈ ಎಲ್ಲ ಅಂಶಗಳ ಜೊತೆಗೆ ಅವರು ಬೇಗ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಚಿಕ್ಕ ವಯಸ್ಸಿನಲ್ಲಿ ತಮ್ಮ ಸಾಮರ್ಥ್ಯಕ್ಕೆ ಮೀರಿದ ಕೆಲಸಗಳು, ಜವಾಬ್ದಾರಿಗಳನ್ನು ನಿಭಾಯಿಸುವುದರಿಂದ ಈ ಮೇಲೆ ತಿಳಿಸಿದ ಕೆಲವು ಸಮಸ್ಯೆಗಳಿಂದ ಜೀವನ ಪರ್ಯಂತ ನರಳಬೇಕಾಗುವ ಸಂಭವವೇ ಹೆಚ್ಚಾಗಿರುತ್ತದೆ.

5. ಕೌಟುಂಬಿಕ ವಿಘಟನೆಯಾಗುವ ಸಾಧ್ಯತೆ: ದುಡಿಯುವ ಹೆಂಡತಿ, ತನಗೆ ಪ್ರತಿಸ್ಪರ್ಧಿ ಎಂದು ಗಂಡ ತಿಳಿದರೆ, ಹೆಂಡತಿ ಈ ಸ್ಪರ್ಧೆಯಲ್ಲಿ ಮುನ್ನಡೆಯುತ್ತಾಳೆ. ತನಗೆ ಹಿನ್ನಡೆ ಇದೆ ಎಂದು ತಿಳಿದ ಆತ, ಮತ್ಸರ, ಕೀಳರಿಮೆಗಳಿಗೆ ತುತ್ತಾದರೆ, ಹೆಂಡತಿಯೊಂದಿಗೆ ಅಧಿಕಾರ ಸವಲತ್ತುಗಳನ್ನು ಹಂಚಿಕೊಳ್ಳಲು ಆತನಿಗೆ ಇಷ್ಟವಿಲ್ಲವಾದರೆ, ದುಡಿಯುವ ಹೆಂಡತಿಯ ಮೇಲೆ ಆತ ಅನುಮಾನಪಟ್ಟರೆ, ಸಮಸ್ಯೆಗಳ ಹುತ್ತವೇ ರೂಪುಗೊಳ್ಳುತ್ತದೆ. ಗಂಡ-ಹೆಂಡಿರ ನಡುವೆ ವಿರಸದ ಕಂದಕವೇರ್ಪಡುತ್ತದೆ. ಗಂಡನ ಜೊತೆಗೆ, ಅತ್ತೆ-ಮಾವ, ನೆರೆ-ಹೊರೆ, ಸಹೋದ್ಯೋಗಿಗಳು ಸೇರಿಕೊಂಡರೆ ಅವಳ ಬಾಳು ನರಕ ಸದೃಶವಾಗುತ್ತದೆ.

6. ಲೈಂಗಿಕ ಕಿರುಕುಳ-ಶೋಷಣೆ: ಚಿಕ್ಕ ವಯಸ್ಸಿನ ಚಂದದ ಹೆಣ್ಣು ಹೊರಬಂದು ದುಡಿಯುತ್ತಾಳೆಂದರೆ ಅವಳ ಮೇಲೆ ಹಲವಾರು ಜನರ ಕಣ್ಣು ಬೀಳುತ್ತದೆ. ಪರೋಕ್ಷವಾಗಿ, ಅಪರೋಕ್ಷವಾಗಿ ಲೈಂಗಿಕ ಕಿರುಕುಳ ಮತ್ತು ಶೋಷಣೆಗೆ ಅವಳು ಸಿಕ್ಕಿಹಾಕಿಕೊಳ್ಳುತ್ತಾಳೆ. ಮುಜುಗರವನ್ನುಂಟುಮಾಡುವ ದೃಷ್ಟಿ, ಮಾತು, ವರ್ತನೆಗಳಿಂದ ಹಿಡಿದು, ಲೈಂಗಿಕ ಅತ್ಯಾಚಾರದವರೆಗೆ, ಆಕೆ ಅನೇಕ ತೊಂದರೆಗಳನ್ನು ಎದುರಿಸಬೇಕಾಗಬಹುದು.

7. ಸಂಚಾರಿ ಸಂಬಂದಿ ಸಮಸ್ಯೆಗಳು: ಉದ್ಯೋಗ ನಿಮಿತ್ತ ಮಹಿಳೆಯರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಓಡಾಡಬೇಕಾದರೆ ಹೊಸಸ್ಥಳ ಹೊಸಜನ, ಹೊಸ ಪರಿಸರದೊಂದಿಗೆ ವ್ಯವಹರಿಸಬೇಕಾದರೆ, ವಿಶೇಷ ತೊಂದರೆ, ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಗಂಡ-ಮಕ್ಕಳನ್ನು ಬಿಟ್ಟು ಬರುವಂತಹ ಪರಿಸ್ಥಿತಿ, ಕುಟುಂಬವರ್ಗದವರು, ಬಂಧು-ಬಳಗದವರನ್ನು ಬಿಟ್ಟು ಮಾನಸಿಕ ಚಿಂತೆಯೊಂದಿಗಿನ ದುಡಿಮೆಯ ಕರ್ತವ್ಯವನ್ನು ನಿಭಾಯಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಪ್ರೌಢ ಮಹಿಳೆ ಒಂಟಿಯಾಗಿ ಓಡಾಡಲು, ಪ್ರಯಾಣ ಮಾಡಲು ಅಥವಾ ಹೊಸಬರೊಂದಿಗೆ ಮಾತಾಡಲು ಕಷ್ಟವೇ. ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುವುದು, ಜನಸಂದಣಿ ಇಲ್ಲದ ಪ್ರದೇಶಗಳಲ್ಲಿ ಪ್ರಯಾಣಿಸುವುದು ಯಾವುದೇ ಸ್ತ್ರೀಗೆ ಕಷ್ಟ ಕಿರಿಕಿರಿ ಉಂಟುಮಾಡುತ್ತದೆ.

8) ಉಳಿತಾಯ ಸಮಸ್ಯೆ: ಮಹಿಳೆಯರ ಕಲ್ಯಾಣಕ್ಕಾಗಿ, ಅಭ್ಯುದಯಕ್ಕಾಗಿ, ಹಿತದೃಷ್ಟಿಯಿಂದ 'ಉಳಿತಾಯ ಯೋಜನೆ' ಬಹಳ ಮುಖ್ಯ ಆದರೆ, ನಾವು ಈ ಹಿಂದೆ ತಿಳಿದುಕೊಂಡ ಪ್ರಕಾರ ಬಹುಸಂಖ್ಯಾತ ಮಹಿಳಾ ಕಾರ್ಮಿಕರು ಸಾಲದಲ್ಲಿ ಹುಟ್ಟಿ ಸಾಲದಲ್ಲಿಯೇ ಸಾವನ್ನಪ್ಪುವ ಪರಿಸ್ಥಿತಿಯಲ್ಲಿ ಇರುವಾಗ ಉಳಿತಾಯದ ಮಾತೆಲ್ಲಿ ಬಂತು? ಆದರೆ, ಕೇಂದ್ರ ರಾಜ್ಯ ಸರ್ಕಾರಗಳು ಮಹಿಳೆಯರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಅವುಗಳಲ್ಲಿ ಸ್ತ್ರೀಶಕ್ತಿ ಸ್ವ ಸಹಾಯಸಂಘ , ಮಹಿಳಾ ಅಭಿವೃದ್ಧಿ ಯೋಜನೆಗಳು ಹೀಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿವೆ. ಆದರೆ, ಇವುಗಳ ಜ್ಞಾನ ಎಷ್ಟರಮಟ್ಟಿಗೆ ಈ ವರ್ಗದ ಜನತೆಗೆ ತಿಳಿದಿದೆ? ಎಂಬುದು ಇನ್ನೊಂದು ಸಮಸ್ಯೆ.

9. ಶಿಶುಪಾಲನಾ ಸಮಸ್ಯೆ: ಮಕ್ಕಳು ಒಂದು ರಾಷ್ಟ್ರದ ಅಮೂಲ್ಯ ಸಂಪತ್ತು. ಶಿಶುಪಾಲನೆ ತಾಯಿಯ-ಮಹಿಳೆಯರ ಕೆಲಸವೆಂದು ನಿರ್ದಿಷ್ಟಪಡಿಸಲಾಗಿದೆ. ಆದರೆ ಶಿಶುಗಳ ಲಾಲನೆ-ಪಾಲನೆ-ಪೋಷಣೆಯು ತಂದೆ ಮತ್ತು ತಾಯಿಯರ ಕರ್ತವ್ಯವಾಗಿದೆ. ಪುರುಷಶಾಹಿಯು ಶಿಶುಪಾಲನೆಯನ್ನು ಮಹಿಳೆಯರಿಗೆ ನಿರ್ದಿಷ್ಟಪಡಿಸಿಬಿಟ್ಟಿದೆ. ಒಂಭತ್ತು ತಿಂಗಳು ಹೊತ್ತು-ಹೆತ್ತ ತಾಯಿಯೇ ಅದರ ಪಾಲನೆ-ಪೋಷಣೆ ನೋಡಿಕೊಳ್ಳಬೇಕಾದದ್ದು ಆಕೆಯ ಜವಾಬ್ದಾರಿಯನ್ನು ಹೆಚ್ಚಿಸಿವೆ. ಕಾರ್ಮಿಕವರ್ಗದ ಸ್ತ್ರೀಯರು ಮನೆಯಲ್ಲಿ ದೊಡ್ಡ ಮಕ್ಕಳಿಗೆ ಇನ್ನಿತರ ಮಕ್ಕಳ ಜವಾಬ್ದಾರಿಯನ್ನು ಬಿಟ್ಟು ದುಡಿಮೆಗೆ ಹೋಗುವುದು ಸರ್ವೇ ಸಾಮಾನ್ಯ. ಆದರೆ ಇಂದು ಅವಿಭಕ್ತ ಕುಟುಂಬಗಳು ಹೋಗಿ ವಿಭಕ್ತಕುಟುಂಬಗಳೇ ಹೆಚ್ಚಾಗುತ್ತಿರುವುದರಿಂದ ಹಿರಿಯರಾರು ನೋಡಿಕೊಳ್ಳಲು ಇಲ್ಲದೇ ಇದ್ದಂತಹ ಸಂದರ್ಭದಲ್ಲಿ ಶಿಶುಪಾಲನೆಯಲ್ಲಿ ಮಹಿಳೆ ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

10. ಲಿಂಗತಾರತಮ್ಯ ಮತ್ತು ವೇತನ ತಾರತಮ್ಯ : ಬಾಲ್ಯದಿಂದಲೇ ಹೆಣ್ಣು-ಗಂಡಿನಲ್ಲಿ ತಾರತಮ್ಯವನ್ನು ರೂಪಿಸಲಾಗುತ್ತದೆ. ಹೆಣ್ಣು-ಗಂಡುಗಳಿಗೆ ಬಾಲ್ಯದಿಂದಲೇ ಕೆಲಸ ಕಾರ್ಯಗಳನ್ನು ವಿಭಜಿಸಿ ನೀಡಲಾಗುತ್ತದೆ. ಹೆಣ್ಣು ಮಗುವಿಗೆ ತಾಯಿಯೇ ಮಾದರಿಯಾಗುತ್ತಾಳೆ. ಬಾಲ್ಯದಿಂದಲೇ ಆಟವಾಡುವುದಕ್ಕೆ ಅಡುಗೆ ಆಟದ ಸಾಮಾನು ತೆಗೆದುಕೊಡುವುದರ ಮೂಲಕ ಪಾತ್ರವನ್ನು ಸಮಾಜದಲ್ಲಿ ರೂಪಿಸುವ ಪ್ರಯತ್ನ ಮಾಡಲಾಗುತ್ತದೆ. 'ಬಾಲಕರಿಲ್ಲದ ಬಾಲೀದ್ಯಾತರ ಜನುಮ ಬಾಡಿಗೀ ಎತ್ತು ದುಡಿದ್ಹಾಂಗ' ಎಂಬಂತಹ ಸಾಹಿತ್ಯ ಅವಳ ಮೇಲೆ ದಟ್ಟ ಪರಿಣಾಮ ಬೀರುತ್ತದೆ. ಈ ತಾರತಮ್ಯದಿಂದ ಶ್ರಮವನ್ನು ಸಹ ವಿಭಜನೆ ಮಾಡಿ ಹೆಣ್ಣಿಗೆ ಅರಿವೇ ಇಲ್ಲದಂತೆ ನಡೆದ ಪುರುಷ ಪ್ರಧಾನ ವ್ಯವಸ್ಥೆ ಸಕಾರಾತ್ಮಕವಾಗಿ ರೂಪುಗೊಳ್ಳಲು ಕಾರಣವಾಗಿ ಇದೂ ಸಹ ಅವಳಿಗೆ ಸಮಸ್ಯೆಗಳನ್ನು ತಂದೊಡ್ಡಲು ಕಾರಣವಾಯಿತು.

ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರು ತಾರತಮ್ಯವನ್ನು ಎದುರಿಸುತ್ತಿದುದ್ದು ವೇತನದಲ್ಲಿಯ ಲಿಂಗಸಂಬಂಧಿ ತಾರತಮ್ಯವು ಅತ್ಯಂತ ಸ್ಪಷ್ಟವಾಗಿ ಕಂಡು ಬರುತ್ತಿದೆ. ಕೃಷಿ ಕ್ಷೇತ್ರದಲ್ಲಿ ಕೆಲವು ಬಗೆಯ ಕೆಲಸಗಳನ್ನು ಮಹಿಳೆಯರಿಗೆ ಮಾತ್ರ ಮೀಸಲಿಡಲಾಗಿದೆ. ಉದಾಹರಣೆಗೆ ಸಸಿ ನೆಡುವುದು, ಕಳೆ ತೆಗೆಯುವುದು, ಪೈರುಕಟಾವು ಮಾಡುವುದು, ನೀರು ಹಾಕುವುದು ಇತ್ಯಾದಿ ಕೆಲಸಗಳು ಮಹಿಳೆಯರಿಗೆ ನಿರ್ದಿಷ್ಟ ಪಡಿಸಿದ ಕೆಲಸಗಳಾಗಿದ್ದು, ಮಾರುಕಟ್ಟೆ ಸಂಬಂಧಿ ಕೆಲಸಗಳು ಮಾತ್ರ ಪುರುಷರಿಗೆ ಮೀಸಲಿಡಲಾಗಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ತಾರತಮ್ಯ ವಿರುವುದರಿಂದ ಸ್ತ್ರೀ-ಪುರುಷರ ನಡುವೆ ವರಮಾನ ಹಾಗೂ ವೇತನದಲ್ಲಿ ತಾರತಮ್ಯವಿರುವುದನ್ನು ಕಾಣಬಹುದಾಗಿದೆ.

ಕೈಗಾರಿಕೆ- ಕಛೇರಿಗಳಿಗೆ ಸಂಬಂಧಿಸಿದಂತೆಯೂ ಲಿಂಗಸಂಬಂಧಿ ಪ್ರತ್ಯೇಕೀಕರಣ ಹಾಗೂ ತಾರತಮ್ಯ ಆಚರಣೆಯಲ್ಲಿರುವುದನ್ನು ನೋಡಬಹುದಾಗಿದೆ. 'ಕಾನೂನಿನಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ' ವೆಂಬ ನಿಯಮವಿದ್ದರೂ ವಾಸ್ತವದಲ್ಲಿ ಇದು ಆಚರಣೆಯಲ್ಲಿ ಇಲ್ಲದೇ ಇಲ್ಲಿಯೂ ಮಹಿಳೆಯು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ.

ಮಹಿಳೆ ಮತ್ತು ಪರಿಸರ :ಅವಳ ಆರೋಗ್ಯದ ಮೇಲೆ ಬೀರುವ ಪರಿಣಾಮಗಳು:

1. ಅಡುಗೆ ಮನೆಯ ಪರಿಸರ: ಕಾರ್ಮಿಕ ವಲಯ ಮತ್ತು ಕೃಷಿವಲಯದಲ್ಲಿರುವ ಮಹಿಳೆಯರಿಗೆ ಅಡುಗೆ ಮನೆಯಲ್ಲಿ ಹೆಚ್ಚಿನ ಹೊಗೆ ಹೊರ ಹೋಗಲು ಹೊಗೆಗೂಡುಗಳೇ ಇಲ್ಲದೆ ಹೊಗೆಯ ನಡುವೆ ಆಹಾರ ಬೇಯಿಸುತ್ತಾ ತಾನು ಆರ್ಥಿಕವಾಗಿ ಕುಂದು-ಕೊರತೆಗಳ ನಡುವೆ ಬೇಯುತ್ತಿರುವ ಸಂದರ್ಭದಲ್ಲಿ ಹೊಗೆಯು ಶ್ವಾಸಕೋಶದ ಮೇಲೆ ಪರಿಣಾಮ ಬೀರಿ, ಅನಾರೋಗ್ಯಕ್ಕೆ ತುತ್ತಾಗುವಂತಹ ಮಹಿಳೆಯರನ್ನು ಈ ಅಸಂಘಟಿತ ವಲಯದಲ್ಲಿ ಹೆಚ್ಚಾಗಿ ಕಾಣುತ್ತೇವೆ.

2. ಶೌಚಾಲಯಗಳ ಕೊರತೆ:- ಇಂದಿನ ಆಧುನಿಕ ಯುಗದಲ್ಲೂ ಕೆಲವೊಂದು ಹಳ್ಳಿಗಳಲ್ಲಿ ಶೌಚಾಲಯಗಳಿಲ್ಲ. ಶೌಚಕಾರ್ಯಕ್ಕೆ ಕತ್ತಲನ್ನು ಕಾಯುವಂತಹ ಪರಿಸ್ಥಿತಿ ಇದೆ. ಇದೂ ಸಹ ಮಹಿಳೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವಂತೆ ಮಾಡಿದೆ. ಮಲಬದ್ಧತೆ, ಅಜೀರ್ಣ ಇನ್ನಿತರ ಹಲವಾರು ಕಾಯಿಲೆಗೆ ಒಳಗಾಗತ್ತಿರುವುದು ಮಹಿಳೆಯರ ಶೋಚನೀಯ ಸ್ಥಿತಿಯಾಗಿದೆ. ಹಾಗೆಯೇ ಕೆಲವೊಂದು ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ದುಡಿಯುವಂತಹ ಮಹಿಳೆಯರಿಗೆ ಸೂಕ್ತ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು ದುಡಿಯುವ ಮಹಿಳಾ ಸಮಸ್ಯೆಗಳಲ್ಲಿ ಒಂದಾಗಿದೆ.

3. ಪರಿಸರ ಮಾಲಿನ್ಯ :- ದುಡಿಯುವ ಮಹಿಳೆಯರು ತಮ್ಮ ಸುತ್ತ-ಮುತ್ತಣ ಪುರುಷರ ದುಶ್ಚಟಗಳಿಂದ ಅನಾರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿದ್ದಾಳೆ. ಗಂಡಸರು ಸೇದುವ ಬೀಡಿ, ಸಿಗರೇಟಿನ ಹೊಗೆ, ಪಾನ್‌ಪರಾಗ್ ಚಟಗಳಿಂದಾಗಿ ಮಹಿಳೆಯರು ಪರೋಕ್ಷವಾಗಿ ಅನಾರೋಗ್ಯದ ಸಮಸ್ಯೆಯನ್ನು ಎದುರಿಸಬೇಕು.

4. ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ಸತತ ಪರಿಶ್ರಮದ ದುಡಿಮೆಯಲ್ಲಿ ತೊಡಗಿದಾಗ ಎದುರಾದ ಆರೋಗ್ಯ ಸಮಸ್ಯೆಗಳು:

ಸಂಘಟಿತ ವಲಯದಲ್ಲಿ ಕೆಲಸದ ಒತ್ತಡದಿಂದಾಗಿ ದೈನಂದಿನ ಆಹಾರ, ನಿದ್ರೆ, ವಿಶ್ರಾಂತಿಗಳಲ್ಲಿ ನಿಯಮವಿಲ್ಲದೆ ಮಹಿಳೆಯರು ಅಸಿಡಿಟಿ, ನಿದ್ರಾಹೀನತೆ, ಖಿನ್ನತೆ, ಬೊಜ್ಜು ಮುಂತಾದ ಅನೇಕ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಈಡಾಗುತ್ತಿದ್ದಾಳೆ. ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು ಸೂಕ್ತ ಆರೋಗ್ಯ ರಕ್ಷಣೆಯ ಸೌಲಭ್ಯಗಳಿಲ್ಲದೆ ಚರ್ಮರೋಗ, ಶ್ವಾಸಕೋಶದ ಕಾಯಿಲೆ ಮುಂತಾದ ರೋಗಗಳಿಗೆ ತುತ್ತಾಗುವುದನ್ನು ಕಾಣುತ್ತಿದ್ದೇವೆ. ದುಡಿಯುವ ಮಹಿಳೆಯರು ವಿದ್ಯಾವಂತರಾಗಿರಬಹುದು ಅಥವಾ ಅವಿದ್ಯಾವಂತರಾಗಿರಬಹುದು ಈ ಇಬ್ಬರೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪುರುಷನಿಗೆ ದೊರೆಯುವ ಪ್ರೋತ್ಸಾಹ ಮಹಿಳೆಯರಿಗೆ ದೊರಕುತ್ತಿಲ್ಲ. ಸಮಾಜ ಮಹಿಳೆಗೆ ಪ್ರೋತ್ಸಾಹ ನೀಡಲು ಹಿಂದೇಟು ಹಾಕುತ್ತದೆ.

ಮಹಿಳೆಯರು ಉದ್ಯಮಿಗಳಾಗಲು ಇರುವ ಅಡ್ಡಿ ಆತಂಕಗಳು :

1. ಸಾಮಾಜಿಕ ಮತ್ತು ಸಾಂಸ್ಕೃತಿಕ ಅಡ್ಡಿಗಳು : ಕುಟುಂಬದ ರಚನೆ, ಜನರ ವಿರೋಧಿ ಮನೋಭಾವ ಮತ್ತು ಮೌಲ್ಯಗಳು, ಪುರುಷ ಪ್ರಧಾನ ನಂಬಿಕೆ ಆಚರಣೆಗಳು, ಧಾರ್ಮಿಕ ನಂಬಿಕೆ ಹಾಗೂ ಆಚರಣೆಗಳು ಮಹಿಳಾ ಉದ್ಯಮಿಗಳಿಗೆ ಅಡ್ಡಿಯಾಗಿವೆ. ಉದಾಹರಣೆಗೆ ಕುಟುಂಬದಲ್ಲಿ ಸ್ತ್ರೀ ಕುರಿತು ಪಾತ್ರ ನಿರೀಕ್ಷಣೆ, ಪರದಾ ಪದ್ಧತಿ, ನಡತೆಗಳ ಮೇಲೆ ನಿಬಂಧನೆಗಳು ಉದ್ಯಮಿಯಲ್ಲಿರಬೇಕಾದ ಕೆಲವು ಗುಣಗಳನ್ನು ತುಳಿದು ಹಾಕುತ್ತವೆ.

2. ಶೈಕ್ಷಣಿಕ ಅಡ್ಡಿಗಳು : ಅನಕ್ಷರತೆ, ಹೆಣ್ಣು ಮಕ್ಕಳ ಶಿಕ್ಷಣ ಕುರಿತು ನಿರ್ಲಕ್ಷ್ಯ, ಶಿಕ್ಷಣದಲ್ಲಿ ವಿಷಯದ ಆಯ್ಕೆ, ವೃತಿಪರ ಪದವಿಗಳನ್ನು ಪಡೆಯಲು ಅವಕಾಶಗಳಿಲ್ಲದಿರುವುದು, ಪಠ್ಯಕ್ರಮದಲ್ಲಿನ ಪಕ್ಷಪಾತ, ಕೆಲವು ಕೋರ್ಸುಗಳಲ್ಲಿನ ಪ್ರವೇಶ ನಿಯಮಗಳು, ಶಿಕ್ಷಣ ಪಡೆಯಲು ಮೂಲಭೂತ ಸೌಕರ್ಯಗಳ ಕೊರತೆ ಮುಂತಾದವು ಹೆಣ್ಣುಮಕ್ಕಳು ಉದ್ಯಮಿಗಳಾಗಲು ಶಿಕ್ಷಣವನ್ನು ಸಾಧನವನ್ನಾಗಿ ಮಾಡಿಕೊಳ್ಳಲು ಇರುವ ಅಡ್ಡಿಗಳು, ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿಯಲ್ಲಿ ಹೆಣ್ಣು ಮಕ್ಕಳ ಸಾಧನೆ ಗಂಡುಮಕ್ಕಳಿಗಿಂತ ಹೆಚ್ಚಿದ್ದರೂ ವೃತ್ತಿಪರ ಶಿಕ್ಷಣದಲ್ಲಿ ಅದರಲ್ಲೂ ಎಂ.ಬಿ.ಎ, ಎಂಜಿನಿಯರಿಂಗ್, ಆಡಳಿತಕ್ಕೆ ಸಂಬಂಧಪಟ್ಟ ಕೋರ್ಸ್‌ಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ.

3. ಮೂಲ ಅವಶ್ಯಕತೆಗಳ ಕೊರತೆ: ಬಂಡವಾಳಕ್ಕೆ ಬೇಕಾದಂತಹ ಸಂಪನ್ಮೂಲ ಕೊರತೆ, ತಂತ್ರಜ್ಞಾನದ ಲಭ್ಯತೆಯಿಲ್ಲದಿರುವುದು, ಉದ್ಯಮವನ್ನು ಪ್ರಾರಂಭಿಸಲು ಮೂಲಭೂತವಾಗಿ ಬೇಕಾದಂತಹ ಭೂಮಿ, ಲೈಸನ್ಸ್, ವಿದ್ಯುಚ್ಛಕ್ತಿ ಸರಬರಾಜು, ನೀರಿನ ವ್ಯವಸ್ಥೆಗಳನ್ನು ಪಡೆಯುವುದು ತುಂಬ ಕಠಿಣವಾಗಿರುತ್ತದೆ. ಅವುಗಳನ್ನು ಪಡೆಯಲು ಇರುವ ಹಲವಾರು ಅಡ್ಡಿ ಆತಂಕಗಳು ಮಹಿಳೆಯರು ಉದ್ಯಮಕ್ಷೇತ್ರದಿಂದ ದೂರವಾಗುವಂತೆ ಮಾಡುತ್ತವೆ. ಬ್ಯಾಂಕುಗಳಲ್ಲೂ ಸಾಲ ತೆಗೆದುಕೊಳ್ಳಲು ಮೊದಲು ಕೇಳುವುದು ಭದ್ರತೆ, ನಿವೇಶನ, ಒಡವೆ, ಮನೆ ಇತರ ಆಸ್ತಿ. ಹಾಗಾಗಿ ಹಣ ಕ್ರೋಢೀಕರಿಸುವುದು ಮಹಿಳೆಯರ ಮಟ್ಟಿಗೆ ಒಂದು ದೊಡ್ಡ ಸಾಹಸವಾಗುತ್ತದೆ.

4. ವೈಯಕ್ತಿಕ ಅಡ್ಡಿಗಳು : ಮಹಿಳೆಯರಲ್ಲಿ ಕಂಡುಬರುವ ನಕಾರಾತ್ಮಕ ಯೋಚನೆ, ಆತ್ಮವಿಶ್ವಾಸದ ಕೊರತೆ, ನಾಯಕತ್ವದ ಕೊರತೆ, ದೂರಾಲೋಚನೆಯ ಕೊರತೆ, ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಲು ಆಗದಿರುವುದು, ವಿವಿಧ ಕೆಲಸಗಳನ್ನು ಒಂದೇ ಸಮಯದಲ್ಲಿ ಮಾಡಲು ಯೋಜನೆಗೆ ಸಮಯ ನಿರ್ವಹಣೆ ಮಾಡಿಕೊಳ್ಳದಿರುವುದು, ಖಚಿತ ನಿಲುವನ್ನು ಹೊಂದುವ, ವ್ಯಕ್ತಪಡಿಸುವ ಸಾಮರ್ಥ್ಯದ ಕೊರತೆ ಮುಂತಾದವುಗಳು ಕೂಡ ಮಹಿಳೆಯರು ಉದ್ಯಮಿಗಳಾಗಲು ಇರುವ ವೈಯಕ್ತಿಕ ಹಂತದ ಅಡ್ಡಿಗಳಾಗಿವೆ.

ಮಹಿಳಾ ಉದ್ಯಮಿಗಳು ಎದುರಿಸುವ ಇನ್ನಿತರ ಸಮಸ್ಯೆಗಳು :

1. ಕೌಟುಂಬಿಕ ಜವಾಬ್ದಾರಿ, ಮನೆಗೆಲಸ ಹಾಗೂ ಮಕ್ಕಳ ಪಾಲನೆ ಇವುಗಳ ನಿರ್ವಹಣೆಯ ಮಹಿಳಾ ಉದ್ಯಮಿಗಳಿಗೆ ಸಮಸ್ಯೆಯನ್ನು ಒಡ್ಡುತ್ತದೆ. ಹಾಗೊಮ್ಮೆ ಈ ಮೂಲಕರ್ತವ್ಯಗಳನ್ನು ಪಾಲಿಸಲಾಗಲಿಲ್ಲ ಎಂದರೆ ಮಹಿಳೆಯರೇ ಅಪರಾಧಿ ಪ್ರಜ್ಞೆಯಿಂದ ಬಳಲುತ್ತಾರೆ. ಇದು ಉದ್ಯೋಗಸ್ಥ ಮಹಿಳೆಯರಲ್ಲೂ ಕಂಡು ಬರುವ ಪ್ರವೃತ್ತಿ.

2. ಕುಟುಂಬದಲ್ಲಾಗಲಿ ಕುಟುಂಬದ ಹೊರಗಾಗಲಿ ಮಹಿಳೆಯರಿಗೆ ಹಣ ಅಥವಾ ಇತರ ಆರ್ಥಿಕ ಸಂಪನ್ಮೂಲಗಳ ಲಭ್ಯತೆಯಿರುವುದಿಲ್ಲ. ಸಾಮಾಜಿಕ ರಚನೆ, ಪುರುಷ ಪ್ರಧಾನತೆ ಹಾಗೂ ಆರ್ಥಿಕವ್ಯವಸ್ಥೆ ಮಹಿಳೆಯರನ್ನು ಪರಾವಲಂಬಿಗಳನ್ನಾಗಿ ಮಾಡಿರುತ್ತದೆ. ಹಣಕಾಸಿನ ಸಹಾಯ ನೀಡುವಲ್ಲಿ, ಸಾಲ ಮಂಜೂರಾತಿ ಮಾಡುವಲ್ಲಿ ನಿರ್ಲಕ್ಷ್ಯವನ್ನು ತೋರುತ್ತವೆ, ನಿವೇಶನ, ಮನೆ, ಒಡವೆಗಳ ಭದ್ರತೆಯನ್ನು ಕೇಳುತ್ತವೆ, ಸಾಲದ ಮರುಪಾವತಿಗೂ ಅನೇಕ ಕಠಿಣ ನಿಬಂಧನೆಗಳಿರುತ್ತವೆ. ಹಣಕಾಸಿನ ಸಂಸ್ಥೆಗಳು ಅವಿವಾಹಿತ ಮಹಿಳೆಯರಿಗೆ ಸಾಲ ನೀಡಲು ಮುಂದೆ ಬರುವುದಿಲ್ಲ.

3.ಸರ್ಕಾರಿ ವಲಯದಿಂದ ಸಹಾಯ ಅಥವಾ ಸವಲತ್ತುಗಳನ್ನು ಪಡೆಯಬೇಕೆಂದರೆ ಮಹಿಳೆ ಕಿರುಕುಳಕ್ಕೆ ತುತ್ತಾಗಬೇಕಾಗುತ್ತದೆ. ಅಲ್ಲಿರುವ ಭ್ರಷ್ಟಾಚಾರ, ಲಂಚ, ಮಹಿಳೆಯರ ಬಗೆಗೆ ತೋರುವ ತಾರತಮ್ಯ, ಸಿಬ್ಬಂದಿ ವರ್ಗದ ಬೇಜವಾಬ್ದಾರಿತನ ಇವುಗಳೊಂದಿಗೆ ಏಗುವುದು ಮಹಿಳೆಯರಿಗೆ ಅತಿ ಕಷ್ಟವೇ. ಕೆಲವೊಮ್ಮೆ ಕಾನೂನು, ನಿಯಮಾವಳಿ ಪತ್ರ ವ್ಯವಹಾರಗಳನ್ನು ಕುರಿತು ಮಹಿಳಾ ಉದ್ಯಮಿಗಳಲ್ಲಿರುವ ಪರಿಮಿತ ಜ್ಞಾನ ಸಮಸ್ಯೆಯಾಗಿ ಪರಿಣಮಿಸುತ್ತದೆ.

4. ವಸ್ತುಗಳ ಉತ್ಪಾದನೆಗೆ ಹಾಗೂ ಸರಬರಾಜು ಸರಿಯಾದ ಸಮಯಕ್ಕೆ ಸಾಕಷ್ಟು ಕಚ್ಚಾಸಾಮಗ್ರಿಗಳ ಪೂರೈಕೆಯಾಗದಿರುವುದು, ಸೂಕ್ತ ತಂತ್ರಜ್ಞಾನ ದೊರಕದಿರುವುದು, ಉದ್ಯಮ ನಡೆಸಲು ಭೂಮಿ, ನಿವೇಶನ, ವಿದ್ಯುಚ್ಛಕ್ತಿ ಸರಬರಾಜು ಮುಂತಾದ ಮೂಲಭೂತ ಸೌಕರ್ಯಗಳನ್ನು ಪಡೆಯಲು ಸಾಧ್ಯವಾಗದಿರುವುದು, ಹೊಸ ಹೊಸ ತಂತ್ರಜ್ಞಾನದೊಂದಿಗೆ ಸಕಾಲಿಕವಾಗಿ ನಡೆಯಲು ಅಸಾಧ್ಯವಾಗುವುದು ಅಥವಾ ಬಳಸಿಕೊಳ್ಳಲು ಸೂಕ್ತ ಕೌಶಲ್ಯಭರಿತ ವ್ಯಕ್ತಿ ದೊರಕದಿರುವುದು ಉತ್ಪಾದನೆಗೆ ಸಂಬಂಧಿಸಿದಂತೆ ಎದುರಾಗುವ ಸಮಸ್ಯೆಯಾಗಿದೆ.

5. ಯಾವುದೇ ಉದ್ಯಮ ಯಶಸ್ವಿಯಾಗಲು ಉತ್ತಮ ಸಿಬ್ಬಂದಿ ಹಾಗೂ ಸಮರ್ಥ ನಿರ್ವಹಣ ವ್ಯವಸ್ಥೆಯ ಜೊತೆಗೆ ಮಹಿಳಾ ಉದ್ಯಮಿಯು ಸಿಬ್ಬಂದಿಯೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಿರಬೇಕಾಗುತ್ತದೆ. ಕೆಲವು ಕೆಲಸಗಾರರು ಮಹಿಳಾ ಮುಖ್ಯಸ್ಥರ ಅಧೀನದಲ್ಲಿ ಕೆಲಸ ಮಾಡಲು ಇಚ್ಛಿಸದಿರುವುದರಿಂದ ಅವರನ್ನು ದೀರ್ಘಕಾಲ ಸೇವೆಯಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲದೇ ಕೌಶಲ್ಯ ಹಾಗೂ ಅನುಭವಿ ಕೆಲಸಗಾರರ ಕೊರತೆಯು ದೊಡ್ಡ ಸಮಸ್ಯೆಯಾಗುತ್ತದೆ.

6. ಮಹಿಳಾ ಉದ್ಯಮಿಗಳು ಎದುರಿಸುವ ಅತಿ ದೊಡ್ಡ ಸಮಸ್ಯೆ ಮಾರುಕಟ್ಟೆ ಸೃಷ್ಟಿಸಿಕೊಂಡು ವಸ್ತುಗಳನ್ನು ಮಾರಾಟ ಮಾಡುವುದು. ಮಾರುಕಟ್ಟೆಗೆ ಸಂಬಂಧಿಸಿದಂತೆ ತೀವ್ರ ಪೈಪೋಟಿ, ಸ್ಪರ್ಧೆಯನ್ನು

ಎದುರಿಸಬೇಕಾಗಿದೆ. ಮಾರಾಟ ವ್ಯವಸ್ಥೆಯಲ್ಲಿನ ಬದಲಾವಣೆ ಕುರಿತು ಮಾಹಿತಿ ಕೊರತೆ, ಮಹಿಳಾ ಉದ್ಯಮಿ ಬಗ್ಗೆ ಗ್ರಾಹಕರ ಉದಾಸೀನಧೋರಣೆ, ವಸ್ತುಗಳ ವಿತರಣೆಗೆ ಮೂಲ ಸೌಕರ್ಯಗಳ ಕೊರತೆ, ವಸ್ತು ಕೊಂಡುಕೊಂಡವರ ಕಡೆಯಿಂದ ಹಣ ಪಾವತಿಯಲ್ಲಿ ನಿಧಾನವಾಗುವುದು, ಜಾಹಿರಾತಿನ ಕೊರತೆ ಮುಂತಾದ ಸಮಸ್ಯೆಗಳು ಎದುರಾಗುತ್ತವೆ.

7. ಜಾಗತೀಕರಣ ಮಹಿಳಾ ಉದ್ಯಮಿಗಳಿಗೆ ದೊಡ್ಡ ಸವಾಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಒಡ್ಡುವ ಸ್ಪರ್ಧೆ, ಗುಣಮಟ್ಟ, ಬೆಲೆ, ಸರಬರಾಜಿನಲ್ಲಿ ಇತ್ಯಾದಿಗಳನ್ನು ಎದುರಿಸಲು ಮಹಿಳಾ ಉದ್ಯಮಿಗಳು ಇನ್ನೂ ಸನ್ನದ್ಧರಾಗಬೇಕಾಗಿದೆ. ಅನೇಕ ಪ್ರಮಾಣದ ಸಣ್ಣ ಕೈಗಾರಿಕೆ, ಗೃಹ ಹಾಗೂ ಗುಡಿ ಕೈಗಾರಿಕೆಗಳು ಮುಚ್ಚಿ ಹೋಗಿರುವ ಸಂದರ್ಭದಲ್ಲಿ ಮಹಿಳೆಯರು ಉದ್ಯೋಗಿಗಳಾಗಿ ಉದ್ಯಮಿಗಳಾಗಿ ಅವಕಾಶಗಳನ್ನು ಕಳೆದುಕೊಂಡಿದ್ದಾರೆ.

ಒಟ್ಟಿನಲ್ಲಿ ಸಂಘಟಿತ ವಲಯ ಮತ್ತು ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು ಕಛೇರಿಗಳಲ್ಲಿ, ಕಾರ್ಮಿಕ ವಲಯಗಳಲ್ಲಿ ಹಾಗೂ ಸ್ವಯಂ ಉದ್ಯೋಗಿಗಳಾಗಿರುವ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಇಂದು ಎದುರಿಸಬೇಕಾಗಿದ್ದು, ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ಪಡೆಯುವಲ್ಲಿ ಮುಂದಾದರೆ ಆ ಶಿಕ್ಷಣ ವ್ಯವಸ್ಥೆಯಿಂದ ಅಧಿಕಾರಿ ಹಾಗೂ ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕಹೊಂದುವುದರೊಂದಿಗೆ ವ್ಯಾಪಾರ ವಹಿವಾಟುಗಳನ್ನು ನಡೆಸುವುದು ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಮುಂತಾದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಾಗುತ್ತದೆ.

ಅಡಿ ಟಿಪ್ಪಣಿಗಳು :

೧) ಮಹಿಳೆ: ಆರ್ಥಿಕತೆ ಮತ್ತು ಅಭಿವೃದ್ಧಿ-ಟಿ.ಆರ್.ಚಂದ್ರಶೇಖರ-೨೦೦೧:ಪು.ಸಂ.-೧೧೧

೨) ಮಹಿಳೆ ಮತ್ತು ದುಡಿಮೆ:ಡಾ.ಬಿ.ಹೆಚ್.ಆಂಜನಪ್ಪ-೨೦೦೬ ಪು.ಸಂ.೧೭೦.

ಅಧ್ಯಾಯ-೫

ದುಡಿಯುವ ಮಹಿಳೆಯ ಸಮಸ್ಯೆಗೆ ಪರಿಹಾರಗಳು

ಭಾರತದಲ್ಲಿ ಸ್ತ್ರೀಯನ್ನು ಬಹುಹಿಂದಿನಿಂದಲೂ ಗೌರವದಿಂದ ಕಾಣಲಾಗಿದೆ. ಮನುವಿನ ನಿಯಮಗಳ ಪ್ರಕಾರ, ಮಹಿಳೆಯರನ್ನು ಗೌರವಿಸಬೇಕು. ಮಹಿಳೆಯರಿಗೆ ಗೌರವವಿಲ್ಲದ ಯಾವ ಮತೀಯ ಆಚರಣೆಗೂ ಅರ್ಥವಿಲ್ಲ ಎಂದು ಆತ ಹೇಳಿದ. ಒಂದು ಸುರಕ್ಷಿತ ವಾತಾವರಣದಲ್ಲಿ ಮಹಿಳೆಯರಿಗೆ ಜೀವಿಸಲು ಮತ್ತು ಘನತೆಯಿಂದ ಕೆಲಸ ಮಾಡಲು ಮೂಲಭೂತ ಹಕ್ಕು ಇದೆ ಎಂದು ಘೋಷಿಸಿತು. ಸಂವಿಧಾನದ ಪ್ರಕಾರ ಮಹಿಳೆಯರ ಗೌರವ, ಘನತೆಗೆ ಕುಂದು ತರುವಂತಹ ಯಾವುದೇ ವಿಚಾರವನ್ನು ಭಾರತದ ಪ್ರತಿ ಪ್ರಜೆಯು ತ್ಯಾಜ್ಯ ಮಾಡಬೇಕು.

ಈಗ ತೀವ್ರತರವಾದ ಬದಲಾವಣೆಗಳು ಆಗುತ್ತಿರುವುದರಿಂದ ಸಾಮಾಜಿಕ ಸಂಘ-ಸಂಸ್ಥೆಗಳು, ಸಂಪ್ರದಾಯಗಳು ಮತ್ತು ಪದ್ಧತಿಗಳು ಹೊಸ ಆಲೋಚನೆಗಳು, ಪದ್ಧತಿಗಳಿಗೆ ಮಾರ್ಗಮಾಡಿ ಮಹಿಳೆಯರ ಸ್ಥಾನ, ಅಂತಸ್ತುಗಳ ಬಗೆಗಿನ ಗೊಂದಲಗಳು ಮತ್ತು ವಿರೋಧೋಕ್ತಿಗಳನ್ನು ಧೈರ್ಯದಿಂದ ಕೈಗೆತ್ತಿಕೊಳ್ಳಲಾಗುತ್ತಿದೆ. ದುಡಿಯುವ ಮಹಿಳೆಯರ ಸ್ಥಿತಿಯನ್ನು ಉತ್ತಮಗೊಳಿಸಲು ನಿಯಮಗಳು ಮತ್ತು ಕಟ್ಟುಪಾಡುಗಳು ಅವಶ್ಯಕ ಹಾಗೂ ಸಹಾಯಕ. ಹಾಗಾಗಿ ಜೀವನಯಾತ್ರೆ ಮತ್ತು ಸಂಸಾರಕ್ಕೆ ಅನ್ವಯವಾಗುವಂತೆ ಒಂದು ಹೆಣ್ಣು 'ಎಲ್ಲವನ್ನು' ಮಾಡಲು ಸಾಧ್ಯವಿಲ್ಲ. 'ಕೆಲಸ ಮತ್ತು ಸಂಸಾರ' ಎರಡನ್ನೂ ಬೆಸೆಯಲು ಇಚ್ಛಿಸುವ ಮಹಿಳೆಗೆ ಜೀವನ ಸುಲಭ ಸಾಧ್ಯವಾಗುತ್ತದೆ.

ಒಮ್ಮೆ ದುಡಿಯುವ ಮಹಿಳೆಗೆ ಗುರಿಗಳು ಸ್ಪಷ್ಟವಾದುವೆಂದರೆ, ತಾನು ಸಕಾರಾತ್ಮಕ ಚೈತನ್ಯದಿಂದ ಮತ್ತು ದೃಢ ನಿರ್ಧಾರದಿಂದ ಅಡೆ-ತಡೆಗಳನ್ನು ಹಾದು ಸಾಧನೆಗೆ ತೊಡಗಿ ಯಶಸ್ವಿ ಸಾಧಿಸುತ್ತಾಳೆ. ಹಾಗಾಗಿ ಮನೆ-ಕಛೇರಿಯ ಇಬ್ಬಗೆಯ ದುಡಿತವನ್ನು ಸರಿದೂಗಿಸುವ ಪ್ರಯತ್ನ ಅವಳದಾಗುತ್ತದೆ. ಇದಕ್ಕೆ 'ಸ್ವಯಂ ನಿವೃತ್ತಿ' ಯ ಆಲೋಚನೆಗಳು ಅವಳ ಮನಸ್ಸಿನಲ್ಲಿ ಸುಳಿಯಲಾರವು.

ಮಹಿಳೆಯ ಸಮಸ್ಯೆಗಳ ಉಗಮ ಮತ್ತು ಸ್ವರೂಪವನ್ನು ಅಧ್ಯಯನ ಮಾಡುವುದರಿಂದ ಆ ಸಮಸ್ಯೆಗಳು ಅಪೇಕ್ಷಿಸುವ ಪರಿಹಾರಗಳತ್ತ ದೃಷ್ಟಿಹರಿಸಬಹುದು. ಹೆಣ್ಣಿನ ಶತ್ರು ಪುರುಷನಲ್ಲ. ಗಂಡು-ಹೆಣ್ಣಿನ ಅಸಮಾನತೆ ಸಂಪೂರ್ಣವಾಗಿ ಜೀವಶಾಸ್ತ್ರೀಯವಾದ ನಿಜಾಂಶವೆಂದು ಕೈಕಟ್ಟಿ ಕೂರಬೇಕಿಲ್ಲ. ಜವಾಹರಲಾಲ್ ನೆಹರು ಹೇಳಿರುವಂತೆ "ಮಹಿಳೆಗೆ ಸ್ವಾತಂತ್ರ್ಯ ದೊರೆಯಬೇಕಾದರೆ ವಿವಾಹ ಒಂದು ವೃತ್ತಿ ಎಂಬ ಭಾವನೆ ಮೊದಲು ಮರೆಯಬೇಕು. ಸ್ವಾತಂತ್ರ್ಯವು ಆರ್ಥಿಕ ಸ್ಥಿತಿ-ಗತಿಗಳ ಮೇಲೆ ಅವಲಂಭಿಸಿದೆ. ಮಹಿಳೆ ಆರ್ಥಿಕವಾಗಿ ಸ್ವತಂತ್ರಳಾಗದೆ ಹಾಗೂ ಸ್ವಯಂ ಗಳಿಕೆಯಲ್ಲಿ ತೊಡಗದಿದ್ದರೆ

ಅವಳು ಗಂಡ ಅಥವಾ ಇನ್ನಾರ ಮೇಲೋ ಅವಲಂಭಿತಳಾಗಿರಬೇಕಾಗುತ್ತದೆ. ಪರಾವಲಂಭಿಗಳೆಂದಿಗೂ ಸ್ವತಂತ್ರರಲ್ಲ. ಸ್ತ್ರೀ-ಪುರುಷರ ಸಂಬಂಧ ಪರಸ್ಪರ ಅವಲಂಬನೆ ಇಲ್ಲದಂತಹ ಸ್ವತಂತ್ರ ಸಂಗಾತಿತನ ಕೊಡುವಂತದ್ದು."೧ ಎಂದಿದ್ದಾರೆ. ಹಾಗಾಗಿ ದುಡಿಮೆಯಿಂದ ಆರ್ಥಿಕವಾಗಿ ಸಮರ್ಥಳಾಗುತ್ತಾಳೆ.

ಸಮಾಜದ ಯಾವುದೇ ಸಮಸ್ಯೆಯನ್ನು ಸಮಾಜದ ಚೌಕಟ್ಟು ಮತ್ತು ಉತ್ಪಾದನಾ ವಿಧಾನದಿಂದ ದೂರವಿಟ್ಟು, ಸ್ವತಂತ್ರವಾಗಿ ಹೇಗೆ ಪರಿಗಣಿಸಬಾರದೋ ಹಾಗೆಯೇ ಲಿಂಗದ ಆಧಾರದ ಮೇಲೆ ಶ್ರಮವಿಭಜನೆಗೊಂಡ ಸ್ತ್ರೀ-ಪುರುಷರ ಸಂಬಂಧವನ್ನು ಚಾರಿತ್ರಿಕವಾಗಿ ಸಮಾಜದಲ್ಲಿ ಉಂಟಾಗಿರುವ ಸಾಮಾಜಿಕ ಚೌಕಟ್ಟು ಮತ್ತು ಉತ್ಪಾದನಾ ವಿಧಾನದಿಂದ ಬೇರ್ಪಡಿಸಿ ನೋಡಲಾಗುವುದಿಲ್ಲ.

ದುಡಿಮೆಯ ಕ್ಷೇತ್ರದಲ್ಲಿರುವ ಅವ್ಯವಸ್ಥೆಯ ವಿರುದ್ಧ, ವೇತನ ತಾರತಮ್ಯದ ವಿರುದ್ಧ ದನಿಯೆತ್ತುವ ಸಂಘಟಿತ ಮಹಿಳೆಗೆ ಹೊಸ ಸಮಾಜವೊಂದರ ಸೃಷ್ಟಿಯಲ್ಲಿ ಹಿರಿದಾದ ಜವಾಬ್ದಾರಿ ಇದೆ. ಅಸಂಘಟಿರಾಗಿರುವ ಮಹಿಳೆಯರನ್ನು ಸಂಘಟಿಸುವ ಪ್ರಯತ್ನದಲ್ಲೂ ಅವಳು ಹೆಜ್ಜೆ ಹಾಕಬೇಕಾಗಿದೆ. ದುಡಿಯುವ ಮಹಿಳೆ ಹೋರಾಟದಿಂದ ಮಾತ್ರವೇ ತನ್ನ ವಿಮೋಚನೆಯನ್ನು ಪಡೆಯಬಲ್ಲಳು. ಮತ್ತು ಸಮಾಜದ ವಿಮೋಚನೆಗೂ ಕಾರಣವಾಗಬಲ್ಲಳು. ಕೃಷ್ಣನಿಗೆ ಮೊರೆಯಿಟ್ಟ ದ್ರೌಪದಿಯಂತೆ, ರಾಮನಿಗೆ ಕಾಯುತ್ತಿದ್ದ ಅಹಲ್ಯೆಯಂತೆ ಹೆಣ್ಣು ಈಗ ಯಾವ ಯುಗ ಪ್ರವರ್ತಕನಿಗೂ ಮೊರೆ ಇಡುವುದರಿಂದ ಪ್ರಯೋಜನವಿಲ್ಲ. ತನ್ನ ವಿಮೋಚನೆ ತನ್ನ ಕೈಯಲ್ಲಿಯೇ ಇದೆ ಎಂದು ಸಂಘಟಿತ ಸ್ತ್ರೀ ಶಕ್ತಿಗೆ ತನ್ನ ಕೈ ಜೋಡಿಸಬೇಕಾಗಿದೆ.

ಮಹಿಳೆ ಕರ್ತವ್ಯ ನಿರ್ವಹಣೆಯಲ್ಲಿ ಎದುರಿಸಬಹುದಾದ ಲೈಂಗಿಕ ಬೇಧ-ಭಾವ ಅಥವಾ ಕಿರುಕುಳದ ಸಮಸ್ಯೆಗಳ ಬಗ್ಗೆ ಬೆಂದು ಹೋಗುವುದು ಬೇಡ. ಪ್ರತಿಯೊಬ್ಬ ಮಹಿಳೆಯೂ ತನ್ನ ಹಕ್ಕುಗಳ ಬಗ್ಗೆ ತಿಳಿದುಕೊಂಡು ದೂರು ಸಮಿತಿಗೆ ಸಹಾಯಕ್ಕಾಗಿ ಕೋರಿಕೆ ಸಲ್ಲಿಸಿ ದಿಟ್ಟ ಹೆಜ್ಜೆ ಇಟ್ಟರೆ ಕಾನೂನಿನ ಸಹಾಯ ಪಡೆದರೆ ಸಮಸ್ಯೆಗಳು ಪರಿಹಾರವಾಗುತ್ತವೆ.

ಹತ್ತೊಂಭತ್ತನೇ ಶತಮಾನದ ಕೊನೆಯ ವೇಳೆಗೆ ಆರಂಭವಾದ ಸ್ತ್ರೀ ಸಮಾನತೆಯ ಹೋರಾಟ ಇಪ್ಪತ್ತೊಂದನೆಯ ಶತಮಾನದಲ್ಲೂ ಮುಂದುವರಿದಿದೆ. ಬೌದ್ಧಿಕವಾಗಿ ಮತ್ತು ಮಾನಸಿಕವಾಗಿ, ಕ್ರಿಯಾತ್ಮಕವಾಗಿ ಆಕೆ ಪುರುಷ ನಿರ್ವಹಿಸಬಹುದಾದಂತಹ ಎಲ್ಲಾ ಕ್ರಿಯೆಗಳನ್ನು ಅವನಷ್ಟೇ ಅಥವಾ ಅವನಿಗಿಂತ ಹೆಚ್ಚು ಸಮರ್ಥವಾಗಿ ನಿರ್ವಹಿಸಬಲ್ಲವಳಾಗಿರುವುದರಿಂದ ಕುಟುಂಬದಲ್ಲಿ ಸ್ತ್ರೀ-ಪುರುಷ ಇಬ್ಬರೂ ಸಮಾನವಾಗಿರತಕ್ಕಂತಹ ಜವಾಬ್ದಾರಿಯನ್ನು, ಸಮಾನವಾಗಿರತಕ್ಕಂತಹ ಹಕ್ಕುಗಳನ್ನು, ಸಮಾನ

ಸಮಾನವಾಗಿ ಕಾಣತಕ್ಕಂತಹ ಕಾರ್ಯವಿಧಾನಗಳನ್ನು ರೂಪಿಸಿಕೊಂಡು ಅದರಂತೆ ಕಟುಬದ್ಧವಾಗಿ ದುಡಿಯಬೇಕಾದಂತಹ ಅಗತ್ಯವಿದೆ. ಹೀಗೆ ನಾವು ಹೇಗೆ ನಮ್ಮ ಆಲೋಚನೆಗಳನ್ನು ಹಂಚಿಕೊಳ್ಳುತ್ತೇವೆಯೋ, ಕೆಲಸಗಳನ್ನು ಹಂಚಿಕೊಳ್ಳುತ್ತೇವೆಯೋ, ಉದ್ದೇಶಗಳನ್ನು ಹಂಚಿಕೊಳ್ಳುತ್ತೇವೆಯೋ ಹಾಗೆಯೇ ಅದಕ್ಕಿಂತ ಹೆಚ್ಚಿನ ಜವಾಬ್ದಾರಿಯಿಂದ ಸಮಾಜದಲ್ಲಿ ಹೆಣ್ಣು ಮತ್ತು ಗಂಡುಗಳು ಈ ಕ್ರಿಯಾಲೋಚನೆಗಳನ್ನು ಹಂಚಿಕೊಳ್ಳಬೇಕಾದಂತಹ ಅಗತ್ಯವಿದೆ. ಗಂಡು ಹೆಣ್ಣುಗಳ ನಡುವೆ ಪರಸ್ಪರ ನಂಬಿಕೆಯ ಬದುಕು ನೆಲೆಗೊಂಡಾಗ ಮಾತ್ರ ಸ್ತ್ರೀ-ಪುರುಷ ಸಮಾನತೆ ಹಾಗೂ ಕೌಟುಂಬಿಕ ಮತ್ತು ಸಾಮಾಜಿಕ ನೆಮ್ಮದಿ ಸಾಧ್ಯವಾಗುತ್ತದೆ.

ಹೆಣ್ಣು-ಗಂಡುಗಳ ನಡುವೆ ದುಡಿಮೆಯ ಜೀವನದಲ್ಲಿ ಸಾಮರಸ್ಯಗಳು, ಅರ್ಥಗಳು ಇದ್ದಾಗ, ಶ್ರಮದ ದುಡಿಮೆಯಲ್ಲೂ ‘ಕೌಟುಂಬಿಕ ವಿಘಟನೆ’ಯಾಗಲು ಸಾಧ್ಯವಿಲ್ಲ. ಬಡ ಕುಟುಂಬದಲ್ಲಿರುವ ಮಹಿಳೆ ತನ್ನ ತಿಳುವಳಿಕೆಯ ವ್ಯಾಪ್ತಿಯಲ್ಲಿ ದುಡಿಮೆಯನ್ನು ತನ್ನದಾಗಿಸಿಕೊಂಡರೆ ಗೆಲುವನ್ನು ಸಾಧಿಸಬಹುದು. ‘ಹಳ್ಳಿ ಗೆದ್ದು ದಿಲ್ಲಿ ಗೆಲ್ಲಬೇಕು’ ಎನ್ನುವ ಹಾಗೆ ಇಲ್ಲಿಯೇ ಗೆಲ್ಲುವುದಕ್ಕೆ ಸಾಧ್ಯವಾಗದೇ ಇದ್ದರೆ ಮನೆಯನ್ನು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯವಾಗದೇ ಇದ್ದರೆ ಸಮಾನತೆಯನ್ನು ಗಳಿಸುವುದಕ್ಕೆ ಸಾಧ್ಯವಾಗದೇ ಇದ್ದರೆ ದೂರ ದೂರದ ಕ್ಷೇತ್ರಗಳಲ್ಲಿ ಗಳಿಸಿಕೊಳ್ಳುವುದು ಕಷ್ಟ.

ಮಹಿಳೆ ಮತ್ತು ಕಾನೂನು:- ದುಡಿಯುವ ಮಹಿಳೆಯರು ಸರ್ಕಾರ ತಂದಿರುವ ಹಲವಾರು ಯೋಜನೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುವ ಅಗತ್ಯವಿದೆ. ಸಂಘ-ಸಂಸ್ಥೆಗಳು ಹೆಣ್ಣುಮಕ್ಕಳಿಗೆ ಪೂರಕವಾಗಿರುವಂತಹ ಅವರ ಬದುಕಿನ ಮಟ್ಟವನ್ನು ಹೆಚ್ಚಿಸುವುದಕ್ಕೆ ಅಗತ್ಯವಾಗಿರುವಂತಹ ಕಾರ್ಯ ಕಲಾಪಗಳು, ಹೆಣ್ಣಿನ ಚಿಂತನ ಶಕ್ತಿ, ಅಭಿವೃದ್ಧಿ ಯೋಜನೆಗಳು, ಸ್ತ್ರೀ ಶಕ್ತಿ ಈ ರೀತಿ ಹಲವಾರು ರೀತಿಯ ಯೋಜನೆಗಳಿಗೆ ಮಹಿಳೆಯರ ವಿವಿಧ ಸ್ತರಗಳೆನ್ನಬಹುದಾದ ಶಿಕ್ಷಿತ ಮಹಿಳೆಯರು, ಅಶಿಕ್ಷಿತ ಮಹಿಳೆಯರು, ಗ್ರಾಮೀಣ ಮಹಿಳೆಯರು, ನಗರದ ಮಹಿಳೆಯರು, ಗುಡ್ಡಗಾಡಿನ ಮಹಿಳೆಯರು, ಗೃಹಿಣಿಯರು ಇಂತಹ ಸಭೆಗಳಲ್ಲಿ ಭಾಗವಹಿಸಿ ತಿಳುವಳಿಕೆಯನ್ನು ಹೊಂದಿದರೆ ಅವರದೇ ಆದ ಕೆಲವೊಂದು ಸಮಸ್ಯೆಗಳಿಗೆ ಇಲ್ಲಿ ಪರಿಹಾರ ದೊರೆಯಬಹುದು.

ಒಂದು ರಾಷ್ಟ್ರವು ಅಭಿವೃದ್ಧಿಯಾಗಬೇಕಾದರೆ ಸರಿಸುಮಾರು ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಪ್ರತಿಯೊಬ್ಬ ದುಡಿಯುವ ಮಹಿಳೆಯು ಸರ್ಕಾರದ ಕಾರ್ಯಕ್ರಮಗಳಲ್ಲಿ ಕೈ ಜೋಡಿಸಿದರೆ ಸರ್ಕಾರವು ರೂಪಿಸಿಕೊಂಡಿರುವ ಕಾರ್ಯಗಳು, ಕಾನೂನುಗಳು ಜಾರಿಗೆ ಬಂದು ದುಡಿಯುವ ಮಹಿಳೆಗೆ ಸಮಸ್ಯೆಗಳೇ ಇಲ್ಲದಂತಾಗುವುದರಲ್ಲಿ

ಸಂಶಯವಿಲ್ಲ. ನಮ್ಮ ಸಂವಿಧಾನವು ಮಹಿಳೆಯರಿಗೆ ನೀಡಿರುವ ಸಮಾನತೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಅಭಿವೃದ್ಧಿ ಕಾರ್ಯಗಳು 'ಅಭಿವೃದ್ಧಿಯಲ್ಲಿ ಮಹಿಳೆ, ಅಭಿವೃದ್ಧಿ ಮತ್ತು ಮಹಿಳೆ, ಲಿಂಗಬೇಧ ವ್ಯವಸ್ಥೆ ಮತ್ತು ಅಭಿವೃದ್ಧಿ' ಇನ್ನಿತರ ತಾತ್ವಿಕ ನೆಲೆಗಳನ್ನು ಆಧರಿಸಿರುವುದನ್ನು ಗುರುತಿಸಬಹುದು.

ಕಾನೂನು ಮಹಿಳೆಯರಿಗೆ ನೀಡಿರುವ ನೆರವು- "ಸಂವಿಧಾನ ನೀಡಿದ ಹಕ್ಕುಗಳನ್ನು ರಕ್ಷಿಸಲು ಹಾಗೂ ಕಾರ್ಯರೂಪಕ್ಕೆ ತರಲು ಸರ್ಕಾರ ಕೆಲವು ಶಾಸನಗಳನ್ನು ಜಾರಿಗೆ ತಂದಿದೆ"೨. ಅವು ಹೀಗಿವೆ:

1) **ಫ್ಯಾಕ್ಟರಿ ಕಾಯಿದೆ** ೧೯೪೮ (ತಿದ್ದುಪಡಿ ೧೯೭೬)- ಮೂವತ್ತು ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಂಡ ಸ್ಥಳದಲ್ಲಿ ಶಿಶು ಕೇಂದ್ರವನ್ನು ಸ್ಥಾಪಿಸಬೇಕೆಂದು ಹೇಳುತ್ತದೆ.

2) **ಅನೈತಿಕ ವ್ಯವಹಾರ ನಿಗ್ರಹ ಕಾಯಿದೆ** ೧೯೫೬ (ತಿದ್ದುಪಡಿ ೧೯೮೬) - ಈ ಕಾಯಿದೆ ಪುರುಷ ಮತ್ತು ಮಹಿಳೆಯರು ಲೈಂಗಿಕ ಶೋಷಣೆಗೆ ಗುರಿ ಮಾಡಿದರೆ ಅದನ್ನು ಜಾಮೀನುರಹಿತ ಅಪರಾಧವೆಂದು ಹೇಳುತ್ತದೆ.

3) **ಸಮಾನ ವೇತನ ಕಾಯಿದೆ** ೧೯೭೬ - ಸ್ತ್ರೀ-ಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಹೇಳುತ್ತದೆ.

4) **ಹೆರಿಗೆ ಭತ್ಯೆ ಕಾಯಿದೆ** ೧೯೬೧ - ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ನಿರ್ದಿಷ್ಟ ಕನಿಷ್ಠ ದಿನಗಳ ಕಾಲ ಕೆಲಸ ಮಾಡಿದರೆ ಗರ್ಭಿಣಿ ಮಹಿಳೆಗೆ ೯೦ ದಿನಗಳ ವೇತನಸಹಿತ ರಜೆ ನೀಡಬೇಕೆಂದು ಹೇಳುತ್ತದೆ.

5) **ಹಿಂದೂ ಉತ್ತರಾಧಿಕಾರತ್ವ ಕಾಯಿದೆ** ೧೯೫೬ (ತಿದ್ದುಪಡಿ ೧೯೯೪ ಕರ್ನಾಟಕದ ವ್ಯಾಪ್ತಿಗೆ) - ತಂದೆಯ ಸ್ವಯಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಂತೆ ಹೆಣ್ಣುಮಕ್ಕಳಿಗೂ ಸಮನಾಗಿ ಭಾಗ ಪಡೆಯುವ ಹಕ್ಕನ್ನು ನೀಡುತ್ತದೆ. ಇದರ ತಿದ್ದುಪಡಿ ಕರ್ನಾಟಕದಲ್ಲಿ ೧೯೯೪ ರಲ್ಲಿ ಜಾರಿಗೆ ತಂದಿರುವಂತೆ ೧೯೯೪ ರ ಅನಂತರ ವಿವಾಹವಾದ ಹೆಣ್ಣುಮಕ್ಕಳು ಪಿತ್ರಾರ್ಜಿತ ಆಸ್ತಿಯಲ್ಲೂ ಸಮಾನ ಪಾಲು ಪಡೆಯುವ ಹಕ್ಕನ್ನು ಹೊಂದುತ್ತಾರೆ.

6) **ಕುಟುಂಬ ನ್ಯಾಯಾಲಯ ಕಾಯಿದೆ 1984**- ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸಲು ಕುಟುಂಬ ನ್ಯಾಯಾಲಯಗಳು ಈ ಕಾಯಿದೆಯಿಂದ ಸ್ಥಾಪನೆಗೊಂಡಿವೆ.

ಸರ್ಕಾರ ಜಾರಿಗೊಳಿಸಿದ್ದ ಕೆಲವು ಮಹಿಳಾ ಕಾರ್ಯಕ್ರಮಗಳನ್ನು 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ' ಜಾರಿಗೊಳಿಸಲಾರಂಭಿಸಿತು.

1.**ಮಹಿಳೆಯರು ಮತ್ತು ಹುಡುಗಿಯರಿಗೆ ತಾತ್ಕಾಲಿಕ ಆಶ್ರಯ ತಾಣಗಳು**:- ಇದು ೧೯೬೯ ರಲ್ಲಿ ಜಾರಿಗೆ ಬಂದಿತು. ಈ ಯೋಜನೆಯಡಿ ಕುಟುಂಬದ ಸಮಸ್ಯೆಗಳು, ಮಾನಸಿಕ ಒತ್ತಡ, ಸಾಮಾಜಿಕ ಬಹಿಷ್ಕಾರ ಹಾಗೂ ಇತರ ಶೋಷಣೆಗಳಿಂದ ಅಪಾಯಕ್ಕೀಡಾದ ಮಹಿಳೆಯರು ಮತ್ತು ಹುಡುಗಿಯರಿಗೆ ತಾತ್ಕಾಲಿಕ ಆಶ್ರಯತಾಣಗಳನ್ನು ತೆರೆಯಲಾಯಿತು. ಇಲ್ಲಿ ಆಶ್ರಯ ಅರಸಿ ಬಂದವರಿಗೆ ವೈದ್ಯಕೀಯ ಸೌಲಭ್ಯ, ಮಾನಸಿಕ ಚಿಕಿತ್ಸೆ, ಶಿಕ್ಷಣ ಹಾಗೂ ವೃತ್ತಿ ತರಬೇತಿ ಮತ್ತು ಮನರಂಜನೆ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

2) **ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯ**:- ಉದ್ಯೋಗ ಮಾರುಕಟ್ಟೆಯಲ್ಲಿ ಮಹಿಳೆಯರ ಚಲನಶೀಲತೆಯನ್ನು ಹೆಚ್ಚಿಸುವ ಸಲುವಾಗಿ ಸರ್ಕಾರ ೧೯೭೨ ರಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳನ್ನು ತೆರೆಯುವ ಯೋಜನೆಯನ್ನು ಆರಂಭಿಸಿತು. ೧೯೮೫ ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಾರಂಭಗೊಂಡ ಅನಂತರ ಈ ಯೋಜನೆಯನ್ನು ಅದಕ್ಕೆ ವಹಿಸಿಕೊಟ್ಟಿತು. ಇದು ನಗರ - ಪಟ್ಟಣಗಳಿಗೆ ಉದ್ಯೋಗ ನಿಮಿತ್ತ ಬರುವ ಒಂಟಿ ಮಹಿಳೆಯರಿಗೆ ಸುರಕ್ಷಿತ ಮತ್ತು ಕಡಿಮೆ ವೆಚ್ಚದ ವಸತಿ ಸೌಕರ್ಯವನ್ನು ಒದಗಿಸುವ ಗುರಿಯನ್ನು ಹೊಂದಿದೆ. ೫ ಸಾವಿರಕ್ಕಿಂತ ಕಡಿಮೆ ಸಂಚಿತ ವೇತನ ಪಡೆಯುತ್ತಿರುವ ಉದ್ಯೋಗಸ್ಥ ಮಹಿಳೆಯರು ಈ ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹರು.

3) **ಉದ್ಯೋಗಸ್ಥ ಅಥವಾ ರೋಗಪೀಡಿತ ತಾಯಂದಿರ ಮಕ್ಕಳಿಗೆ ಶಿಶುಕೇಂದ್ರ**:- ೧೯೭೫-೭೬ ರಿಂದ ಸರ್ಕಾರ ಈ ಕೇಂದ್ರ ತೆರೆದು ಅವುಗಳನ್ನು ಅಂಗನವಾಡಿ ಕೇಂದ್ರಗಳೆಂದು ಕರೆಯಲಾಗುತ್ತದೆ. ೫ ವರ್ಷ ವಯಸ್ಸಿನ ಮಕ್ಕಳನ್ನು ಹಗಲು ಹೊತ್ತಿನಲ್ಲಿ ನೋಡಿಕೊಳ್ಳುವ ಸೇವೆಯನ್ನು ಒದಗಿಸುತ್ತದೆ. ಅದರಲ್ಲಿ ಆರೋಗ್ಯ ಸೇವೆ, ಪೌಷ್ಟಿಕ ಆಹಾರ ಪೂರೈಸುವುದು, ರೋಗ ನಿರೋಧಕ ಚುಚ್ಚುಮದ್ದು ನೀಡುವುದು, ಆಟ, ಮನರಂಜನೆ ಸವಲತ್ತುಗಳು ಸೇರಿವೆ.

4) **ಮಹಿಳೆಯರಿಗೆ ತರಬೇತಿ ಮತ್ತು ಉದ್ಯೋಗ ಕಾರ್ಯಕ್ರಮ**:- ಇದನ್ನು ೧೯೮೭ ರಲ್ಲಿ ಪ್ರಾರಂಭಿಸಲಾಯಿತು. ಬಡ ಮಹಿಳೆಯರ ಕೌಶಲ್ಯವನ್ನು ವೃದ್ಧಿಗೊಳಿಸಿ ಜಾಗೃತಿ ಮೂಡಿಸುವ ತರಬೇತಿ ನೀಡಿ ಸಾಂಪ್ರದಾಯಿಕ ವಲಯಗಳಾದ ಕೃಷಿ, ಪಶು ಸಂಗೋಪನೆ, ಮೀನುಗಾರಿಕೆ, ಕರಕುಶಲ ಕೈಗಾರಿಕೆ, ರೇಷ್ಮೆ ಸಾಕಣೆ ಇತ್ಯಾದಿಗಳಲ್ಲಿ ಉದ್ಯೋಗಾವಕಾಶಗಳನ್ನು ಪಡೆಯುವಂತೆ ಮಾಡುವುದು ಇದರ ಗುರಿ. ತರಬೇತಿ ಮತ್ತು ಉದ್ಯೋಗದ ಜೊತೆ ಈ ಯೋಜನೆಯು ಮಹಿಳೆಯರಲ್ಲಿ ಲಿಂಗ ತಾರತಮ್ಯ, ಸೂಕ್ಷ್ಮತೆ ಬೆಳೆಸುವ, ಅವರ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗುವಂತೆ ಮಾಡಲು ಬೇಕಾದ ಸೇವಾಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

5) **ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ**:- ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದಲ್ಲಿ ಶೇ.೪೦ ರಷ್ಟು ಯೋಜನೆಗಳನ್ನು ಮಹಿಳೆಯರಿಗೆ ಮೀಸಲಿಟ್ಟರೂ ಈ ಸೌಲಭ್ಯ ಮಹಿಳೆಯರಿಗೆ ತಲುಪದಿದ್ದುದನ್ನು ಕಂಡು ಸರ್ಕಾರ ೧೯೮೨ ರಲ್ಲಿ ಗ್ರಾಮೀಣ ಮಹಿಳೆಯರಿಗಾಗಿ ಮಹಿಳಾ ನಿರ್ದಿಷ್ಟ ಕಾರ್ಯಕ್ರಮ 'ಡ್ವಾಕ್ರಾ' ವನ್ನು ಉಪಯೋಜನೆಯಾಗಿ ಪ್ರಾರಂಭಿಸಿತು. ಮಹಿಳೆಯರು ಕುಟುಂಬದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಅದರಲ್ಲೂ ಮಕ್ಕಳ ಹೊಣೆ ತಾಯಂದಿರ ಮೇಲಿರುತ್ತದೆ. ಕುಟುಂಬದ ನಿರ್ವಹಣೆಗೆ, ಮಕ್ಕಳ ಪಾಲನೆಗೆ ಹೋರಾಟ ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಕುಟುಂಬದ ಪರಿಸ್ಥಿತಿಯನ್ನು ಉತ್ತಮಪಡಿಸಲು ಹಾಗೂ ಮಕ್ಕಳನ್ನು ಒಳ್ಳೆಯ ಪ್ರಜೆಗಳನ್ನಾಗಿ ರೂಪಿಸಲು ಮಹಿಳೆಯರ ಸ್ಥಿತಿಯನ್ನು ಉತ್ತಮಪಡಿಸುವುದು ಅಗತ್ಯ ಎಂದು ಕಂಡುಕೊಂಡ ಸರ್ಕಾರ 'ಡ್ವಾಕ್ರಾ' ಯೋಜನೆಯನ್ನು ಜಾರಿಗೆ ತಂದಿತು. ಇದರ ಮುಖ್ಯ ಉದ್ದೇಶಗಳಿವು:

1) ಗ್ರಾಮೀಣ ಮಹಿಳೆಯರ ಆದಾಯವನ್ನು ಹೆಚ್ಚಿಸುವುದು
2) ಮಹಿಳಾ ಗುಂಪುಗಳ ಮೂಲಕ ಮಹಿಳೆಯರ ಸ್ಥಾನವನ್ನು ಬಲಪಡಿಸುವುದು
3) ಗ್ರಾಮೀಣ ಮಹಿಳೆಯರಿಗೆ ಸಾಮಾಜಿಕ ಸೇವಾ ಸೌಲಭ್ಯಗಳು ದೊರಕುವಂತೆ ಮಾಡುವುದು.

ಒಟ್ಟಿನಲ್ಲಿ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನವನ್ನು ಉತ್ತಮಪಡಿಸುವುದು ಈ ಯೋಜನೆಯ ಗುರಿ.

ಸ್ತ್ರೀ ಶಕ್ತಿ:- ಕರ್ನಾಟಕ ರಾಜ್ಯ ಸರ್ಕಾರ ಸ್ತ್ರೀ-ಶಕ್ತಿ ಎಂಬ ಕಾರ್ಯಕ್ರಮವನ್ನು ೨೦೦೧ ರಲ್ಲಿ ಪ್ರಾರಂಭಿಸಿತು. ಮೊದಲೆರಡು ವರ್ಷಗಳಲ್ಲೇ ಸುಮಾರು ೨೦ ಲಕ್ಷ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ಸುಮಾರು ೧೦೦ ಕೋಟಿ ರೂಪಾಯಿಯನ್ನು ಉಳಿತಾಯ ಮಾಡಿರುವುದು ಸರ್ಕಾರದ ಹಾಗೂ ಮಹಿಳೆಯರ ಕ್ರಾಂತಿಕಾರಕ ಪ್ರಯತ್ನವೇ ಆಗಿದೆ. ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ 'ಸ್ತ್ರೀ ಶಕ್ತಿ'ಯನ್ನು ಅನುಷ್ಠಾನಗೊಳಿಸಲಾಗಿದೆ. ಸ್ತ್ರೀಶಕ್ತಿಯ ಮುಖ್ಯ ಲಕ್ಷಣ 'ಸ್ವಸಹಾಯ' ಗುಂಪಿನ ರಚನೆ. ಸ್ವಸಹಾಯ ಗುಂಪು ಎಂದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಒಂದೆಡೆ ಸೇರಿ ಪರಸ್ಪರ ಸಹಾಯದ ಮೂಲಕ ತಮ್ಮ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಇಚ್ಛೆಯಿಂದ ರಚಿಸಿಕೊಂಡ ಗುಂಪು.

ಸ್ವಸಹಾಯ ಗುಂಪು ರಚಿಸುವಾಗ ಭೂರಹಿತ ಮಹಿಳಾ ಕೃಷಿಕಾರ್ಮಿಕರು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಮಹಿಳೆಯರು, ಮದ್ಯಪಾನ, ಮಾದಕ ವಸ್ತುಗಳನ್ನು ಸೇವಿಸುವ ಅಥವಾ ವಿಕಲಚೇತನ ಪತಿ ಹೊಂದಿದ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಸ್ತ್ರೀಶಕ್ತಿ ಯೋಜನೆಯ

ಅನುಷ್ಠಾನಕ್ಕೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸಮಿತಿಗಳು ಸ್ಥಾಪನೆಗೊಂಡಿವೆ. ರಾಜ್ಯ ಸಂಚಾಲನ ಸಮಿತಿಯಲ್ಲಿ ಮುಖ್ಯಮಂತ್ರಿಗಳು, ಅಧ್ಯಕ್ಷರು, ಮಹಿಳಾ ಮತ್ತು ಅಭಿವೃದ್ಧಿ ಇಲಾಖೆಯ ಸಚಿವರು ಉಪಾಧ್ಯಕ್ಷರಾಗಿದ್ದು ೬ ಇಲಾಖೆಯ ಕಾರ್ಯದರ್ಶಿಗಳು ಸಮಿತಿ ಕಾರ್ಯದರ್ಶಿಗಳಾಗಿರುತ್ತಾರೆ. ಇದಲ್ಲದೆ ಸ್ವಸಹಾಯ ಗುಂಪಿನ ಸದಸ್ಯರಿಗೆ ವಿವಿಧ ಇಲಾಖೆಗಳ ಅಭಿವೃದ್ಧಿ ಸೇವಾ ಸೌಲಭ್ಯಗಳು ಲಾಭ ಪಡೆಯಲು ಅನುವು ಮಾಡಿಕೊಡಲಾಗುವುದು. ಶಿಕ್ಷಣ, ತೋಟಗಾರಿಕೆ, ರೇಷ್ಮೆ, ಕೈಗಾರಿಕೆ, ಗ್ರಾಮೀಣ ಅಭಿವೃದ್ಧಿ ಹಾಗೂ ಆರೋಗ್ಯ ಇಲಾಖೆಗಳ ಕಾರ್ಯಕ್ರಮಗಳು ಗುಂಪಿನ ಸದಸ್ಯರಿಗೆ ತಲುಪುವಂತೆ ನೋಡಿಕೊಳ್ಳಲಾಗುವುದು.

ಸ್ವಸಹಾಯ ಗುಂಪಿನ ಮಹಿಳೆಯರು ಪ್ರತಿ ವಾರ ನಡೆಸುವ ಸಭೆಯಲ್ಲಿ ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಸದಸ್ಯರು ಪ್ರಾರ್ಥನೆ, ಘೋಷಣೆಗಳನ್ನು ಹೇಳಿಸುತ್ತಾರೆ.

1) ನಮ್ಮ ಕುಟುಂಬದಲ್ಲಿ ಮಕ್ಕಳನ್ನು ಗಂಡು ಹೆಣ್ಣು ಎಂಬ ಬೇಧವಿಲ್ಲದೆ ಬೆಳೆಸುತ್ತೇವೆ.

2) ನಮ್ಮ ಹೆಣ್ಣು ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುತ್ತೇವೆ. ಯಾವುದೇ ಕಾರಣಕ್ಕೂ ನಡುವೆ ಶಾಲೆ ಬಿಡಿಸುವುದಿಲ್ಲ.

3) ನಮ್ಮ ಹೆಣ್ಣು ಮಕ್ಕಳಿಗೆ ೧೮ ವರ್ಷದ ಅನಂತರ ಮದುವೆ ಮಾಡುತ್ತೇವೆ

4) ನಮ್ಮ ಮನೆಯ ಅಂಗಳದಲ್ಲಿ ಕಡ್ಡಾಯವಾಗಿ ಎರಡು ಮರಗಳನ್ನು ನೆಡುತ್ತೇವೆ. ನಮ್ಮ ಮನೆಯ ಹಿತ್ತಲಲ್ಲಿ ಹಸಿರುಸೊಪ್ಪು, ತರಕಾರಿ ಬೆಳೆಯುತ್ತೇವೆ.

5) ಮಕ್ಕಳಿಗೆ ನಿಗಧಿತ ಸಮಯದಲ್ಲಿ ಚುಚ್ಚುಮದ್ದು ಹಾಕಿಸಿ, ಯಾವುದೇ ರೀತಿಯ ಅಪೌಷ್ಠಿಕತೆ ಅಥವಾ ಮಾರಕ ರೋಗಗಳು ಬರದಂತೆ ನೋಡಿಕೊಳ್ಳುತ್ತೇವೆ.

ಕಾನೂನಿನ ನೆರವನ್ನು ಪಡೆಯಲು ಮಹಿಳೆಗಿರುವ ಅಡ್ಡಿ-ಆತಂಕಗಳು:- ಸರ್ಕಾರ ಮಹಿಳೆಯರಿಗಾಗಿ ಇಷ್ಟೆಲ್ಲ ಕಾರ್ಯನೀತಿ, ಕಾರ್ಯಕ್ರಮಗಳು, ಕಾಯಿದೆಗಳು ಹಾಗು ಸಂವಿಧಾನ ಭದ್ರತೆ, ಸೇವಾ ಸೌಲಭ್ಯಗಳಿದ್ದರೂ ಇದನ್ನು ಸಂಪೂರ್ಣವಾಗಿ ಪಡೆದುಕೊಳ್ಳುವ ನಿಟ್ಟಿನಲ್ಲಿ ಕೆಲವೊಮ್ಮೆ ಮಹಿಳೆಯರು ನಿಸ್ಸಹಾಯಕರಾಗಿರುವುದನ್ನು ಕಾಣುತ್ತೇವೆ. ಅದಕ್ಕೆ ಕಾರಣಗಳು ಹೀಗಿವೆ:-

1) ಶಿಕ್ಷಣ ಹಾಗೂ ಸಮಾನ ಅರಿವಿನ ಕೊರತೆ ಹಾಗೂ ಸಾಮಾನ್ಯ ಅರಿವಿನ ಕೊರತೆ
2) ಪೂರ್ವಾಗ್ರಹ ಪೀಡಿತರಾಗಿರುವುದು
3) ಮೂಢನಂಬಿಕೆಗೆ ಒಳಗಾಗಿರುವುದು
4) ಮನೆಯಿಂದ ಹೊರಬಂದು ಸಂಘ-ಸಂಸ್ಥೆ, ಸ್ತ್ರೀಶಕ್ತಿ ಜೊತೆ ಬೆರೆಯಲು ಭಯ ಹಾಗೂ ಕೀಳರಿಮೆಯ ಮನೋಭಾವ

5) ಲಿಂಗ ತಾರತಮ್ಯ ವ್ಯವಸ್ಥೆಯ ಕುರುಡುತನ

6) ಪಕ್ಷಪಾತ ಮನೋಭಾವ

7) ಮಾನಸಿಕವಾಗಿ ಆತ್ಮವಿಶ್ವಾಸ, ದೃಢತೆ ಇಲ್ಲದಿರುವುದು

8) ಆರ್ಥಿಕ ಕೊರತೆಯ ಭಯ

9) ನಾಚಿಕೆ, ಸಂಕೋಚ ಪ್ರವೃತ್ತಿ, ಹಿಂಜರಿಕೆ ಮನೋಭಾವ.

ಪರಿಹಾರಗಳು:

1) ಸಾಕ್ಷರತಾ ಆಂದೋಲನ ಕೈಗೊಳ್ಳುವುದರ ಮೂಲಕ ಶಿಕ್ಷಣದ ತಿಳಿವಳಿಕೆ, ಅರಿವನ್ನು ಮೂಡಿಸುವುದು, ಬಡ ಮಹಿಳೆಯರಿಗೆ ಉಚಿತ ತರಬೇತಿ ನೀಡಲು ಉದ್ಯಮ ತರಬೇತಿ ಕೇಂದ್ರಗಳು ಸ್ಥಾಪನೆಯಾಗಬೇಕು.

2) ಪೂರ್ವಾಗ್ರಹ ಪೀಡಿತರನ್ನು, ಮೂಢನಂಬಿಕೆಗೆ ಒಳಗಾದವರನ್ನು ಸರಿದಾರಿಗೆ ತರಲು ಸರ್ಕಾರ ಮನೆ ಮನೆಯಲ್ಲೂ ಇರಬಹುದಾದ ಸಮೂಹ ಮಾಧ್ಯಮದ ಮೂಲಕ ಅವಳಿಗೆ ಅರಿವನ್ನು, ಆತ್ಮವಿಶ್ವಾಸವನ್ನು ಮೂಡಿಸಬಹುದು. ಜೊತೆಗೆ ಭೂಮಿ, ನಿವೇಶನ, ವಿದ್ಯುತ್, ನೀರು, ಶೆಡ್ ಮತ್ತಿತರ ಮೂಲ ಅವಶ್ಯಕತೆಗಳನ್ನು ಮಹಿಳೆಯರಿಗೆ ಒದಗಿಸಿಕೊಡಬೇಕು.

3) ಸಮೂಹ ಮಾಧ್ಯಮದ ಮೂಲಕ ಅನಕ್ಷರಸ್ಥ ಗ್ರಾಮೀಣ ಮಹಿಳೆಯರು ಸ್ತ್ರೀಶಕ್ತಿ ಸಂಘ, ಸ್ವಸಹಾಯ ಸಂಘದಿಂದ ಉನ್ನತ ಮಟ್ಟಕ್ಕೆ ಬಂದ ಸ್ಥಿತಿಯನ್ನು ಅವರ ಮುಖಾಂತರವೇ ಹೇಳಿಸುವ ಕಾರ್ಯಕ್ರಮ ಯೋಜನೆಗಳನ್ನು ಸರ್ಕಾರ ರೂಪಿಸಿಕೊಂಡು ರೇಡಿಯೋ, ಟಿ.ವಿ. ಇನ್ನಿತರ ಹಲವಾರು ಮಾಧ್ಯಮದ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಆಕರ್ಷಕವಾದಂತಹ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳ ವ್ಯಾಪಕ ಪ್ರಚಾರ ಕೈಗೊಳ್ಳಬೇಕು.

4) ಬೀದಿ ನಾಟಕಗಳು, ಸಿನಿಮಾ ನಟ-ನಟಿಯರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡರೆ ಬಹುಶಃ ಇದೂ ಇನ್ನೂ ಹೆಚ್ಚು ಪ್ರಯೋಜನಕಾರಿಯಾಗುತ್ತದೆ.

5) ರಾಜ್ಯ ಸರ್ಕಾರದ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಖಾಸಗಿ ಸಂಘ-ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಆರೋಗ್ಯ ಇಲಾಖೆ, ಮಹಿಳಾ ಸಂಘ-ಸಂಸ್ಥೆಗಳು, ಶಿಕ್ಷಣ ಇಲಾಖೆ ಮುಂತಾದ ಹಲವಾರು ಸಂಸ್ಥೆಗಳು ಈ ಅಭಿವೃದ್ಧಿ ಯೋಜನೆಗೆ ಸರ್ಕಾರದ ಜೊತೆ ಕೈ ಜೋಡಿಸುವ ಪ್ರಯತ್ನ ಮಾಡಬೇಕು.

ಮಹಿಳಾ ಸಂಘದ ಮುಖ್ಯ ಉದ್ದೇಶಗಳು:- ಮಹಿಳೆ ತನ್ನ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ನಡೆಸಲು ತನ್ನ ಕಾರ್ಯಾಚರಣೆಯನ್ನು ವಿಷಯಾಧಾರಿತವಾಗಿ ವರ್ಗೀಕರಿಸಿಕೊಂಡಿದೆ. ಅದರೊಳಗೆ ಪುನಃ ಬೇರೆ ಬೇರೆ ಕಾರ್ಯಗಳಾದ ಶಿಕ್ಷಣ, ಆರ್ಥಿಕತೆ, ಆರೋಗ್ಯ, ಆಡಳಿತ, ಕಾನೂನು ಮತ್ತು ಸ್ವಾವಲಂಬನೆಯನ್ನು ಒಳಗೊಂಡಿದೆ.

1. ಮಹಿಳೆಯರಿಗೆ ಸಾಕ್ಷರತ ಶಿಬಿರ ಏರ್ಪಡಿಸುವುದು, ಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಮತ್ತು ಶಾಲೆಯಲ್ಲಿ ಉಳಿಯುವಂತೆ ನೋಡಿಕೊಳ್ಳುವುದು, ಮಹಿಳಾ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಹುಡುಗಿಯರು ೧೦ನೇ ತರಗತಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡುವುದು. ಶಾಲೆಯಲ್ಲಿ, ಗ್ರಾಮಗಳಲ್ಲಿ ಕುಡಿಯುವ ನೀರು, ಶೌಚಾಲಯ ಸೌಕರ್ಯ, ವಿದ್ಯಾರ್ಥಿವೇತನ, ಆಹಾರ ವಿತರಣೆ, ಇನ್ನಿತರ ಕಾರ್ಯಗಳನ್ನು ಕೈಗೊಳ್ಳುವುದು.

2. ಆರ್ಥಿಕತೆಗೆ ಸಂಬಂಧಿಸಿದಂತೆ ಪ್ರತಿ ಸಂಘದ ಮಹಿಳೆಯರಲ್ಲಿ ಉಳಿತಾಯ ಪ್ರವೃತ್ತಿ ಬೆಳೆಸಿ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಬ್ಯಾಂಕು ಅಥವಾ ಸರ್ಕಾರದ ಕಾರ್ಯಕ್ರಮಗಳಿಂದ ಸಾಲ ಅಥವಾ ಹಣದ ಸಹಾಯ ಪಡೆಯಲು ಅನುಕೂಲ ಮಾಡಿಕೊಡಲಾಗುವುದು.

ಮಹಿಳೆಯ ಮನೋಬಲವನ್ನು ಬೆಳೆಸುವ ಪ್ರೋತ್ಸಾಹದಾಯಕ ಅಂಶಗಳು ಎರಡು:-

1) ಆಂತರಿಕ ಪ್ರೋತ್ಸಾಹದಾಯಕ ಅಂಶಗಳು

2) ಬಾಹ್ಯ ಪ್ರೋತ್ಸಾಹದಾಯಕ ಅಂಶಗಳು

1) ಆಂತರಿಕ ಪ್ರೋತ್ಸಾಯದಾಯಕ ಅಂಶಗಳು:- ಮಹಿಳೆ ತನ್ನಲ್ಲಿರುವ ಪ್ರತಿಭೆ, ಸಾಮರ್ಥ್ಯ ಹಾಗೂ ಕೌಶಲ್ಯವನ್ನು ಗುರುತಿಸಿಕೊಂಡು ಅವುಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳುವುದು, ಆತ್ಮವಿಶ್ವಾಸವನ್ನು ಬೆಳೆಸಿಕ್ಕೊಳ್ಳುವುದು, ಆರ್ಥಿಕವಾಗಿ ಸಬಲರಾಗಬೇಕೆಂಬ ಖಚಿತ ನಿಲುವು ತಾಳುವುದು. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು, ಸಮಾಜಕ್ಕೆ ಕೊಡುಗೆ ನೀಡಬೇಕೆಂಬ ಹಂಬಲ ಬೆಳೆಸಿಕೊಳ್ಳುವುದು, ಗಂಡಾಂತರಗಳನ್ನು ಎದುರಿಸುವ, ಕ್ರಿಯಾತ್ಮಕವಾಗಿ ಹೊಸ ಕಾರ್ಯಗಳಲ್ಲಿ ತೊಡಗುವ ಗುಣ ಉದ್ಯಮವಾಗಿ ಬೆಳೆಯಲು ತುಂಬ ಅಗತ್ಯ.. ಈ ಆಂತರಿಕ ಗುಣಗಳನ್ನು ಹೊರಗಿನಿಂದ ತುಂಬಲು ಸಾಧ್ಯವಿರುವುದಾದರೂ ಅವುಗಳನ್ನು ಹೊಂದುವ ಬೆಳೆಸಿಕೊಳ್ಳುವ ಆಸಕ್ತಿ, ಉತ್ಸಾಹ, ಒತ್ತಾಸೆ ಮಹಿಳೆಯರಿಂದಲೇ ಬರಬೇಕು. ಉದ್ಯಮ ಕಾರ್ಯ ಉದ್ಯಮಿಯಿಂದ ನಿರೀಕ್ಷಿಸುವ ಎಲ್ಲ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಲು ಮಹಿಳೆಯರು ಪ್ರಯತ್ನ ಮಾಡಬೇಕು. ಜ್ಞಾನ, ಮಾಹಿತಿ ಕೌಶಲ್ಯಗಳಿಂದ ತಮ್ಮನ್ನು ತಾವು ಸನ್ನದ್ಧರನ್ನಾಗಿಸಿಕೊಳ್ಳಲು ನಿರಂತರ ಪ್ರಯತ್ನ ಅಗತ್ಯ.

2) ಬಾಹ್ಯ ಪ್ರೋತ್ಸಾಹದಾಯಕ ಅಂಶಗಳು:- ಮಹಿಳೆಯರಲ್ಲಿರುವ ನಿರ್ವಹಣ ಕೌಶಲ್ಯ ಸಾಮರ್ಥ್ಯಗಳೆಲ್ಲವೂ ಕೇವಲ ಕುಟುಂಬ ನಡೆಸುವುದಕ್ಕೆ ಸೀಮಿತಗೊಂಡಿದೆ. ಅದನ್ನು ಅವರ ಆರ್ಥಿಕ ಸ್ವಾವಲಂಬನೆಗೆ ಹಾಗೂ ದೇಶದ ಪ್ರಗತಿಗೆ ಬಳಸಿಕೊಳ್ಳಬೇಕೆಂದರೆ ಅವರಲ್ಲಿ ಅಡಗಿರುವ ಪ್ರತಿಭೆ ಸಾಮರ್ಥ್ಯವನ್ನು ಹೊರತರಲು ಹೊರಗಿನಿಂದ ಪ್ರಯತ್ನಗಳು, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಮಧ್ಯ ಪ್ರವೇಶಿಕೆ ಅವಶ್ಯಕ. ಕುಟುಂಬದ ನೈತಿಕ ಬೆಂಬಲ, ಸರ್ಕಾರದ ಸಹಾಯ ಹಾಗೂ ಪುರುಷರ ಸಹಕಾರ ಉತ್ತೇಜನ ನೀಡುವ ಅಂಶಗಳಾಗಿ ಬರಬೇಕು.

ಸಾಮಾನ್ಯವಾಗಿ ಮಹಿಳೆಯರು ವೇತನ ಸಿಗುವ ಉದ್ಯೋಗಕ್ಕೆ ಹೋಗಲು ಇಚ್ಚಿಸುತ್ತಾರೆ. ಅವರು ಗಂಡಾಂತರಗಳನ್ನು ಎದುರಿಸಲು ಅಥವಾ ಹೆಚ್ಚು ಕ್ರಿಯಾತ್ಮಕವಾಗಿರಲು ಹಿಂಜರಿಯುತ್ತಾರೆ. ಆದರರ್ಥ ಅವರಲ್ಲಿ ಸಾಮರ್ಥ್ಯವಿಲ್ಲವೆಂತಲ್ಲ. ಅವರ ಸಾಮರ್ಥ್ಯವನ್ನು ಹೊರಗೆಡುವುವ ಸೂಕ್ತ ಪರಿಸರವನ್ನು ಸೃಷ್ಟಿಸುವುದು ಅಗತ್ಯ. ಮಹಿಳೆಯರು ಉದ್ಯಮ ನಡೆಸುವುದನ್ನು ಒಂದು ಪರ್ಯಾಯ ಮತ್ತು ಉತ್ತಮ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೇಪಿಸಬೇಕು. ಆಗ ಅವರಲ್ಲಿ ಹುದುಗಿರುವ ಉದ್ಯಮಶೀಲ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬಳಸಿಕೊಳ್ಳಬಹುದು.

ಮಹಿಳೆಯರ ಶಿಕ್ಷಣ ಮಟ್ಟವನ್ನು ಉತ್ತಮಪಡಿಸಬೇಕು. ಒಳ್ಳೆ ಶಿಕ್ಷಣದ ಹಿನ್ನೆಲೆಯಿರುವ ಮಹಿಳೆಯರು ಉದ್ಯಮದಲ್ಲಿ ಏನೇ ಸಮಸ್ಯೆ ಬಂದರೂ ಆತ್ಮವಿಶ್ವಾಸದಿಂದ ಎದುರಿಸಬಲ್ಲರು. ಶಿಕ್ಷಣ ತಾತ್ವಿಕ ನೆಲೆಯನ್ನು ನೀಡುವುದರಿಂದ ವ್ಯಾಪಾರ ವಹಿವಾಟುಗಳನ್ನು ನಡೆಸುವುದು, ಅಧಿಕಾರಿ ಹಾಗೂ ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಹೊಂದುವುದು, ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಮುಂತಾದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಾಗುತ್ತದೆ.

ಮಹಿಳಾ ಉದ್ಯಮಿಗಳ ಕುರಿತು ಸಮಾಜದ ಮನೋಭಾವ ಹಾಗೂ ದೃಷ್ಟಿಕೋನದಲ್ಲಿನ ಬದಲಾವಣೆ, ಮಹಿಳೆಯರಿಗೆ ಸಾಮಾಜಿಕ ಮುಕ್ತ ವಾತಾವರಣವನ್ನು ಒದಗಿಸುವುದು ಇವು ಉದ್ಯಮಶೀಲ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತವೆ.

ಮಹಿಳೆಯರ ದ್ವಿಗುಣ ಕೆಲಸದ ಹೊರೆಯನ್ನು ಕಡಿಮೆ ಮಾಡಬೇಕು. ಮನೆಕೆಲಸಗಳನ್ನು ಹಂಚಿಕೊಳ್ಳುವುದರ ಮೂಲಕ, ಯಂತ್ರಗಳ ಬಳಕೆಯ ಮೂಲಕ ಅವರ ಕೆಲಸದ ಹೊರೆಯನ್ನು ಕಡಿಮೆ ಮಾಡಿದರೆ ಅವರು ಉದ್ಯಮ ಕಾರ್ಯಗಳಲ್ಲಿ ಹೆಚ್ಚು ಕೇಂದ್ರೀಕರಿಸಲು ಸಾಧ್ಯವಾಗುತ್ತದೆ.

ಕುಟುಂಬದಲ್ಲಿ ಉದ್ಯಮಶೀಲ ಮೌಲ್ಯಗಳನ್ನು ಬೆಳೆಸಬೇಕು. ಇದರಿಂದ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಈ ಉದ್ಯಮಶೀಲ ಗುಣವೂ ಬೆಳೆಯುತ್ತಾ ಹೋಗುತ್ತದೆ. ಮಹಿಳೆಯರು ಉದ್ಯಮಕ್ಷೇತ್ರವನ್ನು ಪ್ರವೇಶಿಸುವ ಮೊದಲು ಔಪಚಾರಿಕ ತರಬೇತಿ ಅವಶ್ಯಕ. ಉದ್ಯಮಿಗಳಾದ ಅನಂತರವೂ ತಮ್ಮ ಕೌಶಲ್ಯ ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಆಗಾಗ್ಗೆ ತರಬೇತಿ ಶಿಬಿರಗಳಲ್ಲಿ ಭಾಗವಹಿಸುತ್ತಿರಬೇಕು. ಮಹಿಳಾ ಉದ್ಯಮಿಗಳ ಯಶಸ್ಸು ಇತರ ಮಹಿಳೆಯರಿಗೆ ಮಾದರಿ ಅಥವಾ ಪ್ರೇರಕ ಅಂಶವಾಗಿರಬೇಕು. ಯಶಸ್ವಿ ಮಹಿಳಾ ಉದ್ಯಮಿಗಳನ್ನು ಗುರುತಿಸಿ, ಪ್ರಶಂಸಿಸಿ ಅವರ ಬಗ್ಗೆ ಪ್ರಚಾರ ಮಾಡಬೇಕು.

ಸರ್ಕಾರದ ಶಿಕ್ಷಣ ಸಂಸ್ಥೆಗಳು, ಆಡಳಿತ ಮತ್ತು ನಿರ್ವಹಣಾ ಶಿಕ್ಷಣ ಸಂಸ್ಥೆಗಳು ಮಹಿಳೆಯರಿಗಾಗಿ ವಿಶೇಷ ಕೋರ್ಸುಗಳನ್ನು ತೆರೆಯಬೇಕು ಅಥವಾ ಇರುವ ಕೋರ್ಸುಗಳಲ್ಲಿ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡುವಂತಾಗಬೇಕು. ಉದ್ಯಮಕ್ಕೆ ಸಂಬಂಧಪಟ್ಟ ಬಿ.ಬಿ.ಎಂ. ಎಂ.ಬಿ.ಎ. ಮುಂತಾದ ಕೋರ್ಸುಗಳಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಿರುವುದು ಕಂಡುಬರುತ್ತದೆ. ಇಲ್ಲಿ ಅವರ ಪ್ರಮಾಣ ಹೆಚ್ಚಾಗಿ ಕೋರ್ಸು ಪಡೆದ ಅನಂತರ ನೇರವಾಗಿ ಉದ್ಯಮದ ಕಾರ್ಯವನ್ನು ಕೈಗೊಳ್ಳುವಂತಾಗಬೇಕು.

ಬ್ಯಾಂಕು, ಹಣಕಾಸು ಸಂಸ್ಥೆಗಳಲ್ಲಿ ಹಾಗೂ ಸರ್ಕಾರದ ಯೋಜನೆಗಳಿಂದ ಹಣದ ಸಹಾಯ ಪಡೆಯಲು ಇರುವ ನೀತಿ ನಿಯಮಾವಳಿಗಳು ಸರಳಗೊಂಡು ಮಹಿಳೆಯರಿಗೆ ಹಣದ ಸೌಲಭ್ಯ ಸುಲಭವಾಗಿ ಸಿಗುವಂತಾಗಬೇಕು. ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವಂತಾಗಬೇಕು. ಸರ್ಕಾರ ನೀಡುವ ಸೌಲಭ್ಯಗಳನ್ನು ಪಡೆಯುವಲ್ಲಿ ಇರುವ ತೊಂದರೆಗಳು ನಿವಾರಣೆಯಾಗಬೇಕು. ಇಲಾಖೆಗಳಿಂದ ದೊರೆಯುವ ಮಂಜೂರಾತಿ, ಅನುಮತಿ ವಿಲೇವಾರಿ ಮುಂತಾದವುಗಳು ನಿರ್ದಿಷ್ಟ ಅವಧಿಯೊಳಗೆ ತೀರುವಳಿಯಾಗಬೇಕು. ಇವುಗಳಿಗಾಗಿ ಮಹಿಳೆಯರು ಅಲೆಯುವುದು, ಕಾಯುವುದು ಅಥವಾ ಕಿರುಕುಳಕ್ಕೊಳಗಾಗುವಂತಾಗಬಾರದು.

ಮಹಿಳೆಯರಿಗಾಗಿ ಇರುವ ಯೋಜನೆಗಳು ಲಂಚ, ಕಮೀಷನ್‌ಗಳು ಕಾಟವಿಲ್ಲದೆ ಆದ್ಯತೆ ಮೇರೆಗೆ ಸುಲಭವಾಗಿ ಶೀಘ್ರವಾಗಿ ಜಾರಿಗೊಳ್ಳುವಂತಾಗಬೇಕು. ಮೇಳ, ಪ್ರದರ್ಶನ, ತೆರಿಗೆ ರಿಯಾಯಿತಿ ಮುಂತಾದವುಗಳ ಮೂಲಕ ಉತ್ತಮ ಮಾರುಕಟ್ಟೆ ವ್ಯವಸ್ಥೆಯಾಗಬೇಕು. ಸರ್ಕಾರದ ಇಲಾಖೆಗಳು ವಸ್ತುಗಳನ್ನು ಖರೀದಿ ಮಾಡುವಾಗ ಮಹಿಳಾ ಉದ್ಯಮಿಗಳು ತಯಾರಿಸಿದ ವಸ್ತುಗಳಿಗೆ ಆದ್ಯತೆ ನೀಡಬೇಕು.

ಅಧಿಕಾರಿಗಳು ಮಹಿಳಾ ಉದ್ಯಮಿಗಳ ಕುರಿತು ವೃತ್ತಿಪರ ಧೋರಣೆ, ಮನೋಭಾವ ಹೊಂದಿರಬೇಕು. ಅವರುಗಳ ಅಧಿಕೃತ ಮಧ್ಯ ಪ್ರವೇಶಿಕೆ ಆದಷ್ಟು ಕಡಿಮೆಯಿರಬೇಕು.ಉತ್ತಮ ಆಡಳಿತ ಸಿಬ್ಬಂದಿ ಹಾಗೂ ಕಾರ್ಮಿಕ ವರ್ಗವನ್ನು ಹೊಂದುವುದು ಮಹಿಳಾ ಉದ್ಯಮಿಗಳಿಗೆ ಬಾಹ್ಯ ಪ್ರೋತ್ಸಾಹದಾಯಕ ಅಂಶವಾಗಿದೆ.ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಉದ್ಯಮ ಕ್ಷೇತ್ರವನ್ನು ಪ್ರವೇಶಿಸಬೇಕು. ಮಹಿಳೆಯರು ಉದ್ಯಮವನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸಬಹುದು ಎಂಬ ಅರಿವನ್ನು ಒಂದು ಜನಾಂದೋಲನವಾಗಿ ಮೂಡಿಸಬೇಕು. ಬಡ ಮಹಿಳೆಯರಿಗೆ ಉಚಿತ ತರಬೇತಿ

ನೀಡಲು ಉದ್ಯಮ ತರಬೇತಿ ಕೇಂದ್ರಗಳು ಸ್ಥಾಪನೆಯಾಗಬೇಕು. ಆಕರ್ಷಕವಾದಂತಹ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಭೂಮಿ, ನಿವೇಶನ, ವಿದ್ಯುತ್, ನೀರು, ಶೆಡ್ ಮತ್ತಿತರೆ ಮೂಲಭೂತ ಅವಶ್ಯಕತೆಗಳನ್ನು ಮಹಿಳೆಯರಿಗೆ ಆದ್ಯತೆ ಮೇಲೆ ಒದಗಿಸಿಕೊಡಬೇಕು. ಪರಿಸರ ಮಾಲಿನ್ಯರಹಿತ ಉತ್ಪಾದನಾ ಘಟಕವಾಗಿದ್ದರೆ ಮಹಿಳೆಯರು ಮನೆಯಿಂದಲೇ ಉದ್ಯಮವನ್ನು ನಡೆಸಲು ಅನುಮತಿ ಸಿಗುವಂತಾಗಬೇಕು.

ಭಾರತದಲ್ಲಿ ಮಹಿಳಾ ಕಲ್ಯಾಣ ಅಭಿವೃದ್ಧಿ-ಮಹಿಳಾ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮಗಳು ಮುಖ್ಯವಾಗಿ ಮೂರು ಸಂಗತಿಗಳಿಗೆ ಆದ್ಯತೆ ನೀಡಿದೆ.

1. ಶಿಕ್ಷಣ 2. ಸಾಮಾಜಿಕ ಕಲ್ಯಾಣ. 3. ಆರೋಗ್ಯ

ಈ ಎಲ್ಲ ವಲಯಗಳನ್ನು ಸೇರಿಸಿಕೊಂಡು ಮಹಿಳಾ ಕಲ್ಯಾಣ ಕಾರ್ಯಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು.

1. **ಶಾಸನಬದ್ಧ ಮಹಿಳಾ ಕಲ್ಯಾಣ ಕಾರ್ಯಕ್ರಮಗಳು**: ಅನೈತಿಕ ಮತ್ತು ವೇಶ್ಯಾಗಾರಿಕೆ ನಿಯಂತ್ರಣ ಕಾನೂನಿನಲ್ಲಿ ಬಂಧಿತರಾದ ಮಹಿಳೆಯರನ್ನು ಹಾಗು ಬಾಲಕಿಯರನ್ನು ಪುನರ್‌ವಸತಿಗಾಗಿ ವಿಶೇಷ ಸಂಸ್ಥೆಗಳಲ್ಲಿ ಇಡುವುದು. ಹೆರಿಗೆ ಭತ್ಯೆ ಕಾಯಿದೆ ಪ್ರಕಾರ ರಜೆ ಸೌಲಭ್ಯ ಮತ್ತು ಇತರೆ ಅನುಕೂಲಗಳನ್ನು ಒದಗಿಸುವುದು. ಕಾರ್ಮಿಕ ಕಾಯಿದೆಗಳ ಪ್ರಕಾರ ಸಂಘಟಿತ ಉದ್ದಿಮೆಗಳಲ್ಲಿ ದುಡಿಯುವ ಮಹಿಳೆಯರಿಗೆ ಕಲ್ಯಾಣ ಸೌಲಭ್ಯಗಳನ್ನು ಮತ್ತು ಶಿಶುಪಾಲನಾ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ.

2. **ಅಭಿವೃದ್ಧಿ ಕಾರ್ಯಕ್ರಮಗಳು** : ಈ ಬಗೆಯಲ್ಲಿ ಅನೇಕ ಕಾರ್ಯಕ್ರಮಗಳಿವೆ. ಶಿಕ್ಷಣ, ಆರೋಗ್ಯ, ಹೆರಿಗೆ, ಶಿಶುಕಲ್ಯಾಣ, ಕುಟುಂಬ ಯೋಜನೆ, ಪೌಷ್ಠಿಕ ಆರೋಗ್ಯ, ಸ್ವಯಂ ಉದ್ಯೋಗ ತರಬೇತಿ ಇತ್ಯಾದಿ.

3. **ವಿಶೇಷ ವರ್ಗಗಳಿಗೆ ಕಾರ್ಯಕ್ರಮಗಳು**: ವಿಶೇಷ ಸಮಸ್ಯೆಗಳಿಂದ ಜರ್ಜರಿತರಾದ ಕೆಲವು ವರ್ಗಗಳಿಗೆ ಸೌಲಭ್ಯ ಒದಗಿಸುವ ಕಾರ್ಯಕ್ರಮಗಳಿಗೆ ವಿಧವೆಯರು, ವೃದ್ಧರು, ನಿರ್ಗತಿಕರು ಮುಂತಾದವರಿಗೆ ವಿಮಾ ವೇತನ ನೀಡುವುದು ಅಥವಾ ವಿಶೇಷ ಆಶ್ರಯ ಗೃಹಗಳನ್ನು ಸ್ಥಾಪಿಸುವುದು, ದುಡಿಯುವ ಮಹಿಳೆಯರಿಗೆ ವಸತಿ ಸೌಲಭ್ಯ ಒದಗಿಸುವುದು, ಪರಿಶಿಷ್ಟ ಗುಂಪಿನ ವಿದ್ಯಾರ್ಥಿಯನಿಯರಿಗೆ ವಿದ್ಯಾರ್ಥಿ ವೇತನ ನೀಡುವುದು, ವಿದ್ಯಾರ್ಥಿನಿ ನಿಲಯಗಳನ್ನು ಸ್ಥಾಪಿಸುವುದು, ಆಶ್ರಮ ಶಾಲೆಗಳ ಸ್ಥಾಪನೆ, ಉಚಿತ ವಸತಿ ಶಾಲೆಗಳ ಸ್ಥಾಪನೆ ಇತ್ಯಾದಿಗಳು.

ಮಹಿಳಾ ಕಲ್ಯಾಣ, ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಎಲ್ಲಾ ರಾಜ್ಯಗಳಲ್ಲೂ ಏಕರೂಪಿಯಾಗಿಲ್ಲ. ಈ ಕಾರ್ಯಕ್ರಮಗಳ ಸ್ವರೂಪ ಯೋಜನೆಗಳಿಂದ ಯೋಜನೆಗೆ ಬರಲಾಗುತ್ತಾ ನಡೆದಿವೆ.

ಮಹಿಳೆ ಮತ್ತು ಪಂಚವಾರ್ಷಿಕ ಯೋಜನೆಗಳು : ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಕಲ್ಯಾಣ ರಾಜ್ಯವೊಂದನ್ನು ಸ್ಥಾಪಿಸುವ ಘನ ಉದ್ದೇಶವನ್ನು ಹೊಂದಿದೆ. ಸ್ವಾತಂತ್ರ್ಯಾ ನಂತರದ ಮೂರು ದಶಕಗಳಲ್ಲಿ ಸಾರ್ವಜನಿಕ ನೀತಿ-ನಿರೂಪಣೆಯನ್ನು, ಕಾರ್ಯಕ್ರಮಗಳನ್ನು ನಿರ್ಧರಿಸುತ್ತಾ ಬಂದಿರುವ ಸಂಗತಿಯೆಂದರೆ ಪಂಚವಾರ್ಷಿಕ ಯೋಜನೆಗಳು. ಈ ಯೋಜನೆಗಳಲ್ಲಿ ಮಹಿಳೆಯರು ಅವರ ದುಡಿಮೆ, ಅವರ ಬದುಕಿಗೆ ಆದ್ಯತೆ ಕೊಡುವುದರ ಜೊತೆಗೆ ಭಾರತದಲ್ಲಿ ಅನಿರ್ಬಂಧಿತವಾಗಿ ಮುಂದುವರಿದಿರುವ ಲಿಂಗ ಸಂಬಂಧಿ ತಾರತಮ್ಯ ಮತ್ತು ಶೋಷಣೆಯನ್ನು ಅರ್ಥಮಾಡಿಕೊಳ್ಳಲು ನಾವು ಪಂಚವಾರ್ಷಿಕ ಯೋಜನೆಗಳನ್ನು ಲಿಂಗಸಂಬಂಧಿ ನೆಲೆಯಿಂದ ವಿಮರ್ಶೆ ಮಾಡಬೇಕಾಗುತ್ತದೆ.

ಮೊದಲ ಪಂಚವಾರ್ಷಿಕ ಯೋಜನೆಯ ಶಿಶುಗಳ ಹಾಗೂ ತಾಯಂದಿರ ಅಧಿಕ ಮರಣ ಪ್ರಮಾಣಕ್ಕೆ ಅಪೌಷ್ಟಿಕತೆಯೇ ಮುಖ್ಯ ಕಾರಣವೆಂದು ಗುರುತಿಸಿತು. ಅದಕ್ಕಾಗಿ ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಯಿತು. ತಾಯಿ ಮತ್ತು ಮಕ್ಕಳ ಆರೋಗ್ಯ ಕೇಂದ್ರ ಸ್ಥಾಪನೆಗೆ ಕ್ರಮತೆಗೆದುಕೊಳ್ಳಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ನೀಡಿತು. ಆರೋಗ್ಯ ಕಾರ್ಯಕ್ರಮದಲ್ಲಿ ಮಕ್ಕಳ ಮತ್ತು ತಾಯಿಯರ ಆರೋಗ್ಯಕ್ಕೆ ಒತ್ತು ಕೊಡುವುದಕ್ಕೆ ಪ್ರತಿಯಾಗಿ ಕುಟುಂಬ ಯೋಜನೆಗೆ ಹೆಚ್ಚು ಗಮನ ನೀಡಲಾಯಿತು.

ಮೂರನೆಯ ಪಂಚವಾರ್ಷಿಕ ಯೋಜನೆಯು ಬಾಲಕಿಯರ ಶಿಕ್ಷಣ ಹಾಗೂ ತಾಯಿ-ಮಗುವಿನ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿತು. ಗ್ರಾಮೀಣ ಪ್ರದೇಶದಲ್ಲಿ ಕಲ್ಯಾಣ ಕಾರ್ಯಕ್ರಮವನ್ನು ವಿಸ್ತರಿಸುವುದಕ್ಕೆ ಹಾಗೂ ವಯಸ್ಕ ಮಹಿಳೆಯರಿಗೆ ಶಿಕ್ಷಣ ಕಾರ್ಯಕ್ರಮಕ್ಕೆ ನೀಡಲಾಯಿತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಬಾಲಕಿಯರ ಶಿಕ್ಷಣದ ಮಹತ್ವಕ್ಕೆ ಒತ್ತು ನೀಡಿತು. ಸಮಾಜ ಕಲ್ಯಾಣವನ್ನು ಕುರಿತಂತೆ ಯೋಜನೆಯು ಸ್ವಯಂ ಸೇವಾ ಸಂಸ್ಥೆಗಳಿಗೆ ಅದರ ಜವಾಬ್ದಾರಿಯನ್ನು ವಹಿಸುವುದರ ಬಗ್ಗೆ ಹೆಚ್ಚು ಆಸಕ್ತಿ ತೋರಿತು. ಸರ್ಕಾರವು ಕೇವಲ ಅನಾಥ ಹೆಣ್ಣು ಮಕ್ಕಳನ್ನು ನೋಡಿಕೊಳ್ಳುವ ಸಂಸ್ಥೆಗಳನ್ನು ಮತ್ತು ವೇಶ್ಯಾವಾಟಿಕೆಯಿಂದ ರಕ್ಷಿಸಿಕೊಂಡು ಬಂದ ಮಹಿಳೆಯರ ಪುನರ್ವಸತಿ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತಾ ಬಂದಿದೆ.

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರಿಗೆ ಕೇವಲ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಕಡಿಮೆ ವರಮಾನವುಳ್ಳ ಮಕ್ಕಳನ್ನು ಸಾಕುವ ಜವಾಬ್ದಾರಿ ಹೊತ್ತ ದುಡಿಯುವ ಹೆಣ್ಣು ಮಕ್ಕಳಿಗೆ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡಲಾಯಿತು. ಗೃಹವಾರ್ತೆಯನ್ನು ಅಂದರೆ ಶಿಶುಪಾಲನೆ, ಪೌಷ್ಠಿಕ ಆಹಾರದ ತಯಾರಿಕೆ, ಆರೋಗ್ಯ ನಿರ್ವಹಣೆ, ಮನೆಯ ಖರ್ಚು-ವೆಚ್ಚಗಳ ನಿರ್ವಹಣೆ ಮುಂತಾದವುಗಳನ್ನು ಸಮರ್ಥವಾಗಿ ನಿರ್ವಹಿಸಲು ಗೃಹಿಣಿಗೆ ಅಗತ್ಯವಾದ ಶಿಕ್ಷಣ ಒದಗಿಸುವ ಕಾರ್ಯಕ್ರಮವನ್ನು ಇಲ್ಲಿ ಹಮ್ಮಿಕೊಳ್ಳಲಾಯಿತು. ಗೃಹಕೈಗಾರಿಕೆ, ಗ್ರಾಮೀಣ ಕೈಗಾರಿಕೆ, ಕರಕುಶಲ ಕಲೆಯಲ್ಲಿ ನಿರತರಾದ ಮಹಿಳೆಯರು ತಯಾರಿಸಿದ ಸರಕುಗಳ ಮಾರಾಟದ ವ್ಯವಸ್ಥೆಯನ್ನು ನೋಡಿಕೊಳ್ಳುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಆರನೆಯ ಪಂಚವಾರ್ಷಿಕ ಯೋಜನೆ : ಈ ಯೋಜನೆ ರೂಪುಗೊಳ್ಳುವ ಸಮಯಕ್ಕಾಗಲೆ ಭಾರತದಲ್ಲಿ ಮಹಿಳಾಶಕ್ತಿ ನಿರ್ಣಾಯಕ ಸ್ಥಾನವನ್ನು ಪಡೆದುಕೊಂಡಿತ್ತು. ಈ ಯೋಜನೆಯ ಅಡಿಯಲ್ಲಿ 'ಮಹಿಳೆ ಮತ್ತು ಅಭಿವೃದ್ಧಿ' ಎಂಬ ಅಧ್ಯಾಯವನ್ನು ಕರಡಿನಲ್ಲಿ ಸೇರಿಸಲಾಯಿತು. 'ಮಹಿಳೆಯರು ಸ್ವತಂತ್ರವಾಗಿ ದುಡಿಯುವ ಅವಕಾಶಗಳನ್ನು ಹಾಗೂ ವರಮಾನ ಗಳಿಸುವ ಅವಕಾಶಗಳನ್ನು ವರ್ಧಿಸದೆ ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಾನ-ಮಾನವನ್ನು ಉತ್ತಮಪಡಿಸಲು ಸಾಧ್ಯವಿಲ್ಲ.' ಎಂದು ಗುರುತಿಸಿದ ಯೋಜನೆಯು 'ಅವರ ಬದುಕು ಉತ್ತಮಗೊಳ್ಳಲು ಅವರ ಸಾಮಾಜಿಕ ಹಾಗೂ ಆರ್ಥಿಕ ಸಹಭಾಗಿತ್ವವನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗಬೇಕು' ಎಂದು ಹೇಳಿತು.

ಆರನೆಯ ಪಂಚವಾರ್ಷಿಕ ಯೋಜನೆಯು ಕೊನೆಗೊಳ್ಳುವ ಹಂತದಲ್ಲಿ ಸರಿಯಾಗಿ ೧೯೮೫ ರಲ್ಲಿ ಸರ್ಕಾರವು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಪ್ರಾರಂಭಿಸಿತು. ಮಹಿಳಾ ಕಲ್ಯಾಣ ಮತ್ತು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಭಾಗಕ್ಕೆ ವಹಿಸಿಕೊಡಲಾಯಿತು. ಈ ವಿಭಾಗವು ಐದು ಉದ್ದೇಶಗಳನ್ನಿಟ್ಟುಕೊಂಡು ಮಹಿಳೆಯರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.

1) ಉದ್ಯೋಗದ ಅವಕಾಶಗಳನ್ನು ವಿಸ್ತರಿಸುವುದು ಹಾಗೂ ವರಮಾನ ಗಳಿಸುವ ಅವಕಾಶ ಒದಗಿಸುವುದು.
2) ಶಿಕ್ಷಣ ಮತ್ತು ತರಬೇತಿ ಒದಗಿಸುವುದು.
3) ಲಿಂಗ ಸಂಬಂಧಿಗಳ ಬಗ್ಗೆ ತಿಳುವಳಿಕೆ ಮತ್ತು ಜಾಗೃತಿ ಮೂಡಿಸುವುದು.
4) ಮಹಿಳೆಯರ ಅಭಿವೃದ್ಧಿಗಾಗಿ ಪೂರಕ ಸೌಲಭ್ಯಗಳನ್ನು ಒದಗಿಸುವುದು.
5) ಕಾನೂನಿನ ಬೆಂಬಲ ಒದಗಿಸುವುದು.

ಮಹಿಳೆಯರಿಗೆ ಶಾಸನಾತ್ಮಕ ರಕ್ಷಣೆ : ಸಂವಿಧಾನದ ಪರಿಚ್ಛೇದದ ೧೫ ರಲ್ಲಿ ಮಹಿಳೆಯರ ಮತ್ತು ಪರಿಶಿಷ್ಟ ಜನ, ವರ್ಗದ ಕಲ್ಯಾಣ ಮತ್ತು ಪ್ರಗತಿಯನ್ನು ಸಾಧಿಸಲು ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ನೀಡಲಾಗಿದೆ. ಅನೇಕ ಅಂತಹ ಶಾಸನಗಳು ಕಳೆದ ೫೦ ವರ್ಷಗಳಲ್ಲಿ ಜಾರಿಗೆ ಬಂದಿದೆ.

ಬೀಜಿಂಗ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ಸಮಾವೇಶದಲ್ಲಿ ಮಂಡಿಸಲು ಭಾರತವು ಸಿದ್ಧಪಡಿಸಿದ ಕಂಟ್ರಿ ರಿಪೋರ್ಟ್‌ನಲ್ಲಿ ಅಂತಹ "೧೫ ಶಾಸನ"ಃ ಗಳನ್ನು ಪಟ್ಟಿ ಮಾಡಲಾಗಿದೆ. ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ರಕ್ಷಿಸಲು ರೂಪಿಸಲಾದ ಕಾಯಿದೆಗಳು ಅವುಗಳೆಂದರೆ:-

೧) ವಿಶೇಷ ವಿವಾಹ ಕಾಯಿದೆ ೧೯೫೪

೨) ಹಿಂದೂ ವಿವಾಹ ಕಾಯಿದೆ ೧೯೫೫

೩) ಹಿಂದೂ ಉತ್ತರಾಧಿಕಾರಿ ಕಾಯಿದೆ ೧೯೫೬

೪) ಕುಟುಂಬ ನ್ಯಾಯಾಲಯ ಕಾಯಿದೆ ೧೯೫೪

೫) ಕ್ರಿಮಿನಲ್ ಕಾನೂನು (ತಿದ್ದುಪಡಿ) ಕಾಯಿದೆ ೧೯೮೩

೬) ಅನೈತಿಕ ವ್ಯಾಪಾರ ತಡೆಗಟ್ಟುವ ಕಾಯಿದೆ ೧೯೮೬.

೭) ವರದಕ್ಷಿಣೆ ನಿಷೇಧ ಕಾನೂನು ಕಾಯಿದೆ ೧೯೬೧

೮) ಬಾಲ್ಯ ವಿವಾಹ ತಡೆಗಟ್ಟುವ ಕಾಯಿದೆ ೧೯೭೬

೯) ಸಮಾನ ವೇತನ ಕಾಯಿದೆ ೧೯೭೬

೧೦) ಪ್ರ್ಯಾಕ್ಟರೀಸ್ ಆಕ್ಟ್ (ತಿದ್ದುಪಡಿ) ೧೯೮೬

೧೧) ಪ್ಲಾಂಟೇಷನ್ ಕಾರ್ಮಿಕರ ಕಾಯಿದೆ ೧೯೫೧

೧೨) ಉದ್ಯೋಗಿಗಳ ರಾಜ್ಯ ವಿಮಾ ಕಾಯಿದೆ ೧೯೪೮

೧೩) ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇದ) ಕಾಯಿದೆ ೧೯೭೬

೧೪) ದಿ ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ ಆಕ್ಟ್ ೧೯೭೧

೧೫) ದಿ ಇನ್‌ಡೀಸೆಂಟ್ ರೆಪ್ರೆಸೆಂಟೇಶನ್ ಆಫ್ ವುಮೆನ್ (ನಿಷೇಧ) ಆಕ್ಟ್ ೧೯೮೬

ಸಬಲೀಕರಣ ತತ್ವ ಮತ್ತು ಸಬಲೀಕರಣ ಕಾರ್ಯಕ್ರಮಗಳು :

ಮಾಲೀಕತ್ವದ ವ್ಯಾಪ್ತಿಯನ್ನು ಮೀರಿ, ವರ್ಗ ವೈರುದ್ಯಗಳನ್ನು ಮೀರಿ ಶೋಷಣೆ-ಹಿಂಸೆ ನಡೆಯಬಹುದು ಎಂಬುದು ೮೦ ರ ದಶಕದಲ್ಲಿ ಸ್ಪಷ್ಟವಾಗತೊಡಗಿತು. ಅಧಿಕಾರ ಸಂಬಂಧಗಳಲ್ಲಿನ

ಶಕ್ತಿ ಸಮತೋಲದಲ್ಲಿನ ವಿಕೃತಿಗಳಿಂದ ಬಡವರ ಮಹಿಳೆಯರ ಬದುಕನ್ನು ಉತ್ತಮ ಪಡಿಸಬೇಕೆಂಬ ಘನವಾದ ಉದ್ದೇಶದಿಂದ ಹೊರಟ ಕಾರ್ಯಕ್ರಮಗಳು ಹೇಗೆ ಅವರ ಬದುಕನ್ನು ನರಕವನ್ನಾಗಿಸಿವೆ ಎಂಬ ಸಂಗತಿ ಜನತೆಯ ಎದುರಿಗಿತ್ತು. ಈ ಹಿನ್ನೆಲೆಯಲ್ಲಿ 'ಸಬಲೀಕರಣ' ಎಂಬ ಪರಿಭಾವನೆ, ಸಬಲೀಕರಣ ಕಾರ್ಯಕ್ರಮಗಳು ಹುಟ್ಟಿಕೊಂಡವು. ಬಡವರ ಸಬಲೀಕರಣ, ಮಹಿಳೆಯರ ಸಬಲೀಕರಣ, ಗ್ರಾಮಪಂಚಾಯಿತಿಗಳ ಸಬಲೀಕರಣ ಎಂಬ ನುಡಿಗಳು ಇಂದು ವ್ಯಾಪಕವಾಗಿ ಚಾಲ್ತಿಗೆ ಬಂದಿವೆ.

ಸಬಲೀಕರಣವು ಕೆಳಗಿನ ಸಂಗತಿಗಳನ್ನು ಒಳಗೊಂಡಿದೆ.

1) ಮಹಿಳೆಯರಿಗೆ ಪರವಾದ ನಿಲುವನ್ನು ಬಹಿರಂಗವಾಗಿ ಘೋಷಿಸುವುದು.
2) ಲಿಂಗ ಸಂಬಂಧಗಳನ್ನು ಸಾಮಾಜಿಕವಾಗಿ ಕಟ್ಟಿಕೊಂಡ ಸಂಗತಿಯೆಂದು ಪ್ರತಿಪಾದಿಸುವುದು.
3) ಲಿಂಗಸಂಬಂಧಗಳನ್ನು ಬದಲಾಯಿಸುವುದು ಸಾಧ್ಯ ಎನ್ನುವುದನ್ನು ನಂಬುವುದು.
4) ವರ್ಗ, ಜನಾಂಗ, ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಲಿಂಗ ಸಂಬಂಧಗಳು ಒಳಗೊಂಡಿವೆ ಎಂದು ಪ್ರತಿಪಾದಿಸುವುದು.
5) ಲಿಂಗಸಂಬಂಧಗಳನ್ನು ಕುರಿತಂತೆ ಪರ್ಯಾಯ ಸಂಕಥನಗಳನ್ನು ಕಟ್ಟುವುದು.
6) ಮಹಿಳೆಯರ ಸ್ಥಾನಮಾನ ಮತ್ತು ಸ್ಥಿತಿ-ಗತಿಗಳನ್ನು ವಿಶ್ಲೇಷಿಸುವುದು.

ಸಬಲೀಕರಣವು ಮುಖ್ಯವಾಗಿ ಕೆಳಕಂಡ ನೆಲೆಯಲ್ಲಿ ಕೆಲಸ ಮಾಡುತ್ತದೆ.

1) ಮಹಿಳೆಯರು ತಮ್ಮ ತಮ್ಮ ಸ್ಥಿತಿಯನ್ನು ಗುರುತಿಸಿಕೊಳ್ಳುವುದು.
2) ತನ್ನ ಅಧೀನ ಸ್ಥಿತಿಗೆ ಕಾರಣವಾದ ಸಂಗತಿಗಳನ್ನು ಅರಿತುಕೊಳ್ಳುವುದು.
3) ಸ್ವಾಭಿಮಾನ, ಭರವಸೆ, ಸ್ವಾಯತ್ತತೆ ಗುಣಗಳನ್ನು ಬೆಳೆಸಿಕೊಳ್ಳುವುದು.
4) ಸ್ವತಂತ್ರವಾಗಿ ಬದುಕನ್ನು ನಡೆಸುವ, ತನ್ನ ಬದುಕನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವ ಭಾವನೆಯನ್ನು ಬೆಳೆಸಿಕೊಳ್ಳುವುದು.

ಸಬಲೀಕರಣವೆಂದರೆ ಅಧಿಕಾರದ ಅಸಮಹಂಚಿಕೆಯನ್ನು ಅರಿತುಕೊಳ್ಳುವುದು ಮತ್ತು ಅದನ್ನು ಬದಲಾಯಿಸಲು ಪ್ರಯತ್ನಿಸುವುದು. ಈಗಿರುವ ಅಧಿಕಾರದ ಅಸಮ ನೆಲೆಯನ್ನು ಪ್ರಶ್ನಿಸುವುದು ಸಬಲೀಕರಣದ ಒಂದು ಮುಖ್ಯ ನೆಲೆಯಾಗಿದೆ. ಅಧಿಕಾರ ಸಂಬಂಧಗಳಲ್ಲಿನ ಅಸಮಾನತೆಗಳನ್ನು ಹೋಗಲಾಡಿಸುವುದು. ಅದಕ್ಕೆ ಬೇಕಾದ ಸಾಮರ್ಥ್ಯಗಳಿಸಿಕೊಳ್ಳುವುದು ಸಬಲೀಕರಣ. ಮಹಿಳೆಯರನ್ನು ಕುರಿತಂತೆ ಮಹಿಳೆಯರ ಚಿಂತನೆಯಲ್ಲಿನ ಬದಲಾವಣೆಯನ್ನು ಸಬಲೀಕರಣವು ಒಳಗೊಂಡಿದೆ. ಇದೊಂದು ಬಗೆಯ ಆತ್ಮಜಾಗೃತಿಯ ಪ್ರಕ್ರಿಯೆಯಾಗಿದೆ.

ಸಬಲೀಕರಣವು ರಾಜಕೀಯ ಹೋರಾಟವಾಗಿದೆ. ಈ ರಾಜಕೀಯ ಹೋರಾಟವು ವ್ಯಕ್ತಿಗತವಾಗಿರಬಹುದು ಅಥವಾ ಸಂಘಟಿತವಾದುದಾಗಿರಬಹುದು. ಅಧಿಕಾರವೆನ್ನುವುದು ಸಾಮಾಜಿಕ ಸಂಬಂಧಗಳ ನೆಲೆಯನ್ನು ಹೊಂದಿರುವ ಸಂಗತಿಯಾಗಿರಬಹುದು. ಸಬಲೀಕರಣವು ಕೆಳಕಂಡ ಬದಲಾವಣೆಗಳನ್ನು ತರುತ್ತದೆ ಎಂದು ಭಾವಿಸಲಾಗಿದೆ.

1) ಸುರಕ್ಷತೆ-ಸುಭದ್ರತೆಯ ಭಾವನೆ- ಭವಿಷ್ಯದ ಕಡೆಗೆ ಮುನ್ನೋಟ
2) ಬದುಕನ್ನು ಕಟ್ಟುವ ಸಾಮರ್ಥ್ಯ.
3) ಸಾರ್ವಜನಿಕ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದು
4) ಕೌಟುಂಬಿಕ ನೆಲೆಯಲ್ಲಿ ತೀರ್ಮಾನ-ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅಧಿಕಾರದ ಚಲಾವಣೆ.

ಅನೇಕ ಮಹಿಳಾ ಸಂಘಟನೆಗಳು, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಅನೇಕ ಬಗೆಯ ಸಬಲೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಬಲೀಕರಣವು ಇಂದು ಅಭಿವೃದ್ಧಿಯ ಗುರಿಯಾಗಿ ಪರಿಣಮಿಸಿದೆ. ಸಮಾಜದ ಅಂಚಿನಲ್ಲಿರುವ ವಂಚಿತರು, ದಲಿತರು, ಮಹಿಳೆಯರು ಹೋರಾಟ ನಡೆಸುತ್ತಿರುವುದೇ ತಮ್ಮ ಅಧಿಕಾರವನ್ನು ಪ್ರತಿಷ್ಠಾಪಿಸುವುದಕ್ಕಾಗಿ, ಅಧಿಕಾರ ಸಂಪಾದಿಸುವುದಕ್ಕಾಗಿ ಎಂಬುದು ಸ್ಪಷ್ಟವಾಗಿದೆ.

ರಾಷ್ಟ್ರೀಯ ಮಹಿಳಾ ಆಯೋಗ:

ಮಹಿಳಾ ನಿರ್ದಿಷ್ಟ ಕಾರ್ಯಕ್ರಮಗಳಲ್ಲಿ 'ರಾಷ್ಟ್ರೀಯ ಮಹಿಳಾ ಆಯೋಗ'ದ ಸ್ಥಾಪನೆಯು ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ೧೯೯೦ ರಲ್ಲಿ ಸರ್ಕಾರವು 'ರಾಷ್ಟ್ರೀಯ ಮಹಿಳಾ ಆಯೋಗದ ಕಾಯಿದೆ'ಯನ್ನು ಜಾರಿಗೊಳಿಸಿ ೧೯೯೨ ರಲ್ಲಿ 'ರಾಷ್ಟ್ರೀಯ ಮಹಿಳಾ ಆಯೋಗ'ವನ್ನು ಸ್ಥಾಪಿಸಿತು. ಇದೊಂದು ಸ್ಟ್ಯಾಚ್ಯುಟರಿ ಮಂಡಳಿಯಾಗಿದ್ದು, ಮಹಿಳೆಯರ ಸಂವಿಧಾನಾತ್ಮಕ ಮತ್ತು ಕಾನೂನು ಹಕ್ಕುಗಳನ್ನು ರಕ್ಷಿಸುವ ಸಂಸ್ಥೆಯಾಗಿದೆ. ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ರಾಷ್ಟ್ರಮಟ್ಟದಲ್ಲಿ ಕೆಲಸ ಮಾಡುವ ಮಂಡಳಿ.

ಉದ್ದೇಶಗಳು:-

1) ಮಹಿಳೆಯರಿಗೆ ನೀಡಿರುವ ಸಂವಿಧಾನಾತ್ಮಕ ಮತ್ತು ಕಾನೂನು ಸೌಲಭ್ಯಗಳನ್ನು ಅಧ್ಯಯನ ಮಾಡುವುದು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರುವುದನ್ನು ಪರಿಶೀಲಿಸುವುದು.
2) ಈಗಿರುವ ಶಾಸನಗಳನ್ನು ಸಮೀಕ್ಷಿಸಿ ತಿದ್ದುಪಡಿಗೆ ಸಲಹೆ ಮಾಡುವುದು.
3) ಮಹಿಳೆಯರ ಹಕ್ಕುಗಳ ಉಲ್ಲಂಘನೆಯಿಂದ ಬಂದ ದೂರು ಪ್ರಕರಣಗಳನ್ನು ಪರಿಹರಿಸುವುದು

ಈ ಉದ್ದೇಶಗಳನ್ನು ಸಾಧಿಸಲು ಆಯೋಗವು ಕೆಲವು ಕಾರ್ಯಗಳನ್ನು ಕೈಗೊಳ್ಳುತ್ತದೆ.

1) ಮಹಿಳೆಯರ ರಕ್ಷಣೆ, ಸಮಾನತೆ ಮತ್ತು ಅಭಿವೃದ್ಧಿಗಾಗಿ ರೂಪಿಸಿರುವ ಕಾಯಿದೆ, ಕಾರ್ಯನೀತಿ ಹಾಗೂ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳ್ಳುತ್ತಿವೆಯೇ ಎಂದು ಪರಿಶೀಲಿಸುವುದು

2) ಮಹಿಳೆಯರ ಕಷ್ಟಗಳನ್ನು ಕಡಿಮೆ ಮಾಡಲು, ಪರಿಹಾರ ನೀಡಲು ಮತ್ತು ಅವರ ಕಲ್ಯಾಣಕ್ಕಾಗಿ ಕೈಗೊಳ್ಳಲಾದ ಕಾರ್ಯನೀತಿಗಳಲ್ಲಿ ಮಾರ್ಗಸೂತ್ರಗಳನ್ನು ನಮೂದಿಸಲಾಗಿರುತ್ತದೆ. ಅವುಗಳನ್ನು ಜಾರಿಗೊಳಿಸುವವರು ಪಾಲಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದು.

3) ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ದೊರಕುವಂತೆ ನೋಡಿಕೊಳ್ಳುವುದು. ಅಲ್ಲಿ ಅವರು ಮುಂದೆ ಬರಲು, ಉನ್ನತ ಸ್ಥಾನ ಪಡೆಯಲು ಇರುವ ಅಡೆ-ತಡೆಗಳನ್ನು ಗುರುತಿಸಿ ಹೋಗಲಾಡಿಸುವುದು.

4) ಬಂದೀಖಾನೆ, ರಿಮ್ಯಾಂಡ್ ಹೋಂ ಮತ್ತು ಮಹಿಳೆಯರಿಗಾಗಿ ಕೆಲಸ ಮಾಡುವ ಇತರ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಮಹಿಳೆಯರ ಪರಿಸ್ಥಿತಿಯನ್ನು ಪರಿಶೀಲಿಸುವುದು. ಅಗತ್ಯವಿದ್ದಲ್ಲಿ ಪರಿಹಾರ ಕ್ರಮ ಕೈಗೊಳ್ಳುವುದು.

5) ಮಹಿಳೆಯರಿಗೆ ಸಂಬಂಧಪಟ್ಟಂತೆ ಯಾವುದೇ ವಿಷಯ ಕ್ಷೇತ್ರದಲ್ಲಿ ವಿಶೇಷವಾಗಿ ದುಡಿಯುವ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸುವುದು.

6) ಕೇಂದ್ರ ಸರ್ಕಾರ ವಹಿಸುವ ಯಾವುದೇ ಕೆಲಸವನ್ನು ನಿರ್ವಹಿಸುವುದು.

7) ಮಹಿಳೆಯರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ವಿಶೇಷ ಸಮಿತಿಗಳನ್ನು ರಚಿಸುವುದು. ಅವುಗಳಲ್ಲಿ ಆಯೋಗದ ಸದಸ್ಯರು ಇರುತ್ತಾರೆ.

8) ಮಹಿಳೆಯರ ವಿರುದ್ಧ ತೋರಲಾಗುವ ತಾರತಮ್ಯ ಮತ್ತು ಮಹಿಳೆಯರ ನಿರ್ದಿಷ್ಟ ಸಮಸ್ಯೆಗಳನ್ನು ವಿಶೇಷವಾಗಿ ಅಧ್ಯಯನ ಮಾಡುವುದು, ತನಿಖೆ ಮಾಡುವುದು, ಅವುಗಳಿಗೆ ಸಂಬಂಧಪಟ್ಟಂತೆ ಕಾನೂನುಗಳಲ್ಲಿರುವ ನಿರ್ಬಂಧಗಳನ್ನು ತಿಳಿದು ತೆಗೆದುಹಾಕಲು ಶಿಫಾರಸ್ಸು ಮಾಡುವುದು.

ರಾಷ್ಟ್ರೀಯ ಆಯೋಗದ ಮಾದರಿಯಲ್ಲೇ 'ರಾಜ್ಯ ಮಹಿಳಾ ಆಯೋಗ'ವನ್ನು ರಾಜ್ಯಮಟ್ಟದಲ್ಲಿ ೧೯೯೫ ರಲ್ಲಿ ಪ್ರಾರಂಭಿಸಲಾಯಿತು. ರಾಷ್ಟ್ರೀಯ ಮಹಿಳಾ ಆಯೋಗ ಆದೇಶಿಸಿದ ಕಾರ್ಯನೀತಿ ಕಾರ್ಯಕ್ರಮಗಳನ್ನು 'ರಾಜ್ಯ ಮಹಿಳಾ ಆಯೋಗ'ಗಳು ಜಾರಿಗೊಳಿಸುತ್ತವೆ. ಅಸ್ಸಾಂ, ಮಹಾರಾಷ್ಟ್ರ, ಒರಿಸ್ಸಾ, ಪಂಜಾಬ್, ತಮಿಳುನಾಡು, ತ್ರಿಪುರಾ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಮಹಿಳಾ ಆಯೋಗಗಳನ್ನು ಸ್ಥಾಪಿಸಲಾಗಿದೆ. ರಾಜ್ಯ ಮಹಿಳಾ ಆಯೋಗವು ಆದ್ಯತೆ ಮೇರೆಗೆ ಕೆಲವು ಕಾರ್ಯಗಳನ್ನು ಕೈಗೊಳ್ಳುತ್ತದೆ.

1) ಕೌಟುಂಬಿಕ ನ್ಯಾಯಾಲಯ ಹಾಗೂ ಪೋಲೀಸ್ ಠಾಣೆಗಳಲ್ಲಿ ಬಾಕಿ ಉಳಿದಿರುವ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಬಗ್ಗೆ ಸಮೀಕ್ಷೆ ನಡೆಸಿ ಮುಂದಿನ ಕ್ರಮ ತೆಗೆದುಕೊಳ್ಳುವುದು.
2) ಸೆರೆಮನೆ ಮತ್ತು ರಕ್ಷಣಾ ಗೃಹಗಳಲ್ಲಿ ಮಹಿಳೆಯರ ಪರಿಸ್ಥಿತಿಯನ್ನು ಪರೀಕ್ಷಿಸಿ ಪರಿಹಾರ ಕ್ರಮ ಕೈಗೊಳ್ಳುವುದು.
3) ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸ್ಥಿತಿ ಮತ್ತು ಸಮೀಕ್ಷೆಗಳನ್ನು ಗುರುತಿಸಿ ಪರಿಹಾರವನ್ನು ಸೂಚಿಸುವುದು.
4) ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳನ್ನು ಅಧ್ಯಯನ ಮಾಡಿ ಸೂಕ್ತ ತಿದ್ದುಪಡಿಗೆ ಸಲಹೆ ಮಾಡುವುದು.
5) ಪಂಚಾಯತ್ ಚುನಾವಣೆಯಲ್ಲಿ ಚುನಾಯಿತರಾದ ಮಹಿಳಾ ಸದಸ್ಯರ ಸ್ಥಿತಿ-ಗತಿ ಬಗ್ಗೆ ಸಮೀಕ್ಷೆ ನಡೆಸುವುದು.

ರಾಜ್ಯ ಮಹಿಳಾ ಆಯೋಗವು ಸರ್ಕಾರ ನೇಮಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಹೊಂದಿರುತ್ತವೆ. ಬೆಂಗಳೂರಿನಲ್ಲಿ ಕಛೇರಿಯನ್ನು ಹೊಂದಿದ್ದು ರಾಜ್ಯ ಮತ್ತು ಜಿಲ್ಲಾಮಟ್ಟಗಳಲ್ಲಿ ಸರ್ಕಾರ, ಸರ್ಕಾರೇತರ ವಿಶ್ವವಿದ್ಯಾಲಯ ಹಾಗೂ ಇತರ ಸಂಘಗಳೊಂದಿಗೆ ಸೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

1) ಸ್ತ್ರೀವಾದಿ ದೃಷ್ಟಿಕೋನವುಳ್ಳ ಸಾಮುದಾಯಿಕ ಪ್ರಯತ್ನ, ವಿಶ್ಲೇಷಣೆ ಕಲಿಕೆ ಮತ್ತು ಕ್ರಿಯೆಗಳನ್ನು ಕೈಗೊಳ್ಳುವುದರ ಮೂಲಕ ಸಾಮಾಜಿಕ ಪರಿವರ್ತನೆಗೆ ಅನುಕೂಲ ಮಾಡಿಕೊಡುವುದು.

2)ಸಮುದಾಯದ ಸಂಪನ್ಮೂಲದ ಸದ್ಬಳಕೆ, ಪುನರ್ ಹಂಚಿಕೆ ಮತ್ತು ಅದನ್ನು ಪುನಶ್ಚೇತನಗೊಳಿಸುವ ಮೂಲಕ ಮಹಿಳೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು. ಮಹಿಳೆಯರ ಸಂಪನ್ಮೂಲ ಲಭ್ಯತೆಯನ್ನು ಹೆಚ್ಚಿಸಿ, ಅವರ ಚೌಕಾಸಿ ಶಕ್ತಿಯನ್ನು ಅಧಿಕಗೊಳಿಸುವುದು.

ಈ ಉದ್ದೇಶಗಳನ್ನು ಸಾಧಿಸಲು 'ಸಮಖ್ಯಾ ಗುಂಪು ಪರಿಕ್ರಮವನ್ನು' ಅಳವಡಿಸಿಕೊಂಡಿದೆ. ಆಯ್ದ ಗ್ರಾಮಗಳಲ್ಲಿ ಸಂಘಗಳನ್ನು ಕಟ್ಟಿ ಮಹಿಳೆಯರು ಒಟ್ಟಿಗೆ ಸೇರಿ ಕೆಲಸ ಮಾಡಲು ವೇದಿಕೆ ನಿರ್ಮಿಸಿ, ಅವರಲ್ಲಿ ಆತ್ಮವಿಶ್ವಾಸ ಮೂಡಿಸಲು ಪ್ರಯತ್ನಿಸುತ್ತದೆ. ಮಹಿಳಾ ಸಮಖ್ಯಾ ವಿವಿಧ ಚಟುವಟಿಕೆಗಳಲ್ಲಿ ತೊಡಗಿದೆ. ವಯಸ್ಕರ ಶಿಕ್ಷಣ, ಅನೌಪಚಾರಿಕ ಶಿಕ್ಷಣ, ಶಿಶುಕೇಂದ್ರ ನಡೆಸುವುದು, ಶಾಲೆ ಬಿಟ್ಟ ಹುಡುಗಿಯರಿಗೆ ಶಿಕ್ಷಣ ಕೇಂದ್ರಗಳ ಸ್ಥಾಪನೆ, ಆರೋಗ್ಯ, ಅರಿವು ಮತ್ತು ಕಾನೂನು ತಿಳುವಳಿಕೆ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಮಹಿಳೆಯರು ಸ್ಥಳೀಯ ಆಡಳಿತದಲ್ಲಿ ಭಾಗವಹಿಸುವಂತೆ ಮಾಡುವುದು ಮತ್ತು ಆಡಳಿತ ವರ್ಗವು ಜವಾಬ್ದಾರಿತನದಿಂದ ಕಾರ್ಯ ನಿರ್ವಹಿಸುವಂತೆ ಮಾಡುವುದು ಇತ್ಯಾದಿ.

3) ಗ್ರಾಮೀಣ ಮಹಿಳೆಯರ ಆರೋಗ್ಯವನ್ನು ಸುಧಾರಿಸಲು ಅನೇಕ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ೨೦೦೦ ಇಸವಿಯಲ್ಲಿ ಢಾಕಾದಲ್ಲಿ ನಡೆದ ಅಂತರರಾಷ್ಟ್ರೀಯ ಆರೋಗ್ಯ ಸಭೆಯಲ್ಲಿ ಸಂಘದ ಮಹಿಳೆಯರು ಹಾಗೂ ಸಮಖ್ಯಾದ ಕಾರ್ಯಕರ್ತರು ಭಾಗವಹಿಸಿದ್ದರು. ವಿಶ್ವ ಆರೋಗ್ಯ ಸಂಘಟನೆಯಿಂದ ಸಂಘದ ಮಹಿಳೆಯರಿಗೆ ಆರೋಗ್ಯ ಕಾರ್ಯಕರ್ತರ ತರಬೇತಿ ನೀಡುವ ಯೋಜನೆಯೊಂದನ್ನು ಪಡೆದಿದೆ. ಗ್ರಾಮಗಳಲ್ಲಿ ಸ್ವಚ್ಛತೆ ಕಾಪಾಡಲು ಶ್ರಮದಾನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ನೀರಿನ ಟ್ಯಾಂಕ್, ಶಾಲೆ ಮತ್ತು ದೇವಸ್ಥಾನಗಳ ಆವರಣ, ಚರಂಡಿ ಮತ್ತು ಬೋರ್‌ವೆಲ್ ಇರುವ ಸ್ಥಳಗಳನ್ನು ಸ್ವಚ್ಛಗೊಳಿಸುವ ಪ್ರಯತ್ನವನ್ನು ಮಾಡುತ್ತದೆ. ಸರ್ಕಾರ ಶೌಚಾಲಯ ಕಟ್ಟಿಸಿಕೊಳ್ಳಲು ನೀಡುವ ನೆರವನ್ನು ಸಂಘದ ಮಹಿಳೆಯರು ಪಡೆಯುವಂತೆ ಮಾಡುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ದಾಯಿ ಹಾಗೂ ವೈದ್ಯರ ನೇಮಕ ಮತ್ತು ಅವರ ಕರ್ತವ್ಯ ನಿರ್ವಹಣೆಯನ್ನು ಪರಿಶೀಲಿಸುತ್ತಿರುತ್ತದೆ. ಗ್ರಾಮ ಪಂಚಾಯಿತಿಯ 'ಆರೋಗ್ಯ ಸಮಿತಿ'ಯಲ್ಲಿ ಸಂಘದ ಮಹಿಳೆಯರನ್ನು ಸದಸ್ಯರನ್ನಾಗಿಸಿದೆ. ಸಂಘದ ಸಭೆಗಳಲ್ಲಿ ಹಾಗೂ ವೈಯಕ್ತಿಕವಾಗಿ ಮಹಿಳೆಯರು ತಮ್ಮ ಆರೋಗ್ಯ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಲು ಪ್ರೋತ್ಸಾಹಿಸುತ್ತದೆ. ಸಾರಾಯಿ, ತಂಬಾಕು, ಎಲೆ-ಅಡಿಕೆ ಸೇವನೆ ಮುಂತಾದ ಕೆಟ್ಟ ಅಭ್ಯಾಸಗಳಿಂದಾಗುವ ಆರೋಗ್ಯ ಹಾನಿ ಬಗ್ಗೆ ತಿಳಿಸಿ ಮಹಿಳೆಯರು ಅವುಗಳನ್ನು ಬಿಡುವಂತೆ ಮಾಡಿದೆ.

4) ಅನ್ಯಾಯಕ್ಕೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಪರ್ಯಾಯ ನ್ಯಾಯವ್ಯವಸ್ಥೆ ಮಾಡಿಕೊಡುವ ಪ್ರಯತ್ನವನ್ನು ಮಾಡುತ್ತಿದೆ. ಮಹಿಳೆಯರಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥ ಮಾಡಲು 'ನಾರಿ ಅದಾಲತ್' ಗಳನ್ನು ಸ್ಥಾಪಿಸಿದೆ. ಸಂಘದ ಮಹಿಳೆಯರು ಮತ್ತು ಕಾರ್ಯಕರ್ತರು ಕಾನೂನು ಅರಿವು ತರಬೇತಿಗಳನ್ನು ಪಡೆದಿದ್ದಾರೆ. ಗ್ರಾಮದಲ್ಲಿ ಮಹಿಳೆಗೆ ಅನ್ಯಾಯವಾಗಿದ್ದರೆ ಅವಳು ನ್ಯಾಯ ಪಡೆಯಲು ಸಂಪೂರ್ಣ ಬೆಂಬಲ ನೀಡುತ್ತದೆ. ಕುಡುಕ ಗಂಡ, ಕೌಟುಂಬಿಕ ಹಿಂಸೆ, ದ್ವಿಪತ್ನಿತ್ವ, ಬೇರ್ಪಡುವಿಕೆ, ಜೀವನಾಂಶ, ಕುಟುಂಬ ಕಲಹ ಮುಂತಾದ ವಿಷಯಗಳನ್ನು ಕೈಗೆತ್ತಿಕೊಂಡು ಅವುಗಳನ್ನು ಬಗೆಹರಿಸುವ ಸಾಮಾಜಿಕ ಹಾಗೂ ನ್ಯಾಯವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತದೆ. ಸಂಘದ ಮಟ್ಟದಲ್ಲಿ ಬಗೆಹರಿಸಲಾಗದ ಪ್ರಕರಣಗಳನ್ನು ಪೋಲೀಸ್ ಠಾಣೆಗೆ ಒಯ್ದು ಅಲ್ಲಿ ಬಗೆಹರಿಸಲು ಪ್ರಯತ್ನಿಸುತ್ತದೆ. ಮಹಿಳೆಯರಿಗೆ ಮತ್ತು ಪೋಲೀಸ್, ವಕೀಲರು ಹಾಗೂ ನ್ಯಾಯಾಲಯಗಳ ನಡುವಿನ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದೆ.

5) ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸಂಘದ ಮಹಿಳೆಯರನ್ನು ಸ್ಪರ್ಧಿಸುವಂತೆ ಪ್ರೋತ್ಸಾಹ ನೀಡಿ ಗೆದ್ದುಬಂದ ಮಹಿಳೆಯರು ಪಂಚಾಯಿತಿ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಳ್ಳುತ್ತದೆ. ಇದರಿಂದ ಸ್ಥಳೀಯ ಆಡಳಿತ ಕಾರ್ಯಗಳು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಗ್ರಾಮ ಸಭೆಗಳಲ್ಲಿ

ಮಹಿಳಾ ವಿಷಯಗಳನ್ನು ಗಮನಕ್ಕೆ ತರುತ್ತದೆ. ಗ್ರಾಮಪಂಚಾಯಿತಿ ಜೊತೆ ಸೇರಿ ಹೊಸ ಅಂಗನವಾಡಿ ತೆರೆಯುವುದು, ಸಾರಾಯಿ ಅಂಗಡಿ ಮುಚ್ಚಿಸುವುದು, ಗ್ರಾಮಕ್ಕೆ ಮೂಲಭೂತ ಸೌಕರ್ಯಗಳು ಸಿಗುವಂತೆ ಮಾಡುವುದು, ಸರ್ಕಾರದ ಕಾರ್ಯಕ್ರಮಗಳು ಜನರಿಗೆ ತಲುಪುವಂತೆ ನೋಡಿಕೊಳ್ಳುವುದು ಮುಖ್ಯ ಚಟುವಟಿಕೆಗಳಾಗಿವೆ. ಅನೇಕ ಕಡೆ ಸಂಘದ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಂಚಾಯಿತಿಗೆ ಗೆದ್ದುಬಂದಿರುವುದು ಕಂಡು ಬಂದಿದೆ.

ಹೀಗೆ ಮಹಿಳಾ ನಿರ್ದಿಷ್ಟ ಕಾರ್ಯಕ್ರಮವಾದ `ಮಹಿಳಾ ಸಮಖ್ಯಾ' ಗ್ರಾಮೀಣ ಮಹಿಳೆಯರನ್ನು ತಲುಪುವುದರಲ್ಲಿ, ವಿಶ್ವಾಸ ಸಂಬಂಧವನ್ನು ಬೆಳೆಸುವುದರಲ್ಲಿ, ವೈವಿಧ್ಯಮಯ ಕಾರ್ಯತಂತ್ರಗಳನ್ನು, ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ. ಆದರೆ ಆಡಳಿತ ರಚನೆಯು ನಿಖರವಾಗಿದ್ದು, ತನ್ನ ಕಾರ್ಯಗಳನ್ನು ಯೋಜನಾಬದ್ಧವಾಗಿ ಜಾರಿಗೊಳಿಸುತ್ತದೆ. ರಾಜ್ಯಮಟ್ಟದಲ್ಲಿ ಒಬ್ಬ ಮಹಿಳಾ ಸಂಯೋಜನಾಧಿಕಾರಿ, ಜಿಲ್ಲಾ ಮಟ್ಟದಲ್ಲಿ ಒಬ್ಬ ಸಂಯೋಜನಾಧಿಕಾರಿ, ತಾಲ್ಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ ಸಂಪನ್ಮೂಲ ವ್ಯಕ್ತಿಗಳು, ಕಿರಿಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಹಯೋಗಿನಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಹಾಗೂ ಆಡಳಿತ ರಚನೆಯಲ್ಲಿ ಕೆಲವು ಸಣ್ಣ-ಪುಟ್ಟ ದೋಷಗಳಿದ್ದರೂ 'ಮಹಿಳಾ ಸಮಖ್ಯಾ' ಸರ್ಕಾರದ ಇತರ ಕಾರ್ಯಗಳಿಗಿಂತ ಭಿನ್ನವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳಬಹುದು. ತನ್ನ ಸಂದೇಶವನ್ನು ಜನರಿಗೆ ತಲುಪಿಸಲು ವಾರ್ತಾ ಪತ್ರವನ್ನು ಪ್ರಕಟಿಸುತ್ತಿರುವುದು ಅದರ ಹೆಚ್ಚುವರಿ ಚಟುವಟಿಕೆಯಾಗಿದೆ. ಹಾಗಾಗಿ ಸಂಘದ ಮಹಿಳೆಯರ ಸಮಾವೇಶಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ನಡೆಯುತ್ತಿರುತ್ತದೆ.

ಕೊನೆಯದಾಗಿ ಮಹಿಳಾ ಉದ್ಯಮಿಗಳು ಸಂಘಟಿತರಾಗಬೇಕು. ಅವರು ಯಶಸ್ವಿ ಉದ್ಯಮಿಗಳಾಗಿ ಇತರ ಮಹಿಳೆಯರಿಗೆ ಮಾದರಿಯಾಗಬೇಕು.

ಅಡಿ ಟಿಪ್ಪಣಿಗಳು:

೧) ಮಹಿಳೆ ಬಿಡುಗಡೆಯ ಹಾದಿಯಲ್ಲಿ: ಎನ್.ಗಾಯಿತ್ರಿ-೧೯೯೬:ಪು.ಸಂ.-೧೬

೨) ಮಹಿಳಾ ಅಧ್ಯಯನ-೩ –ಡಾ. ಎಚ್.ಎಮ್.ಹೇಮಲತ ೨೦೦೬

ಮಹಿಳೆ ಮತ್ತು ದುಡಿಮೆ

ಮಹಿಳಾಭಿವೃದ್ಧಿ, ಕಾರ್ಯನೀತಿ ಯೋಜನೆಗಳು

೨) ಮಹಿಳೆ : ಆರ್ಥಿಕತೆ ಮತ್ತು ಅಭಿವೃದ್ಧಿ- ಟಿ.ಆರ್.ಚಂದ್ರಶೇಖರ ೨೦೦೧ ಪು.ಸಂ.೨೦೧.

ಉಪಸಂಹಾರ

ಸಮಾಜ ಜೀವನದ ಆರಂಭದಿಂದಲೂ ಮಹಿಳೆ ಪುರುಷನೊಂದಿಗೆ ದುಡಿಯುತ್ತಿದ್ದಾಳೆ. ಹಾಗಾಗಿ ಇಂದು ಅವಳನ್ನು ವಿವಿಧ ಶ್ರಮವರ್ಗಗಳಲ್ಲಿ, ವಿವಿಧ ಸ್ತರಗಳಲ್ಲಿ ಗುರುತಿಸಬಹುದಾಗಿದೆ. ಹುಟ್ಟಿನಿಂದ ಸಾವಿನವರೆಗೂ ಸಮಾಜದಲ್ಲಿ ಮಹಿಳೆಯ ದುಡಿಮೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಕಾಣುತ್ತೇವೆ.

ಭಾರತೀಯ ಸಮಾಜದಲ್ಲಿ ಮಹಿಳೆಯನ್ನು ಅವರು ಹುಟ್ಟಿದ ದಿನದಿಂದಲೂ ಒಂದು ಹೊರೆ ಮತ್ತು ಜವಾಬ್ದಾರಿ ಎಂದೇ ಭಾವಿಸಲಾಗುತ್ತಿದೆಯಲ್ಲದೇ ಕುಟುಂಬದ ಪ್ರೀತಿ ಮತ್ತು ಸಂಪನ್ಮೂಲಗಳಲ್ಲಿ ಅತೀ ಕಡಿಮೆ ಪಾಲನ್ನು ಕೊಡಲಾಗಿದೆ. ಆರಂಭದಿಂದಲೇ ಮಹಿಳೆಯು ಪುರುಷ ಪ್ರಾಧಾನ್ಯತೆಯನ್ನು ಒಪ್ಪಿಕೊಳ್ಳುವಂತೆ ಮಾಡಲಾಗುತ್ತದೆ. ಪುರುಷರಿಗಿಂತ ಕಡಿಮೆ ಅವಕಾಶ, ಕಡಿಮೆ ಅಧಿಕಾರ, ಕಡಿಮೆ ಆಸ್ತಿ, ಕಡಿಮೆ ಸ್ಥಾನವನ್ನು ನೀಡಲಾಗುವುದಲ್ಲದೇ ಮಹಿಳೆಯರು ತಮಗೆ ತಾವೇ ಕೀಳೆಂದು ಭಾವಿಸುವುದು ಎಲ್ಲರ ಅಡಿಯಾಳಿನಂತೆ ನಡೆದುಕೊಳ್ಳುವುದನ್ನು ಕೌಟುಂಬಿಕ ರಚನೆ ಮತ್ತು ಸಾಮಾಜಿಕ ಮೌಲ್ಯಗಳು ರೂಢಿಸುತ್ತವೆ. ಹೀಗೆ ನಮ್ಮ ಸಾಮಾಜಿಕ ವ್ಯವಸ್ಥೆ ಮಹಿಳೆಯರನ್ನು ಹಲವಾರು ರೀತಿಯ ಪಕ್ಷಪಾತ ಮತ್ತು ನಿರ್ದಯತೆಯ ಮೂಲಗಳನ್ನು ಸೃಷ್ಟಿಸಿದೆ. ಅದರಲ್ಲೂ ದುಡಿಯುವ ಮಹಿಳೆಯರ ಬಗೆಗೆ ಇರುವ ಧೋರಣೆಯು ಇನ್ನೂ ಕೆಳಸ್ತರದಲ್ಲಿರುವುದು ಕಂಡುಬರುತ್ತದೆ.

ಆಧುನಿಕತೆಯ ಪ್ರಭಾವದಿಂದಾಗಿ ಹಲವಾರು ರಂಗಗಳು ಯಾಂತ್ರಿಕರಣಗೊಂಡಾಗ ಮಹಿಳೆ ತನ್ನ ಅವಕಾಶಗಳನ್ನು ಕಳೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಯಂತ್ರಗಳನ್ನು ಬಳಸುವ ತರಬೇತಿ ಅಸಂಘಟಿತ ವಲಯದಲ್ಲಿ ಇರುವ ಮಹಿಳೆಯರಿಗೆ ಇರುವುದಿಲ್ಲ. ಆಗ ಆಕೆಯ ಉದ್ಯೋಗವನ್ನು ಯಂತ್ರಗಳು ಕಸಿದುಕೊಂಡು ಆ ಮೂಲಕ ಅದು ಪುರುಷ ವರ್ಗದ ಪಾಲಾಗುತ್ತದೆ. ಇದೇ ರೀತಿ ಇನ್ನಿತರ ಗುಡಿ ಕೈಗಾರಿಕೆ, ಕೈಕಸುಬುಗಳು ಕೂಡ ಮಹಿಳೆಯರನ್ನು ಉತ್ಪಾದನಾ ಕ್ರಿಯೆಯಿಂದ ಮತ್ತು ಆಧುನೀಕರಣ ಪ್ರಕ್ರಿಯೆಯಿಂದ ಹೊರಗಿಟ್ಟು ಬಿಡುತ್ತವೆ. ಅಧಿಕ ನಷ್ಟಕ್ಕೆ ಒಳಗಾಗುವವರೆಂದರೆ ಬಡ ಮತ್ತು ಕೆಳವರ್ಗದಲ್ಲಿರುವ ಮಹಿಳೆಯರು. ಯಾಕೆಂದರೆ, ಅವರಿಗೆ ವಿದ್ಯೆಯಿಲ್ಲದ ಪಾರಂಪರಿಕವಾದ ಉತ್ಪಾದನಾ ವಿಧಾನಗಳಲ್ಲಿ ಮಾತ್ರ ದುಡಿಯುವ ನೈಪುಣ್ಯತೆ ಇದ್ದು ಈ ಅವಕಾಶಗಳು ತಪ್ಪಿ ಹೋದಾಗ ಬೇರು ಕಿತ್ತ ಗಿಡವಾಗಿ ಬಿಡುತ್ತಾರೆ. ಇಂತಹ ಜನರಿಗೆ ನೋವು ಉಂಟಾಗಿ ತಮ್ಮ ಜೀವನದಲ್ಲಿ ವ್ಯತ್ಯಯ ಉಂಟಾಗುತ್ತದೆ. ಇಂತಹ ಹಲವಾರು ಸಮಸ್ಯೆಗಳನ್ನು ಎದುರಿಸುವಂತಹ ಸಂದರ್ಭದಲ್ಲಿ ಮಹಿಳಾ

ದಿನಾಚರಣೆಗಳು, ಮಹಿಳಾ ಸಮ್ಮೇಳನಗಳು ಹುಟ್ಟಿಕೊಂಡು ಪರಿಹಾರುಗಳತ್ತ ದಾರಿ ತೋರುತ್ತಿರುವುದು ಅಸಂಘಟಿತ ವಲಯದ ಮಹಿಳೆಯರು ಇವರು ರೂಪಿಸುವ ಯೋಜನೆಗಳನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿದೆ.

ಮಹಿಳೆಯರಿಗೆ ಸಂಸ್ಕೃತಿಯ ಆದಿ ಕಾಲದಲ್ಲಿ ಬಹಳ ಗೌರವದ ಸ್ಥಾನಮಾನಗಳಿದ್ದವು. ಆದರೆ ಒಂದು ವೇಳೆ ಅದೇ ಸ್ಥಿತಿ ಇದ್ದದ್ದೇ ನಿಜವಾದರೆ ಅದು ಕೇವಲ ಶುದ್ಧಪೂಜೆಯಾಗಿ, ಗರ್ಭಗುಡಿಯಲ್ಲಿ ಕುಳಿತಿರುವ ದೇವರಂತೆ ಕುಳಿತುಕೊಂಡಿದ್ದೇ ಅನೇಕ ಕ್ಷೋಭೆಗಳಿಗೆ ಕಾರಣವಾಯಿತು. ಚಿನ್ನದ ಪಂಜರದಲ್ಲಿ ಇದ್ದರೂ ಗಿಳಿಗೆ ಅದು ಬಂಧನವೇ. ವನದಲ್ಲಿ ಗಿಡದಿಂದ ಗಿಡಕ್ಕೆ ಸ್ವತಂತ್ರವಾಗಿ ಹಾರಾಡುವ ಬಯಕೆ ಅದಕ್ಕೆ ಇರುವುದು ಸಹಜವಾಗಿದೆ. ಪಂಜರದ ಗಿಳಿಯ ಅವಸ್ಥೆಯನ್ನೇ ನಮ್ಮ ಸುತ್ತ-ಮುತ್ತಲಿನ ಗೃಹಿಣಿಯರು ಅನುಭವಿಸುತ್ತಿರುವುದನ್ನು ಕಾಣಬಹುದಾಗಿದೆ. ಅಂದರೆ ಮಹಿಳೆ ಸ್ವತಂತ್ರವಾಗಿ ಬೆಳೆಯಲಾರಳು. ಅವಳಿಗೆ ಆಶ್ರಯ ಬೇಕು. ಹೆಣ್ಣು ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿಯೂ, ಯೌವನದಲ್ಲಿ ಪತಿಯ ಆಶ್ರಯದಲ್ಲಿಯೂ, ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿಯೂ ಇರಬೇಕೆಂದು ಹಿರಿಯರು ಪದೇ ಪದೇ ಹೇಳುತ್ತಿರುವುದು ಕಂಡು ಬಂದರೂ ಕೆಲವೊಂದು ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ಇಂತಹ ಯಾವುದೇ ಕಾಲಕಾಲಕ್ಕೆ ತಕ್ಕಂತಹ ಆಶ್ರಯಗಳಿಲ್ಲದೆ ಬದುಕುತ್ತಿರುವ, ದುಡಿಮೆಯನ್ನು ಜೀವನವನ್ನಾಗಿಸಿಕೊಂಡು ದುಡಿಯುವ ಮಹಿಳೆಯರನ್ನು ನೋಡುತ್ತಿರುತ್ತೇವೆ.

ಆದರೆ ಇಂದೂ ಸಹ ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ಭೋಗ ವಸ್ತುವೆಂಬ ಕಲ್ಪನೆಯಲ್ಲೇ ನೋಡುತ್ತಿದೆ. ಮಹಿಳೆಯರಿಗೆ ಸಮಾಜದ ವಿವಿಧ ರಂಗಗಳಲ್ಲಿ ಸಿಗಬೇಕಾದ ಪ್ರಾತಿನಿಧ್ಯ ಸಿಗುತ್ತಿಲ್ಲ. ಪ್ರತಿಯಾಗಿ ಮಹಿಳೆಯರ ಮೇಲೆ ದೈಹಿಕವಾಗಿ ಮತ್ತು ಮಾನಸಿಕವಾಗಿ ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಿವೆ. ಸ್ವಾತಂತ್ರ್ಯದ ಅನಂತರ ವಿವಿಧ ರಂಗಗಳಲ್ಲಿ ಮಹಿಳೆಯರು ತಮ್ಮ ಪ್ರತಿಭೆ, ಶಕ್ತಿ ಸಾಮರ್ಥ್ಯಗಳನ್ನು ಮೆರೆದಿದ್ದು, ಪುರುಷರಿಗೆ ಸರಿಸಮವಾಗಿ ನಿಲ್ಲಬಲ್ಲರು ಎಂಬುದು ಸಾಬೀತಾಗಿದ್ದರೂ ಮಹಿಳೆಯರನ್ನು ಕುರಿತಂತೆ ಸಮಾಜದ ದೃಷ್ಟಿ ಧೋರಣೆಗಳಲ್ಲಿ ಕ್ರಾಂತಿಕಾರಕ ಬದಲಾವಣೆ ಆಗಿಲ್ಲ. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಬೆಂಬಲ ನೀಡುವುದರ ಜೊತೆಗೆ ಸಮಾಜದ ದೃಷ್ಟಿ ಧೋರಣೆಗಳನ್ನು ತಿದ್ದುವಂತಹ ಶೈಕ್ಷಣಿಕ ಕ್ರಮ ತುರ್ತಾಗಿ ಬರಬೇಕಾಗಿದೆ.

ಮಹಿಳೆಯರನ್ನು ಪುರಷರ ನೆರಳಿನಂತೆ ಕಾಣುವ ಪರಿಪಾಠಬಿಟ್ಟು, ಆಕೆ ಸ್ವತಂತ್ರ ವ್ಯಕ್ತಿತ್ವವುಳ್ಳವಳೆಂಬ ತಿಳುವಳಿಕೆ ಸಮಾಜದಲ್ಲಿ ಮೂಡಬೇಕು. ಪುರುಷ ಪ್ರಧಾನ ಸಮಾಜದ ಫಲವಾಗಿ ಮಹಿಳೆ ಅನೇಕ ಅವಕಾಶಗಳಿಂದ ವಂಚಿತಳಾಗುತ್ತಾ ದ್ವಿತೀಯ ದರ್ಜೆಯ ಪ್ರಜೆಯಂತೆ ಬದುಕುತ್ತಾ ಬಂದಿರುವ ಸ್ಥಿತಿ ಬದಲಾಗಬೇಕು. ಮಹಿಳೆಯರು ಪುರುಷರಷ್ಟೇ ಮಾನಸಿಕ ಸಾಮರ್ಥ್ಯ ಹೊಂದಿದ್ದಾರೆ. ಪುರುಷರು ತಮ್ಮ ಕ್ರಿಯಾಕ್ಷೇತ್ರಗಳಲ್ಲಿ ಯಾವ ಬಗೆಯ ಶ್ರೇಷ್ಠ ಸ್ಥಾನವನ್ನು ಹೊಂದಲು ಹಕ್ಕುವುಳ್ಳವರಾಗಿರುವರೋ ಅದೇ ರೀತಿ ತಮ್ಮ ಕ್ರಿಯಾಕ್ಷೇತ್ರಗಳಲ್ಲಿ ಮಹಿಳೆಯರು ಹೊಂದಿದ್ದಾರೆ. ಇದು ಸ್ವಾಭಾವಿಕವಾದ ಸ್ಥಿತಿಯಾಗಿದ್ದು ಯಾವುದೇ ಕೃಪೆಯಿಂದ ದಕ್ಕುವಂತಾಗಬಾರದು.

ದುಡಿಮೆಯ ಸ್ವಾತಂತ್ರ್ಯವಿದ್ದ ಮಾತ್ರಕ್ಕೆ ಮಹಿಳೆಗೆ ಆರ್ಥಿಕ ಸ್ವಾತಂತ್ರ ದಕ್ಕಿಲ್ಲ. ರೈಲು-ಬಸ್ಸುಗಳಲ್ಲಿ, ಕಾರ್ಖಾನೆ-ಕಛೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ, ರಸ್ತೆ-ಕ್ರೀಡಾಂಗಣಗಳಲ್ಲಿ, ಹೊಲ-ಗದ್ದೆಗಳಲ್ಲಿ ಪುರುಷರ ಜೊತೆ-ಜೊತೆಯಾಗಿಯೇ ಮಹಿಳೆ ಕಾಣಿಸಿಕೊಂಡರೂ ಮಹಿಳೆ ಪುರುಷಾಧೀನ ಬದುಕನ್ನೇ ನಡೆಸಬೇಕೆಂಬ ಈ ಸಮಾಜದ ಸನಾತನ ವಿಚಾರಗಳು ಸತ್ವ ಕಳೆದುಕೊಂಡಿಲ್ಲ. ಮಹಿಳೆ ನಡೆಯುವಾಗಲು, ಹಾಡುವಾಗಲು, ದುಡಿಯುವಾಗಲು, ಮಡಿಯುವಾಗಲು, ಪುರುಷರ ಛಾಯೆ ಸದಾ ಕಾಡುತ್ತಲೇ ಇರಬೇಕು. ಹೀಗಿದ್ದರೆ ಮಾತ್ರ ಸರಿ ಎನ್ನುವ ನಂಬಿಕೆಗಳು ಮಹಿಳೆಯನ್ನು "ಸ್ವತಂತ್ರ್ಯ ವ್ಯಕ್ತಿಯಾಗಿ" ನೋಡಲು ಸಾಧ್ಯವಾಗಿಲ್ಲ. ಇದು ಇಂದಿನ ಕಟುವಾಸ್ತವ. ಹೀಗಾಗಿ ಮಹಿಳೆ ಎಷ್ಟೇ ದೊಡ್ಡ ಸಾಧನೆಗಳನ್ನು ಗೈದರೂ ಅದು ಗೌಣವೆನಿಸಿದೆ. ಕಛೇರಿಯಲ್ಲಿ ಕಸಗುಡಿಸುವ ಸಾಮಾನ್ಯ ಕೆಲಸಗಾರ ಮನೆಗೆ ಬಂದ ಕೂಡಲೇ ಯಜಮಾನನಾಗುತ್ತಾನೆ. ಆದರೆ ಅದೇ ಕಛೇರಿಯಲ್ಲಿ ಅಧಿಕಾರಿಯಾಗಿ ದುಡಿಯುವ ಮಹಿಳೆಯರು ಮನೆಗೆ ಬಂದ ಕೂಡಲೇ ಪುರುಷಾಧೀನ ಪತ್ನಿಯಾಗುತ್ತಾರೆ. ಹೀಗೆ ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ಕರ್ತವ್ಯದ ಹೆಸರಿನಲ್ಲಿ ಬಂಧಿಸುತ್ತದೆ. ಭಾರತೀಯ ಮಹಿಳೆ ಗೃಹಿಣಿಯಾಗಿ, ತಾಯಿಯಾಗಿ, ಸಹೋದರಿಯಾಗಿ, ಮಡದಿಯಾಗಿ ತನ್ನ ಕುಟುಂಬಕ್ಕೆ ಸೇವೆ ಸಲ್ಲಿಸುತ್ತಾಳೆ. ಆದರೆ, ಭಾರತದ ಪುರುಷ ಪ್ರಧಾನ ಸಮಾಜ ಅವಳ ತ್ಯಾಗಕ್ಕೆ ಪ್ರತಿಫಲವಾಗಿ ನೀಡಿದ್ದೇನು? ತಿರಸ್ಕಾರ, ಅತ್ಯಾಚಾರ, ವರದಕ್ಷಿಣೆಗಾಗಿ ಜೀವಂತ ದಹನ, ಹೆಣ್ಣು ಭ್ರೂಣವೆಂದು ತಿಳಿದು ಗರ್ಭದಲ್ಲಿದ್ದಾಗಲೇ ಹತ್ಯೆ ಇಂತಹ ಕ್ರೂರ ದೃಷ್ಟಿ ಬದಲಾಗಬೇಕು.

ಸಂಘಟಿತ ವಲಯದ ದುಡಿಮೆಯಲ್ಲಿ ನಿರತರಾಗಿರುವ ಮಹಿಳಾ ಕಾರ್ಮಿಕರು ಹೆಚ್ಚು ವೇತನದ ಕೆಲಸಗಳನ್ನು, ವಿಶೇಷ ಸೌಲಭ್ಯಗಳನ್ನು ಪಡೆಯಬೇಕಾದರೆ, ಅವರಿಗೆ ಮುಖ್ಯವಾಗಿ ಶಿಕ್ಷಣ ಮತ್ತು ತಾಂತ್ರಿಕ ತರಬೇತಿ ಅವಶ್ಯಕ. ಇದರ ಜೊತೆಗೆ ಶೋಷಣೆ ಬಗೆಗೆ ಜಾಗೃತಿ ಮೂಡಿ, ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವಂತೆ ಪ್ರೇರಣೆ ನೀಡಬೇಕು. ಇದೆಲ್ಲಕ್ಕಿಂತ ಮುಖ್ಯವಾಗಿ, ಅವರಲ್ಲಿ ಸಂಘಟನಾ

ಭಾವನೆಯನ್ನು ಮೂಡಿಸಬೇಕು. ಅಲ್ಲದೇ ಅಸಂಘಟಿತ ವಲಯದಲ್ಲಿನ ದುಡಿಯುವ ಮಹಿಳೆಯರಿಗೆ ವಿಷಯದ ಬಗ್ಗೆ ಅರಿವು ಮೂಡಿಸಲು ವ್ಯಾಪಕವಾದ ಮತ್ತು ಸವಿಸ್ತಾರವಾದ ಅಧ್ಯಯನ ಹಾಗೂ ಅದರ ಪ್ರಚಾರ ಬಹಳ ಮುಖ್ಯವಾಗಿದೆ.

ಸಂಘಟಿತ ವಲಯ ಹಾಗೂ ಅಸಂಘಟಿತ ವಲಯಗಳಲ್ಲಿ ಮಹಿಳೆಯರ ಹಿತರಕ್ಷಣೆ ಕಾಪಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಪುರುಷ-ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಸಿಗುವಂತಹ ಕಾನೂನನ್ನು ಜಾರಿಗೆ ತರುವಂತೆ ಕಾನೂನನ್ನು ಬಿಗಿ/ಭದ್ರಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ, ಉದ್ದಿಮೆಯ ಒಡೆಯ, ಸಂಘ-ಸಂಸ್ಥೆಗಳು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಬೇಕು. ಅನಿರೀಕ್ಷಿತ ಸಮಸ್ಯೆಗಳು ಅವರಿಗೊದಗಿದಾಗ ಸಾರ್ವಜನಿಕ ಸಾಮಾಜಿಕ ನೆರವು, ಸಾಮಾಜಿಕ ವಿಮಾ ಯೋಜನೆ ಜಾರಿ, ಹೀಗೆ ಹಲವಾರು ರೀತಿಯ ಸಾಮಾಜಿಕ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕಾಗಿದೆ.

ಅಸಂಘಟಿತ ವಲಯದಲ್ಲಿ ಮಹಿಳೆಯರು ದುಡಿದಂತಹ ಆದಾಯದಲ್ಲೇ ತಮ್ಮೆಲ್ಲ ಬೇಕು-ಬೇಡಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ, ಅನಿವಾರ್ಯವಾಗಿ ಸಾಲದ ಸಂಕೋಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ. ಸಾಲ ಎಂದರೆ ಶೂಲ ಎಂಬ ಮಾತಿದೆ. ಹಾಗಾಗಿ ಸಾಲ ಎನ್ನುವುದು ಒಂದು ಬಗೆಯ ಚಕ್ರವ್ಯೂಹದ ಹಾಗೆ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಆದರೆ, ಅನಿವಾರ್ಯವಾಗಿ ಎದುರಾದ ಸಮಸ್ಯೆಗಳಿಗಾಗಿ ಸಾಲದ ಶೂಲಕ್ಕೆ ಒಳಗಾಗಿರುವ ಮಹಿಳೆಯರು ಉಂಟು. ಅನಾರೋಗ್ಯಕ್ಕೆ ಒಳಗಾದಾಗ, ಮಕ್ಕಳ ವಿದ್ಯಾಭ್ಯಾಸದ ಖರ್ಚಿಗಾಗಿ, ವಿವಾಹಕ್ಕಾಗಿ, ಹಬ್ಬ-ಹರಿದಿನಗಳಿಗಾಗಿ ಮಹಿಳಾ ದುಡಿಮೆಗಾರರು ಸಾಲದಲ್ಲಿ ಸಿಕ್ಕಿಹಾಕಿಕೊಂಡು ತಮ್ಮ ಜೀವನಗಳನ್ನು ಸವೆಸುತ್ತಿದ್ದಾರೆ. ವಿಧಿ ಇಲ್ಲದೆ ಸಣ್ಣ ಮಕ್ಕಳನ್ನು ದುಡಿಮೆಗೆ ಕಳುಹಿಸುತ್ತಿರುವ ಪ್ರಸಂಗಗಳು ಹೆಚ್ಚುತ್ತಿವೆ.

ಇಂದು ದುಡಿಯುವ ಮಹಿಳೆಯರು ಕಾರ್ಖಾನೆ, ಕಛೇರಿ ಇನ್ನಿತರ ಕ್ಷೇತ್ರಗಳಲ್ಲಿ ದುಡಿಯುತ್ತಿರುವುದರಿಂದ ಆಕೆ ದೈಹಿಕವಾಗಿ, ಮಾನಸಿಕವಾಗಿ ಆಯಾಸ ಹೊಂದಿ ಮನೆಗೆ ಬಂದು ಮನೆಯ ಕೆಲಸವನ್ನು ಅಚ್ಚು-ಕಟ್ಟಾಗಿ ನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುತ್ತದೆ. ಮಕ್ಕಳನ್ನು ಮನೆಯಲ್ಲಿ ಅಷ್ಟು ಸಮಯ ಬಿಟ್ಟು ಹೋಗುವುದರಿಂದ ಮಕ್ಕಳಲ್ಲಿ ಅನಾಥ ಭಾವನೆ, ಅವಳಲ್ಲಿ ಅಪರಾಧದ ಭಾವನೆ ಉಂಟಾಗುವ ಸಾಧ್ಯತೆ ಕಂಡುಬರುತ್ತದೆ. ಮುಖ್ಯವಾಗಿ ಮಕ್ಕಳಿಗೆ ತಾಯಿ-ತಂದೆಯರ ಪ್ರೀತಿ, ಪ್ರೇಮ, ವಾತ್ಸಲ್ಯ, ಪೋಷಣೆ ಮುಖ್ಯವಾಗಿರುತ್ತದೆ. ಇದು ಮಕ್ಕಳ ಬೆಳವಣಿಗೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮಕ್ಕಳಿಗೆ ಉತ್ತಮ ಶಿಕ್ಷಣದ ಸೌಲಭ್ಯವನ್ನು ಒದಗಿಸಿ ಸಮಾಜದಲ್ಲಿ ಸತ್ಪ್ರಜೆಗಳನ್ನಾಗಿ

ಮಾಡುವುದು ತಂದೆ-ತಾಯಿಯರ ಕರ್ತವ್ಯವಾಗಿರುವುದರಿಂದ ಪ್ರತಿಯೊಬ್ಬ ದುಡಿಯುವ ಮಹಿಳೆ ಮತ್ತು ಪುರುಷ 'ದುಡಿಮೆ' ಯನ್ನು ಇಂತಿಷ್ಟೇ ಸಮಯಕ್ಕೆಂದು ನಿಗದಿಪಡಿಸಿಕೊಂಡು ಮಕ್ಕಳ ಜೊತೆ, ಕುಟುಂಬ ಪರಿವಾರದ ಜೊತೆ ಬೆರೆಯಲು ಸಮಯ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರೆ ಮಕ್ಕಳ ಭವಿಷ್ಯದ ಜೊತೆಗೆ ದುಡಿಮೆಯ ತೃಪ್ತಿ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ತಾನೂ ಸಹ ಕಾಪಾಡಿಕೊಳ್ಳಬಹುದು. ಕುವೆಂಪು ರವರು ಹೇಳಿರುವಂತೆ "ಮನೆಮನೆಯ ತಪಸ್ವಿನಿ" ಎಂಬ ವಾಕ್ಯಕ್ಕೆ ಸಾರ್ಥಕತೆ ಉಂಟಾಗುತ್ತದೆ.

ನಮ್ಮ ದೇಶದಲ್ಲಿ ಸಾಕ್ಷರತೆ ಸಮಸ್ಯೆ ಇನ್ನೂ ಕಾಡುತ್ತಿರುವಾಗ ಇದರ ಒಂದು ಪ್ರಮಾಣ, ಅನುಪಾತ ಮಹಿಳೆಯರನ್ನು ಎಷ್ಟರ ಮಟ್ಟಿಗೆ ತಟ್ಟಿದೆ ಎಂಬುದನ್ನು ನೋಡಬೇಕಾಗುತ್ತದೆ. ಅಲ್ಲದೆ ಮಹಿಳೆಯರ ಶಿಕ್ಷಣವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಅವರುಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ನೀಡಿ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನ-ಮಾನವನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಮಹಿಳೆಯರು ಸಶಕ್ತತೆ ಹೊಂದಿ ಅವರು ಏಳಿಗೆ ಹೊಂದಿದರೆ ಸಮಾಜದ ಏಳಿಗೆಯನ್ನು ಕಾಣಲು ಸಾಧ್ಯವಾಗುತ್ತದೆ. ಇತ್ತೀಚೆಗೆ ಹಲವಾರು ಮಹಿಳಾ ಸ್ವಯಂ ಸೇವಾ ಸಂಘಗಳು ಆರ್ಥಿಕ ಸಬಲತೆಯ ಕಡೆಗೆ ಸಾಗುತ್ತಿವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯರ ಹಿತದೃಷ್ಟಿಯಿಂದ ಹಾಗೂ ಕ್ಷೇಮಾಭಿವೃದ್ಧಿಯ ದೃಷ್ಟಿ ಕೋನದಿಂದ ಹಲವಾರು ಯೋಜನೆಗಳನ್ನು ಜಾರಿಗೊಳಿಸಿ ಅವುಗಳ ಮೂಲಕ ಅಭ್ಯುದಯವನ್ನು ಕಾಣುವಂತಹ ಪ್ರಯತ್ನ ಸಾಗಿದೆ.

ಮಹಿಳೆಯರಿಗೆ ಉತ್ತಮವಾದ ಶಿಕ್ಷಣ ಪ್ರಮುಖವಾದುದು ಎಂಬುದು ನನ್ನ ಅಭಿಪ್ರಾಯ. ಇಂಗ್ಲೀಷ್‌ನಲ್ಲಿ ಒಂದು ನಾಣ್ಣುಡಿಯಿದೆ. ಅದೇನೆಂದರೆ, "ಒಬ್ಬ ಪುರುಷನಿಗೆ ಓದು ಬರಹ ಕಲಿಸಿದರೆ ಒಬ್ಬ ವ್ಯಕ್ತಿಗೆ ವಿದ್ಯೆ ಕಲಿಸಿದಂತೆ; ಒಬ್ಬ ಮಹಿಳೆಗೆ ಓದು ಬರಹ ಕಲಿಸಿದರೆ ಒಂದು ಕುಟುಂಬಕ್ಕೆ ವಿದ್ಯೆ ಕಲಿಸಿದಂತೆ" ಹೀಗೆ, ತಾಯಿಯೆ ಪ್ರಥಮ ಗುರು. ಮನೆಯಲ್ಲಿಯೇ ಮೊದಲ ಶಿಕ್ಷಣ ಪ್ರಾರಂಭವಾಗುವುದರಿಂದ ತಾಯಿ, ಓದುಬರಹ ಕಲಿತಿರಬೇಕು. 'ಮಹಿಳೆಯರು ಸಶಕ್ತರಾಗುವುದಕ್ಕೆ, **ಶಿಕ್ಷಣ** ಅನುಕೂಲ ಮಾಡಿಕೊಡುತ್ತದೆ ಎಂಬುದನ್ನು ವಿಶ್ವದಾದ್ಯಂತ ಒಪ್ಪಿಕೊಳ್ಳಲಾಗಿದೆ.' ಹೆಣ್ಣು ಮಕ್ಕಳ ವಿಷಯದಲ್ಲಂತೂ ಇದು ಬಹಳ ಮುಖ್ಯ. 'ಹುಡುಗಿ ಓದಿ ಏನಾಗಬೇಕು?' ಎನ್ನುವ ಮನೋಧರ್ಮವೇ ಬಹುಮಟ್ಟಿಗೆ ಕಾಣುತ್ತಿದೆ. ಹಾಗಾಗಿ ಶಿಕ್ಷಣದ ಮಹತ್ವವನ್ನು ಅವರಿಗೆ ತಿಳಿಸಿಕೊಡಬೇಕು. ಮಹಿಳೆಯರಿಗೆ ಶಿಕ್ಷಣವನ್ನು ನೀಡುವಾಗ ಸಾಮಾನ್ಯ ಶಿಕ್ಷಣದ ಜೊತೆಗೆ ವಿಶೇಷವಾದ ಕೆಲವು ಪಠ್ಯಕ್ರಮವನ್ನು ಸೇರಿಸಬೇಕು.

ಉಚಿತ ಶಿಕ್ಷಣವನ್ನು ಉನ್ನತ ಹಂತದವರೆಗೂ ವಿಸ್ತರಿಸಬೇಕು. ಸಾರಿಗೆ ಸೌಲಭ್ಯ, ವಿದ್ಯಾರ್ಥಿ ವೇತನದ ಸೌಲಭ್ಯ, ಸ್ಥಳೀಯ ಮಟ್ಟದಲ್ಲಿಯೇ ಶಾಲಾ-ಕಾಲೇಜುಗಳ ಸೌಲಭ್ಯ, ವಸತಿ ಸೌಲಭ್ಯ, ಶೌಚಾಲಯದ ವ್ಯವಸ್ಥೆ, ವಿಶ್ರಾಂತಿ ಗೃಹಗಳು ಮುಂತಾದ ಮೂಲಭೂತ ಸೌಲಭ್ಯವನ್ನು ಒದಗಿಸುವುದರ ಮೂಲಕ ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಆದ್ಯತೆಯನ್ನು ನೀಡಿ ಅವರ ಸಾಮಾಜಿಕ, ಆರ್ಥಿಕ ಸ್ಥಾನಮಾನವನ್ನು ಅಭಿವೃದ್ಧಿಪಡಿಸಬೇಕು.

ದುಡಿಯುವ ಮಹಿಳೆಯರು ಒಂದು ಕಡೆ ಮನೆ-ಸಂಸಾರ, ಇನ್ನೊಂದು ಕಡೆ ಮಾಲೀಕರು-ಕಛೇರಿ, ಕಾರ್ಖಾನೆ, ಮತ್ತೊಂದು ಕಡೆ ಸಾಮಾಜಿಕ ಜೀವನ. ಹೀಗೆ ಈ ಮೂರು ಕವಲುಗಳನ್ನು ಹಿಡಿದುಕೊಂಡು ಸಾಗಬೇಕಾಗಿದೆ. ಇವುಗಳಲ್ಲಿ ಯಾವುದರಿಂದ ಕಳಚಿಕೊಂಡರೂ ಮಧ್ಯದ ಕವಲಿನಿಂದ ಕಳಚಿಕೊಳ್ಳುವ ಹಾಗೆಯೇ ಇಲ್ಲಿ. ಏಕೆಂದರೆ, ಜೀವನಕ್ಕೆ ಆಧಾರವಾಗಿರುವ ಕವಲು; ಆ ಕವಲೇ ಮುರಿದು ಹೋದರೇ ಉಳಿದ ಎರಡು ಕವಲುಗಳು ನಿರ್ಜಿವ ವಸ್ತುಗಳಂತೆ ಆಗಿ ಬಿಡುತ್ತವೆ. ಆದ್ದರಿಂದ ಈ ಮೂರು ಕವಲುಗಳನ್ನು ಬಹಳ ಜಾಣ್ಮೆಯಿಂದ ಸಮತೋಲನವಾಗಿ ಕಾಪಾಡಿಕೊಂಡು ಹೋಗ ಬೇಕಾಗಿದೆ.

ಮಹಿಳಾ ಸಬಲೀಕರಣ, ಸಶಕ್ತೀಕರಣಗಳ ಬಗ್ಗೆ ಮಾತನಾಡುತ್ತೇವೆ. ಹೀಗೆ ಮಾತನಾಡುವ ಸಂದರ್ಭದೊಳಗೆ ಹಲವಾರು ರೀತಿಯ ಶೋಷಣೆಗಳು, ದೌರ್ಜನ್ಯಗಳು, ತಾರತಮ್ಯಗಳು ನಡೆಯುತ್ತಲೇ ಇವೆ. ಆದರೂ, ನಮ್ಮ ಮಹಿಳೆಯರ, ದುಡಿಯುವ ಮಹಿಳೆಯರ ಸ್ಥಿತಿ ಬದಲಾಗುತ್ತಿದೆ, ಸುಧಾರಿಸುತ್ತಿದೆ ಎಂಬ ಆಶಾಭಾವನೆಯನ್ನು ಇಟ್ಟುಕೊಂಡಿದ್ದೇನೆ. ಒಟ್ಟಿನಲ್ಲಿ ಮಹಿಳೆಯರ ಸ್ಥಿತಿಗಳನ್ನು ಸುಧಾರಿಸಬೇಕಾದರೆ ನಮ್ಮೊಳಗಿನ 'ವ್ಯವಸ್ಥೆ' ಸರಿಯಾಗಬೇಕು. ತಮ್ಮ ಹಕ್ಕುಬಾಧ್ಯತೆಗಳನ್ನು ಕೇಳುವ ಹಾಗೂ ಪಡೆದು ಕೊಳ್ಳುವ ದಿಕ್ಕಿನಲ್ಲಿ ದಿಟ್ಟ ಹೆಜ್ಜೆಗಳನ್ನು ಇಡಬೇಕಾಗಿದೆ.

ಮಹಿಳಾ ಸಮ್ಮೇಳನಗಳು, ಮಹಿಳಾ ದಿನಾಚರಣೆಗಳು, ಮಹಿಳೆಯರ ಸಮಸ್ಯೆಗಳನ್ನು ಕುರಿತು ಮಾತನಾಡುವಂತಹ ವಾತಾವರಣವನ್ನು ಸೃಷ್ಟಿಮಾಡಿಕೊಂಡಿವೆ. ಇಂತಹ ವೇದಿಕೆಗಳು ಸಮಾಜದ, ಸರ್ಕಾರದ, ಸಂಘ-ಸಂಸ್ಥೆಗಳ ಗಮನವನ್ನು ಸೆಳೆದಿವೆ. ಇವುಗಳ ಜೊತೆಗೆ ಸರ್ಕಾರ, ಮಹಿಳೆಯರ ಅಭ್ಯುದಯಕ್ಕೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಪಡಿಸಿಕೊಂಡು ಆ ಮೂಲಕ ಮಹಿಳೆಯರ ಅಭ್ಯುದಯವನ್ನು ಸಾಧಿಸಬೇಕಾಗಿದೆ. ನೂರಾರು ವರ್ಷಗಳಿಂದ ನಡೆಯುತ್ತಾ ಬಂದಿರುವ ಮಹಿಳಾ ಶೋಷಣೆಯು ಈ ಇಪ್ಪತ್ತೈದು ವರ್ಷಗಳಲ್ಲಿ ನಿಲ್ಲಿಸಲು ಸಾಧ್ಯವಾಗಿಲ್ಲ ನಿಜ. ಆದರೆ ಆ ಬಗ್ಗೆ ಅನೇಕ ಗಮನಾರ್ಹ ಸುಧಾರಣೆಗಳನ್ನು ಮಾಡಿ ಒಂದು ಆಂದೋಲನಕ್ಕೆ ದಾರಿಯಾಗಿರುವುದಂತೂ ಸತ್ಯ.

ದುಡಿಯುವ ಮಹಿಳೆಯರು ತಾನು ಕೆಲಸ ಮಾಡುವ ಕಾರ್ಖಾನೆ, ಕಛೇರಿಗಳಲ್ಲಿ ಇನ್ನಿತರ ವಲಯಗಳಲ್ಲಿ ಕೆಲಸದಲ್ಲಿ ಕೆಲವು ಬದಲಾವಣೆಗಳನ್ನು ಬಯಸುತ್ತಿರುವುದು ಒಂದು ವಿಶೇಷ. ಆ ಬದಲಾವಣೆಗಳು ಸಾಮಾನ್ಯವಾಗಿದ್ದು, ಹೆಚ್ಚು ಕೂಲಿ, ಕಡಿಮೆ ಕೆಲಸದ ಅವಧಿ, ಉನ್ನತ ದರ್ಜೆಯ ಉದ್ಯೋಗ, ಹೆಚ್ಚು ರಜಾ ದಿನಗಳು (ವೇತನ ಸಹಿತ) ಹೀಗೆ ಕೆಲವು ಬದಲಾವಣೆಗಳನ್ನು ಬಯಸಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ದುಡಿಯುವ ಮಹಿಳೆಯರ ಬಗ್ಗೆ ಚಿಂತನೆಯನ್ನು ನಡೆಸಬೇಕಾಗಿದೆ.

'ಕಲಿತ ನಾರಿ ಮನೆಗೆ ದಾರಿ' ಎಂಬಂತೆ ಮಹಿಳೆ ಒಮ್ಮೆ ಚಲಿಸಲು ಪ್ರಾರಂಭಿಸಿದರೆ ಅವಳೊಂದಿಗೆ ಕುಟುಂಬವು ಚಲಿಸುತ್ತದೆ, ಗ್ರಾಮವು ಚಲಿಸುತ್ತದೆ. ಕೊನೆಗೆ ಇಡೀ ದೇಶವೇ ಚಲಿಸುತ್ತದೆ ಎಂದು ಹೇಳಬಹುದು. ಹಾಗಾಗಿ ದೇಶದ ಆರ್ಥಿಕ ಆದಾಯವನ್ನು ಹೆಚ್ಚಿಸುವಲ್ಲಿ ಮಹಿಳೆಯರು ಸಹಾಯಕರಾಗಿದ್ದಾರೆ. "ತೊಟ್ಟಿಲನ್ನು ತೂಗುವ ಕೈ ದೇಶವನ್ನು ಆಳಬಲ್ಲದು" ಎಂದು ಎಲ್ಲರಿಗೂ ಈಗ ಮಹಿಳೆಯರ ಸಾಮರ್ಥ್ಯದಲ್ಲಿ ದೃಢವಾದ ನಂಬಿಕೆ ಬಂದಿದೆ. ಇಂದು ನಾವು ಮಹಿಳೆಯರನ್ನು ವೇದ ಕಾಲದ ದೇವತೆಯರೆಂದು ಪೂಜಿಸುವುದು ಬೇಡ, ಮಧ್ಯಯುಗದಲ್ಲಿಯ ದಾಸಿಯರೆಂದು ಕಿರುಕುಳ ಕೊಡುವುದು ಬೇಡ, ಅವಳು ನಮ್ಮಂತೆ ಮಾನವಳು ಎನ್ನುವುದರ ಮೂಲಕ ಸರಿಸಮಾನವಾದ ಸ್ಥಾನ-ಮಾನಗಳನ್ನು ಕಲ್ಪಿಸಿಕೊಟ್ಟರೆ ಸಾಕು. ಇಂದು ಅಂತಹ ಸ್ಥಾನ-ಮಾನ ಪಡೆಯುವುದು ಮಹಿಳೆಯರ ಹಕ್ಕು. ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಕುವೆಂಪು ರವರು ಹೇಳಿರುವಂತೆ "ಸಂಸಾರ ಸಾಗರದಿ ಗಂಡಿಗೆ ಹೆಣ್ಣು ಕುತ್ತಿಗೆಗೆ ಗುಂಡಲ್ಲ ಬೆನ್ನಿಗೆ ಬೆಂಡು" ಎಂದಿದ್ದಾರೆ. ಈ ಮಾತನ್ನು ಎಲ್ಲರೂ ಅರಿಯುವ ಪ್ರಯತ್ನ ಮಾಡಬೇಕು.

ಸರ್ಕಾರ-ಸಮಾಜ-ದುಡಿಯುವ ವರ್ಗ ಈ ಮೂರು ತಮ್ಮಲ್ಲಿರುವ ಭಿನ್ನತೆಯನ್ನು ಮರೆತು ಐಕ್ಯತೆಯಿಂದ ಕಾರ್ಯ ನಿರತವಾದಾಗ ಮಾತ್ರ ಸಾಮಾಜಿಕ, ಆರ್ಥಿಕ ಪ್ರಗತಿಯನ್ನು ಸಾಧಿಸುವುದರ ಜೊತೆಗೆ ದೇಶದ ಪ್ರಗತಿಯನ್ನು ಸಹ ಕಾಣಬಹುದು. ಇಂದು ಮಹಿಳೆಗೆ ಕೇವಲ ಗೃಹಕೃತ್ಯವೇ ಮೀಸಲಲ್ಲ. ಆಕೆ ಅದರಿಂದ ಹೊರಬಂದು ಸಾಮಾಜಿಕ-ಆರ್ಥಿಕ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯವನ್ನು ತೋರಬೇಕು. ಅದಕ್ಕೆ ಪುರುಷ ಪ್ರಧಾನ ಸಮಾಜ ಸಾಕಷ್ಟು ಪ್ರೋತ್ಸಾಹ ನೀಡಬೇಕು. ಹೆಣ್ಣು-ಗಂಡುಗಳ ಸಾಮರಸ್ಯದ ಬದುಕುವಿಕೆಯಿಂದಲೂ, ಕುಟುಂಬ ವರ್ಗದ ಪ್ರೋತ್ಸಾಹದಿಂದಲೂ ಅವಳ ದುಡಿಮೆಗೆ ಮತ್ತಷ್ಟು ಮೆರಗು ಉಂಟಾಗುತ್ತದೆ. "ಗೃಹಿಣಿ ಗೃಹ ಮುಚ್ಯತೇ" ಎಂಬ ವೇದವಾಕ್ಯ ಇಂದು ಸಾರ್ಥಕಗೊಳ್ಳಬೇಕಾಗಿದೆ.

ಹೆಣ್ಣಿನ ಕರ್ಮಯೋಗದಿಂದ ಸಂಸಾರ ಸಾರ್ಥಕಗೊಳ್ಳುವ ಕ್ಷಣವನ್ನು ಕವಿ ಜಿ.ಎಸ್.ಶಿವರುದ್ರಪ್ಪ ರವರು ತಮ್ಮೊಂದು ಕವಿತೆಯಲ್ಲಿ ಹೀಗೆ ಹಿಡಿದಿಟ್ಟಿದ್ದಾರೆ.

"ಮನೆ ಮನೆಯಲಿ ದೀಪವನು ಹಚ್ಚುವಾಕೆ
ಹೊತ್ತು ಹೊತ್ತಿಗೆ ಅನ್ನ ಉಣಿಸುವಾಕೆ
ತಂದೆ-ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ?
'ಸ್ತ್ರೀ' ಎಂದರೆ ಅಷ್ಟೇ ಸಾಕೆ?"

ಅನುಬಂಧ

ಗ್ರಂಥಋಣ

೧. ಮಹಿಳೆ ಮತ್ತು ಮಾನವತೆ –ಡಾ.ವಿಜಯಾದಬ್ಬೆ

೨. ಮಹಿಳಾ ಅಧ್ಯಯನ ಭಾಗ ೧- ಡಾ.ಎಚ್.ಎಂ.ಹೇಮಲತಾ

೩. ಮಹಿಳಾ ಅಧ್ಯಯನ ಭಾಗ-೨ - ಡಾ.ಎಚ್.ಎಂ.ಹೇಮಲತಾ

೪. ಮಹಿಳಾ ಅಧ್ಯಯನ - ಡಾ.ಎಚ್.ಎಂ.ಹೇಮಲತಾ

ಮಹಿಳೆ ಮತ್ತು ದುಡಿಮೆ –

ಮಹಿಳಾಭಿವೃದ್ಧಿ ಕಾರ್ಯನೀತಿ ಯೋಜನೆಗಳು

೫. ಮಹಿಳೆ ಮತ್ತು ದುಡಿಮೆ –ಡಾ.ಬಿ.ಹೆಚ್.ಆಂಜನಪ್ಪ

೬. ಮಹಿಳಾ ಅಧ್ಯಯನ –ಡಾ.ಎಚ್.ಎಸ್.ಶ್ರೀಮತಿ

೭. ಮಹಿಳೆ : ಬಿಡುಗಡೆಯ ಹಾದಿಯಲ್ಲಿ- ಎನ್.ಗಾಯಿತ್ರಿ .

೮. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ- ಒಂದು ಪ್ರವೇಶಿಕ –ಡಾ.ಡಿ. ಮಂಗಳಾ ಪ್ರಿಯದರ್ಶಿನಿ

೯. ಚಿಪ್ಪೊಡೆದ ಮೌನ- ಡಾ.ಚಂದ್ರಮತಿ ಸೋಂದಾ

೧೦. ಮಹಿಳೆ ದುಡಿಮೆ ಮತ್ತು ಬಿಡುವು- ಸಂಪಾದಕರು – ಡಾ.ಎಚ್.ಎಸ್.ಶ್ರೀಮತಿ
ಡಾ.ಶಿವಾನಂದ ಎಸ್.ವಿರಕ್ತಮಠ
ಡಾ.ಜೆ.ಕೃಷ್ಣ

೧೧. ಮಹಿಳೆಯರ ಮಾನಸಿಕ ಅಸ್ವಸ್ಥತೆಗಳು – ಡಾ.ಸಿ.ಆರ್.ಚಂದ್ರಶೇಖರ್

೧೨. ಮಹಿಳೆ : ಆರ್ಥಿಕತೆ ಮತ್ತು ಅಭಿವೃದ್ಧಿ- ಟಿ.ಆರ್.ಚಂದ್ರಶೇಖರ.

೧೩. ಭೂಮಿ ತೂಕದ ಕಣ್ಣೀರು - ಶಿವರಾಮು ಕಾಡನಕುಪ್ಪೆ

(ದುಡಿವ ಮಹಿಳೆ ಕುರಿತ ವೈಚಾರಿಕ ಬರಹ)

೧೪. ಮಹಿಳೆ ಮತ್ತು ಅಭಿವೃದ್ಧಿ- ಡಾ.ಸಿ.ಕೆ.ರೇಣುಕಾಚಾರ್ಯ

೧೫. ಮಹಿಳೆ ಮತ್ತು ಕಾನೂನು – ವಿ.ಹೆಚ್.ಗೌಡ.

೧೬. ಮಹಿಳೆ- ಉದ್ಯೋಗ-ಸಮಾಜ-ಗೌರೀತನಯ.